3. ನಿಯಮ 69ರ ಮೇರೆಗೆ

ಅ) ರಾಜ್ಯದಲ್ಲಿ ಉಂಟಾಗುತ್ತಿರುವ ಕುಡಿಯುವ ನೀರಿನ ಸಮಸ್ಯೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷ ನಾಯಕರು): ಮಾನ್ಯ ಅಧ್ಯಕ್ಷರೇ, ಈ ಒಂದು ಕುಡಿಯುವ ನೀರಿನ ಸಮಸ್ಯೆ ಬೇರೆ ಬೇರೆ ಭಾಗದಲ್ಲಿ ತಲೆದೋರಿದ್ದು ಜನ ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದು, ಈ ಒಂದು ಗಂಭೀರವಾದ ವಿಷಯವನ್ನು ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನಾನು ಮೊದಲು ತಮಗೆ ವಂದಿಸುತ್ತೇನೆ. ಇವೊತ್ತು ರಾಜ್ಯದಲ್ಲಿ ಬೇಸಿಗೆ ಕಾಲ ಬರುತ್ತಾ ಇದೆ. ಬೇಸಿಗೆ ಪ್ರಾರಂಭವಾದ ಈ ಹಂತದಲ್ಲಿ ನಾವು ಪ್ರತಿನಿತ್ಯವೂ ಪತ್ರಿಕೆಗಳಲ್ಲಿ ಈ ಕುರಿತ ಸುದ್ದಿಗಳನ್ನು ನೋಡುತ್ತಿದ್ದೇವೆ. ಕೋಲಾರ, ಬೀದರ್, ರಾಯಚೂರು, ಗುಲ್ಬರ್ಗ, ಬಳ್ಳಾರಿ, ಬಿಜಾಪುರ ಮುಂತಾಗಿ ಯಾವುದೇ ಜಿಲ್ಲೆಗಳು ಇರಬಹುದು, ಹೀಗೆ ಪ್ರತಿಯೊಂದು ಜಿಲ್ಲೆಗಳಲ್ಲಿ, ಪಟ್ಟಣ ಪ್ರದೇಶ ಹಾಗೂ ನಗರ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ, ಹೀಗೆ ಎಲ್ಲಾ ಪ್ರದೇಶಗಳಲ್ಲಿಯೂ ಜನರು ಕುಡಿಯುವ ನೀರಿನ ವಿಚಾರದಲ್ಲಿ ತೊಳಲಾಡುತ್ತಾ ಇದ್ದಾರೆ. ಕೆಲವೊಂದು ಗ್ರಾಮಾಂತರ ಪ್ರದೇಶಗಳಲ್ಲಿ ಬಹುಶಃ 5-10 ಕಿ.ಮೀ.ಗಳಷ್ಟು ದೂರದತನಕ ಹೋಗಿ ನೀರು ತೆಗೆದುಕೊಂಡು ಬರುವ ಸ್ಥಿತಿ ನಿರ್ಮಾಣವಾಗಿದೆ. ಇದೇ ಪರಿಸ್ಥಿತಿಯು ಮುಂದುವರಿದರೆ, ಇವೊತ್ತು ದೇಶದ ಗುಜರಾತ್ ಮತ್ತು ರಾಜಸ್ಥಾನ ಮುಂತಾದ ಕಡೆಗಳಲ್ಲಿ ಯಾವ ರೀತಿಯಾಗಿ ಬರ ಬಂದಿದೆ. ಅಲ್ಲಿನ ಜನರು ಯಾವ ರೀತಿಯಲ್ಲಿ ನೀರಿಗಾಗಿ ಪರಿತಪಿಸುತ್ತಾ ಇದ್ದಾರೆ, ಹನಿ ನೀರಿಗಾಗಿ ಅವರು ಪರಿತಪಿಸುತ್ತಿದ್ದಾರೆ, ಅದೇ ಪರಿಸ್ಥಿತಿಯು ನಮ್ಮ ಕರ್ನಾಟಕದಲ್ಲಿಯೂ ಬರಬಹುದು. ಆದ್ದರಿಂದ ನಾವು ಮುನ್ನೆಚ್ಚರಿಕೆಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಬರಪಿಡಿತ ರಾಜ್ಯಗಳಂತೆ ನಮ್ಮ ಪರಿಸ್ಥಿಯು ಆಗುವ ವಾತಾವರಣ ಉಂಟಾಗುತ್ತದೆ. ಮೊನ್ನೆ ''ಇಂಡಿಯನ್ ಎಕ್ಸ್‌ಪ್ರೆಸ್'' ಪತ್ರಿಕೆಯಲ್ಲಿ ಬಂದ ಆ ಸುದ್ದಿಯು ನೀರಿನ ಅಭಾವ ಎಂಥ ಪರಿಸ್ಥಿತಿಯನ್ನು ತಂದೊಡ್ಡಿದೆ ಎಂದು ತೋರಿಸುತ್ತಿತ್ತು. ಅಲ್ಲಿನ ಒಂದು ತೆರೆದ ಬಾವಿಯಲ್ಲಿ ಒಬ್ಬ ಮಹಿಳೆಯನ್ನು ಕೊಡದೊಂದಿಗೆ ಕೆಳಗೆ ಇಳಿಸುತ್ತಿದ್ದಾರೆ. ಆಕೆಯು ಕೆಳಗೆ ಹೋಗಿ ನೀರು ತುಂಬಿಕೊಂಡು ಮೇಲೆ ಬರಬೇಕು. ಅಂದರೆ ತಮ್ಮ ಜೀವವನ್ನು ಪಣಕ್ಕೆ ಒಡ್ಡಿ ನೀರು ಪಡೆಯಬೇಕಾದಂಥ ಸ್ಥಿತಿಯು ರಾಜಾಸ್ಥಾನದ ಹಳ್ಳಿಯಲ್ಲಿ ಬಂದುದು ನಮಗೆ ವ್ಯಕ್ತವಾಗುತ್ತದೆ. ಅಂಥ ಪರಿಸ್ಥಿತಿಯು ನಮ್ಮ ಕರ್ನಾಟಕದ ಯಾವುದೇ ಭಾಗದಲ್ಲಿ ಉಂಟಾಗಬಾರದು. ಹನಿ ನೀರಿಗಾಗಿ ನಮ್ಮ ಜನರು ಪರಿತಪಿಸುವಂತಾಗಬಾರದು. ದಿನನಿತ್ಯವೂ ನಾವು ಪತ್ರಿಕೆಗಳಲ್ಲಿ ನೀರಿಗಾಗಿ ಬವಣೆ ಪಡುತ್ತಿರುವುದನ್ನು ನೋಡುತ್ತಿದ್ದೇವೆ. ಬೀದರ್ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಗೆ ಮಾನ್ಯ ಡಾ: ಮಲಕರೆಡ್ಡಿಯವರು ಹೋಗಿದ್ದರು. ಜಿಲ್ಲೆಯ ಪ್ರತಿಯೊಂದು ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಬಗ್ಗೆ ಇದ್ದ ಸಮಸ್ಯೆಗಳನ್ನು ಸ್ಥಳೀಯ

ಶಾಸಕರುಗಳು ಗಮನಕ್ಕೆ ತಂದಿದ್ದರು. ''ಕುಡಿಯುವ ನೀರಿನ ವ್ಯವಸ್ಥೆಯ ತುರ್ತುಕ್ರಮಕ್ಕೆ ಶಾಸಕರ ಆಗ್ರಹ''- ಎಂದು ಪತ್ರಿಕೆಗಳಲ್ಲಿಯೂ ಬಂದಿದೆ. ಬಸವಕಲ್ಯಾಣದಲ್ಲಿ ಶೇಕಡಾ 30ರಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಔರಾದ ಮುಂತಾದ ಪ್ರದೇಶಗಳಲ್ಲಿ ಕೂಡ ಕುಡಿಯುವ ನೀರಿನ ಅಭಾವವಿದ್ದು ಕೊಡ ಒಂದಕ್ಕೆ ಐದು ರೂಪಾಯಿಗಳನ್ನು ಕೊಟ್ಟು ಪಡೆದುಕೊಳ್ಳುತ್ತಿದ್ದಾರೆ. ಹುಲಸೂರು ಮುಂತಾಗಿ ಬೀದರ್ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಈ ಸಮಸ್ಯೆಯು ತಲೆದೋರಿದೆ. ನಮ್ಮ ಸಚಿವ ಸಂಪುಟದ ಆರು ಜನ ಸದಸ್ಯರು ಗುಲ್ಬರ್ಗ ಜಿಲ್ಲೆಯವರು ಇದ್ದಾರೆ. ಆದರೆ ಮೊನ್ನೆ ಕನ್ನಡ ಪ್ರಭದಲ್ಲಿ ಬಂದ ಸುದ್ದಿ ಏನೆಂದರೆ ''ಸಚಿವರ ಕ್ಷೇತ್ರದಲ್ಲಿ ನೀರಿಗೆ ಬರ'' - ''ಕೆಂಡದ ನೆಲದಲ್ಲಿ ನೀರಿಗಾಗಿ ಹಾಹಾಕಾರ'' - ನಮ್ಮ ಮಾನ್ಯ ಲೋಕೋಪಯೋಗಿ ಸಚಿವರ ಕ್ಷೇತ್ರವಾದ ಜೇವರ್ಗಿಯಲ್ಲಿ ಬರುವ ನೆಲವಗಿ ಎಂಬ ಊರು ಇದೆ. ಅದು ಸಚಿವರ ಸ್ವಂತ ಊರು. ಅಲ್ಲಿ ಇವೊತ್ತು 3-4 ಕಿ.ಮೀ. ತನಕ ಹೋಗಿ ನೀರು ತರುವಂಥ ಪರಿಸ್ಥಿತಿ ಇದೆ. ಅದೇ ರೀತಿಯಲ್ಲಿ ನಮ್ಮ ಡಾ:ಮಲಕರೆಡ್ಡಿಯವರ ಕ್ಷೇತ್ರ, ಅಲ್ಲಿ ಮೂವತ್ತು ಗ್ರಾಮಗಳು ನೀರಿಗಾಗಿ ಪರಿತಪಿಸುತ್ತಾ ಇವೆ.

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ನೆಲವಗಿ ನನ್ನ ಸ್ವಂತ ಊರು. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಅಷ್ಟು ದೂರ ಹೋಗಿ ನೀರು ತರಬೇಕಾಗಿಲ್ಲ. ಪತ್ರಿಕೆಗಳಲ್ಲಿ ಬರೆದಿರಬಹುದು. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಮೊನ್ನೆ ತಾನೇ ನಾನು ಊರಿಗೆ ಹೋಗಿ ಬಂದಿದ್ದೇನೆ. ಗುಲಬರ್ಗದ ಉಸ್ತುವಾರಿ ಸಚಿವರಿಗೂ ಇದು ಗೊತ್ತಿದೆ ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿ ನೀರನ್ನು ಸಾಗಾಣಿಕೆ ಮಾಡಿ ವಿತರಣೆ ಮಾಡುವುದು ಮುಂತಾಗಿ ಎಲ್ಲಾ ವ್ಯವಸ್ಥೆಗಳನ್ನು ನಾವು ಮಾಡಿದ್ದೇವೆ. ನಾನು ನನ್ನ ಮತದಾರರ ಕ್ಷೇತ್ರವನ್ನು ಕಳೆದ 28 ವರ್ಷಗಳಿಂದ ಪ್ರತಿನಿಧಿಸುತ್ತಾ ಬಂದಿದ್ದೇನೆ. ಜಿಲ್ಲಾ ಪರಿಷತ್ ಚೀಫ್ ಸೆಕ್ರೆಟರಿಯವರ ಹತ್ತಿರ ವಿವರಗಳನ್ನು ಕೇಳಿದ್ದೇನೆ. ಅವರು 40 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಅಲ್ಲಿ ಭೀಮಾ ನದಿ ಹರಿಯುತ್ತದೆ.''

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಧರ್ಮಸಿಂಗ್‌ರವರು ಎಂಎಲ್ಎ ಆಗುವುದಕ್ಕಿಂತ ಮುಂಚೆ ಅಲ್ಲಿ ನೀರಿನ ಸಮಸ್ಯೆ ಇತ್ತು. ಈಗ ಇಲ್ಲ. ಅಲ್ಲಿ ಮೊದಲು ದೂರದಿಂದ ಕೋಣಗಳ ಮೇಲೆ ನೀರು ಹೇರಿಕೊಂಡು ಬರುತ್ತಾ ಇದ್ದರು. ಧರ್ಮಸಿಂಗ್‌ರವರು ಎಂಎಲ್ಎ ಆದಮೇಲೆ ವಾಟರ್‌ಸಪ್ಲೈ ಸ್ಕೀಂನ್ನು ಮಾಡಿ, ಒಳ್ಳೆಯ ರೀತಿಯಲ್ಲಿ ನೀರು ಸರಬರಾಜು ನಡೆಯುತ್ತಿದೆ. ಆ ಊರು ಭೀಮಾ ನದಿ ದಂಡೆಯಲ್ಲಿದೆ.

ಶ್ರೀ ಧರ್ಮಸಿಂಗ್: ಮೊದಲು ನಮ್ಮ ಊರಿಗೆ ಹೊರ ಊರಿನ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡುತ್ತಿರಲಿಲ್ಲ. ಏಕೆಂದರೆ ಊರಲ್ಲಿ ನೀರು ಹೊರಲು ಹೆಣ್ಣು

ಮಕ್ಕಳನ್ನು ಕುಟುಂಬದವರು ಬಳಸಿಕೊಳ್ಳುತ್ತಾರೆ ಎಂದು. ಈಗ ಆ ಪರಿಸ್ಥಿತಿಯು ಇಲ್ಲ. ನೆಲವಗಿ ಮತ್ತು ಕೋಳೂರು ಗ್ರಾಮಕ್ಕೆ ಬೇರೆಯವರು ಹೆಣ್ಣುಮಕ್ಕಳನ್ನು ಕೊಡುತ್ತಿರಲಿಲ್ಲ ಈಗ ಅಲ್ಲಿ ಯಾವ ಸಮಸ್ಯೆಯೂ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇವರು ಎಂಎಲ್‌ಎ ಆದಮೇಲೆ ಗ್ರಾಮಾಂತರಗಳಿಗೆ ನೀರು ಸರಬರಾಜು ಆಯಿತು ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ನಾವು ಎಲ್ಲರೂ ಈ ಬಗ್ಗೆ ನಜೀರ್‌ಸಾಹೇಬ್‌ರವರನ್ನು ಸ್ಮರಿಸಿಕೊಳ್ಳಬೇಕು. ಉಳಿದವರೆಲ್ಲರೂ ಸುಳ್ಳು....

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಧರ್ಮಸಿಂಗ್‌ರವರು ತಮ್ಮ ಊರಲ್ಲಿ ಕುಡಿಯುವ ನೀರಿನ ಸಮಸ್ಯೆಯಿಲ್ಲವೆಂದು ತಿಳಿಸಿದರು. ನಾವು ನಮಗೆ ಬಂದ ಮಾಹಿತಿಗಳನ್ನು ತಮ್ಮ ಮೂಲಕ ಸರಕಾರಕ್ಕೆ ತಿಳಿಸುತ್ತಾ ಇದ್ದೇವೆ. ಅದು ಸರಿ ಇದ್ದರೂ ಇರಬಹುದು ಅಥವಾ ಇಲ್ಲದೆಯೂ ಇರಬಹುದು. ಒಟ್ಟಿನಲ್ಲಿ ನಮ್ಮ ಕಳಕಳಿ ಅಂದರೆ ರಾಜ್ಯದ ನಗರ, ಪಟ್ಟಣ, ಗ್ರಾಮಾಂತರ ಮುಂತಾಗಿ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ತೊಂದರೆ ಇರಬಾರದು. ನಮಗೆ ಸ್ವಾತಂತ್ರ್ಯ ಸಿಕ್ಕಿ 50 ವರ್ಷಗಳ ಮೇಲಾಯಿತು. ನಾವು ಕುಡಿಯುವ ನೀರಿನ ಹಲವಾರು ಯೋಜನೆಗಳನ್ನು ಮಾಡುತ್ತಾ ಇದ್ದೇವೆ. ಇನ್ನೂ ಕೆಲವಾರು ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ. ಅದರಲ್ಲಿಯೂ ಇಂಥ ಬೇಸಿಗೆಯ ಸಮಯದಲ್ಲಿ ಇರುವ ಬೋರ್‌ವೆಲ್‌ಗಳು ಕೆಟ್ಟು ಹೋಗುವುದು, ಅಥವಾ ಇನ್ನಿತರ ವ್ಯವಸ್ಥೆಗಳಲ್ಲಿ ತೊಂದರೆ ಕಂಡುಬರುವುದು ಮುಂತಾಗಿ ಇರುತ್ತದೆ. ಇದರಿಂದಾಗಿ ನೀರಿನ ಬವಣೆ ಉಂಟಾಗುತ್ತದೆ. ಇವೊತ್ತು ನಾವುಗಳು ಪತ್ರಿಕೆಗಳಲ್ಲಿ ಬರುವ ವಿಚಾರಗಳ ಆಧಾರದ ಮೇಲೆ ನಮ್ಮ ಹೇಳಿಕೆಗಳನ್ನು ಮತ್ತು ಮಾಹಿತಿಗಳನ್ನು ಇಲ್ಲಿ ಒದಗಿಸಬೇಕಾಗುತ್ತದೆ. ಸರಕಾರದಿಂದ ಮಾಹಿತಿಗಳನ್ನು ಕೂಡ ನಮಗೆ ಒದಗಿಸಬೇಕಾಗುತ್ತದೆ. ಜಿಲ್ಲಾಧಿಕಾರಿಗಳಿಂದಲೂ ಕೆಲವೊಂದು ಮಾಹಿತಿಗಳನ್ನು ನಾವು ತೆಗೆದುಕೊಂಡಿದ್ದೇವೆ. ಅದರಲ್ಲಿಯೂ ಕೆಲವು ಡಿಸಿಯವರು ಕೊಟ್ಟರು ಕೆಲವರು ಕೊಟ್ಟಿಲ್ಲ. ಸರಕಾರದ ಕಡೆಯಿಂದ ಇರುವ ಮಾಹಿತಿಗಳನ್ನು ಅವರು ಹೇಳಲಿ. ನಮ್ಮ ಹತ್ತಿರವಿರುವ ಮಾಹಿತಿಗಳನ್ನು ನಾವು ಹೇಳುತ್ತೇವೆ. ನಾವು ಪ್ರಸ್ತಾಪಿಸಿದ ಬಗ್ಗೆ ಸರಕಾರದವರು ಉತ್ತರ ಕೊಡಲಿ. ಪತ್ರಿಕೆಯವರು ಕೂಡ ತಮ್ಮ ಪತ್ರಿಕೆಗಳಲ್ಲಿ ಅಲ್ಲಿಯ ಜನರ ಭಾವನೆಗಳನ್ನು ಮತ್ತು ಅಲ್ಲಿರುವಂಥ ಸಮಸ್ಯೆಗಳನ್ನು ಹೇಳುವಂಥ ಕೆಲಸವನ್ನು ಮಾಡುತ್ತಾರೆ. ಹೀಗೆ ಅವರು ಸರಕಾರಕ್ಕೆ ಪತ್ರಿಕೆಯ ಮೂಲಕ ಗಮನಕ್ಕೆ ತರುವುದು, ನಾವು ಇಲ್ಲಿ ಸರಕಾರದ ಗಮನಕ್ಕೆ ತರುವುದು ಮೊದಲಾಗಿ ಎಲ್ಲಾ ಕರ್ತವ್ಯಗಳನ್ನು ನಾವುಗಳು ಮಾಡುತ್ತಾ ಇದ್ದೇವೆ. ಮೊದಲನೆಯದಾಗಿ ಗುಲ್ಬರ್ಗ ಜಿಲ್ಲೆಯು ಬಹಳ ತೊಂದರೆಗೊಳಗಾಗಿರುವ ಜಿಲ್ಲೆಯಾಗಿದೆ. ಬೇಸಿಗೆಯ ಕಾಲ ಬಂದಾಗ ಅಲ್ಲಿ ನೀರಿನ ಸಮಸ್ಯೆಯು ಹೆಚ್ಚಾಗುವುದು ಸಹಜವಾಗಿದೆ. ಅದಕ್ಕಾಗಿ ಸರಕಾರದವರು ಯಾವ ಕ್ರಮಗಳನ್ನು ಜರುಗಿಸಿದ್ದಾರೆ? ಎಂಬುದು ನಮ್ಮ ಪ್ರಶ್ನೆಯಾಗಿದೆ. ರಾಯಚೂರು ಮತ್ತು

ಚಿಕ್ಕಮಗಳೂರು ಜಿಲ್ಲೆಯಲ್ಲಿ 5- 10 ದಿನಗಳ ತನಕ ನೀರೇ ಇಲ್ಲ.

ಶ್ರೀ ಎನ್.ಎಸ್.ಬೋಸರಾಜು: ರಾಯಚೂರು ಜಿಲ್ಲೆಯಲ್ಲಿ ನೀರಿನ ವ್ಯವಸ್ಥೆ ಚೆನ್ನಾಗಿಯೇ ಇದೆ. ಪ್ರತಿನಿತ್ಯವೂ ರಾಯಚೂರಿನಲ್ಲಿ ನೀರು ಸರಬರಾಜು ಇದೆ.

ಶ್ರೀ ಧರ್ಮಸಿಂಗ್: ರಾಯಚೂರು ಜಿಲ್ಲೆ ಮತ್ತು ಇತರ ಕೆಲವು ಜಿಲ್ಲೆಗಳಲ್ಲಿ ಬೇಸಿಗೆ ಕಾಲದಲ್ಲಿ ಎಷ್ಟೇ ವ್ಯವಸ್ಥೆ ಮಾಡಿದರೂ ಕೂಡ ಕುಡಿಯುವ ನೀರಿನ ಹಾಹಾಕಾರ ಬಂದೇ ಬರುತ್ತದೆ. ನಾವು ಎರಡು ತಿಂಗಳ ಹಿಂದೆಯೇ ಈ ಕುರಿತು ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಪಿಟ್‌ವೆಲ್ಸ್ ಮಾಡುವುದು, ಬೋರ್‌ವೆಲ್ ಮಾಡುವುದು, ಮುಂತಾದ ನೀರು ಸರಬರಾಜಿನ ಬಗ್ಗೆ ಎಲ್ಲಾ ಶಾಸಕರ ಜೊತೆಗೆ ಸಮಾಲೋಚನೆ ಮಾಡಿ, ಎಲ್ಲಾ ಕಡೆಗಳಲ್ಲಿ ಆ ಕೆಲಸಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಪತ್ರಿಕೆಗಳವರು ಎಲ್ಲಾ ಕಡೆಗಳಲ್ಲಿ ಬಂದಿರುವ ನೀರಿನ ಸಮಸ್ಯೆಗಳ ಬಗ್ಗೆ ಹೇಳಿರಬಹುದು. ಸರಕಾರದವರು ಈ ಬಗ್ಗೆ ಮುಂಚಿತವಾಗಿ ಸೂಕ್ತ ಕ್ರಮಗಳನ್ನು ರೂಪಿಸಿಕೊಂಡಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯದಲ್ಲಿ ಕುಡಿಯುವ ನೀರಿನ ಹಾಹಾಕಾರ ಎದ್ದಿದೆ ಎಂದು ಹೇಳುತ್ತಿದ್ದಾರೆ. ಈಗ ರಾಯಚೂರು ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಹಾಗೂ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಅಲ್ಲೇನೂ ಸಮಸ್ಯೆ ಇಲ್ಲ. ಈಗಾಗಲೇ ಒಂದು ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆ ಕೆಲವು ಮಾತ್ರ ಪ್ರಾಬ್ಲಮ್ಯಾಟಿಕ್ ವಿಲೇಜಸ್ ಇದೆ ಎನ್ನುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕರೂ ಸಹಿತ ಸಮಸ್ಯೆ ಇಲ್ಲ ಎನ್ನುತ್ತಿದ್ದಾರೆ. ನಾವು ಹೇಳುತ್ತಿರತಕ್ಕದ್ದು ನೀರಿನ ಅಭಾವ ಇದೆ ಎಂದು. ನಮ್ಮ ವಾದ ಏನು ಇದೆ? ಖಂಡಿತವಾಗಿಯೂ ರಾಜ್ಯದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ ಎನ್ನತಕ್ಕದ್ದು ನಮ್ಮ ವಾದ. ಒಂದು ಕೆಲಸ ಮಾಡೋಣ. ಈಗ ಸರ್ಕಾರ ಎಷ್ಟು ಹಣವನ್ನು ಯಾವ್ಯಾವ ಜಿಲ್ಲೆಗಳಿಗೆ ಕಳೆದ ಮೂರು ತಿಂಗಳಲ್ಲಿ ಬಿಡುಗಡೆ ಮಾಡಿದೆ? ಜಿಲ್ಲಾವಾರು, ತಾಲ್ಲೂಕುವಾರು ಎಷ್ಟು ಕೆಲಸ ಪ್ರಾರಂಭ ಆಗಿದೆ ಎಂದು ಒಂದು ಸ್ಟೇಟ್‌ಮೆಂಟ್ ಅನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಮತ್ತು ಮಾನ್ಯ ಪಟ್ಟಣ ಪ್ರದೇಶದ ಮಂತ್ರಿಗಳು ಒಂದು ಹೇಳಿಕೆ ಕೊಡಲಿ. ಆಮೇಲೆ ಬೇಕಾದರೆ ನಮ್ಮ ಚರ್ಚೆಯಲ್ಲಿ ಹೇಳುತ್ತೇವೆ. ಅದರಿಂದ ಬಹಳ ಪ್ರಾಬ್ಲಮ್ ಇದೆ. ಇವರ ಹೇಳಿಕೆಗಳು ಬೇರೆ. ಅಲ್ಲಿ ಕೆಲಸ ಆಗುತ್ತಿರತಕ್ಕದ್ದು ಬೇರೆ. ಜನ ನೀರಿಗೋಸ್ಕರ ಕಣ್ಣೀರು ಇಡುತ್ತಿದ್ದಾರೆ. ಕಣ್ಣೀರು ಹಾಕುತ್ತಿದ್ದಾರೆ, ಕುಡಿಯುವ ನೀರು ಇಲ್ಲ. ಕೋಲಾರ ಜಿಲ್ಲೆಯಲ್ಲಿ ಎಂತಹ ಪರಿಸ್ಥಿತಿ ಇದೆ ಎನ್ನುವುದು ತಮ್ಮ ಕಣ್ಮುಂದೆಯೇ ಇದೆ. ದಯಮಾಡಿ ಸರ್ಕಾರ ಸ್ಟೇಟ್‌ಮೆಂಟ್ ಕೊಡಲಿ. ಸ್ಟೇಟ್‌ಮೆಂಟ್‌ನಿಂದ ಫೆಲಿಸಿಟೇಟ್ ಆಗುತ್ತದೆ. ಏನು ಪ್ರಪೋಸಲ್ ಆರ್‌ಡಿಪಿಆರ್ ಡಿಪಾರ್ಟ್‌ಮೆಂಟಿಗೆ ಬಂದಿತ್ತು? ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿಗೆ ಏನು ಪ್ರೊಪೋಸಲ್ ಡಿಸಿಗಳ ಕಡೆಯಿಂದ ಬಂದಿದೆ? ಎಷ್ಟು

ದುಡ್ಡು ನೀವು ರಿಲೀಸ್ ಮಾಡಿದ್ದೀರಿ? ಮಿನಿ ವಾಟರ್ ಸಪ್ಲೈಗೆ ಎಷ್ಟು ಬಂದಿದೆ? ಇದನ್ನು ತಾವು ಹೇಳಿ ನಾವು ಆಮೇಲೆ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರು ಹೇಳಿರುವುದರಲ್ಲಿ ನ್ಯಾಯ ಇದೆ. ಸ್ಟೇಟ್‌ಮೆಂಟನ್ನು ಮೊದಲೇ ಕೊಟ್ಟರೆ ಅನುಕೂಲ ಆಗಬಹುದು.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇನ್ನೊಂದು ಕೆಲಸವನ್ನು ಮಾಡಲಿ. ಕಾಂಗ್ರೆಸ್‌ನವರೆಲ್ಲಾ ಇಡೀ ರಾಜ್ಯ ಸುಭಿಕ್ಷ ಆಗಿದೆ, ನಮ್ಮ ರಾಜ್ಯದಲ್ಲಿ ಎಲ್ಲೂ ನೀರಿನ ಅಭಾವ ಇಲ್ಲ ಎಂದು ಒಪ್ಪಿ ಬಿಟ್ಟರೆ ಸಾಕು. ನಾವು ಚರ್ಚೆ ಮಾಡುವುದಿಲ್ಲ, ನಿಲ್ಲಿಸುತ್ತೇವೆ.

ಅಧ್ಯಕ್ಷರು: ಕಾಂಗ್ರೆಸ್ ಪಕ್ಷ ಎಂಬ ಪ್ರಶ್ನೆ ಇಲ್ಲ. ಆಯಾಯ ಕ್ಷೇತ್ರದ ಸದಸ್ಯರು ಒಪ್ಪಿಕೊಳ್ಳಬೇಕು. ಕಾಂಗ್ರೆಸ್‌ನವರು ಒಪ್ಪಿಕೊಳ್ಳಬೇಕು ಎಂಬ ಪ್ರಶ್ನೆ ಬರುವುದಿಲ್ಲ.

ಶ್ರೀ ಶಿವಾನಂದ ಪಾಟೀಲ್: ಬೇರೆ ಬೇರೆ ಜಿಲ್ಲೆಯಲ್ಲಿ ಬೇರೆ ಬೇರೆ ತರಹದ ಸಮಸ್ಯೆಗಳು ಇದ್ದಾವೆ. ದಯಮಾಡಿ ಡಿಸ್ಕಷನ್ ಮಾಡಲಿ. ಏಕೆಂದರೆ ಕೆಲವು ಕಡೆ ದುಡ್ಡು ಇದ್ದೂ ಅಧಿಕಾರಿಗಳು ಕೆಲಸ ಮಾಡಿಲ್ಲ. ಅದರ ಬಗ್ಗೆ ಅವರೇನು ಉತ್ತರ ಕೊಡುತ್ತಾರೆ, ಆಮೇಲೆ ಕೊಡಲಿ.

ಅಧ್ಯಕ್ಷರು: ಈಗ ನಮ್ಮ ಮುಂದೆ ಇನ್ನೊಂದು ಪ್ರಶ್ನೆ ಇದೆ. ಇದರ ಮೇಲೆ ನಾವು ಎಷ್ಟು ಸಮಯ ಎಂದು ಫಿಕ್ಸ್ ಮಾಡಬೇಕು, ಎಷ್ಟು ಜನ ಮಾತನಾಡಬೇಕು. ಒಂದು ಅಂದಾಜಿನ ಮೇಲೆ ನಿಗದಿ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾವು ಬೇರೆ ಬೇರೆ ವಿಷಯಗಳಿಗೆ ಸಮಯ ಫಿಕ್ಸ್ ಮಾಡಿಕೊಳ್ಳಬಹುದು. ಆದರೆ ಇದು ಬಹಳ ಮಹತ್ವದ ವಿಷಯ. ಇದಕ್ಕೆಲ್ಲಾ ತಾವು ಸಮಯ ನಿಗದಿ ಮಾಡಬೇಡಿ. ಬೇಕಾದರೆ ಬೇಡಿಕೆಯಲ್ಲಿ ವಿಷಯಗಳನ್ನು ಬಿಡಿ. ನಂತರ ಮಾತನಾಡೋಣ. ಅದಕ್ಕೆಲ್ಲಾ ಬೇಕಾದಷ್ಟು ಅವಕಾಶ ಇದೆ. ಇಂತಹ ವಿಷಯಗಳ ಬಗ್ಗೆ ತಾವು ದಯವಿಟ್ಟು ಸಮಯ ನಿಗದಿ ಮಾಡಬೇಡಿ ಎಂದು ಹೇಳಿ ನಮ್ಮ ವಿನಂತಿ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಒಂದು ಕ್ಷೇತ್ರದ್ದು, ತಾಲ್ಲೂಕಿನದು, ಜಿಲ್ಲೆಯದು, ರಾಜ್ಯದ್ದು, ಪರಿಹಾರ, ಕೆಇಬಿ, ಪವರ್ ಸಪ್ಲೈ ಇವನ್ನೆಲ್ಲಾ ಚರ್ಚೆ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಆರ್‌ಡಿಪಿಆರ್ ಬಗ್ಗೆ ಬೇಡಿಕೆ ಮೇಲೆ ಮಾತನಾಡಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ರೂಲ್ಸ್ ಪ್ರಕಾರವೇ ಹೋಗೋಣ. ರೂಲ್ಸ್ ಪ್ರಕಾರ ಹೋದಾಗ ಹೆಲ್ಡ್ ಓವರ್ ಕ್ವೆಶ್ಚನ್ಸ್ ಅವತ್ತಿನದು ಅವತ್ತೇ ಆಗಬೇಕು ಎನ್ನುವುದು ತಮಗೆ

ಗೊತ್ತಿದೆ. ಆದರೂ ಸಹಿತ ತಮ್ಮ ಪವರ್ಸ್ ಅನ್ನು ತಾವು ಉಪಯೋಗಿಸಿ ಹೆಲ್ಡ್ ಓವರ್ ಪ್ರಶ್ನೆಗಳನ್ನೆಲ್ಲಾ ಪೋಸ್ಟ್ ಪೋನ್ ಮಾಡಿದ್ದೀರಿ.

ಅಧ್ಯಕ್ಷರು: ಲ್ಯಾಪ್ಸ್ ಆಗಿಲ್ಲವಲ್ಲ. ಪೋಸ್ಟ್ ಪೋನ್ ಮಾಡಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಮ್ಮ ಪರಮಾಧಿಕಾರವನ್ನು ಉಪಯೋಗಿಸಿ ಪೋಸ್ಟ್‌ಪೋನ್ ಮಾಡಿದ್ದೀರಿ. ಸರಿ ಒಪ್ಪುತ್ತೇವೆ. ಪ್ರಶ್ನೆ ಏನು ಇದೆ? ಎರಡು ಪ್ರಮುಖವಾದ ಪ್ರಶ್ನೆಗಳು ಚರ್ಚೆ ಆಗಬೇಕು ಎಂದು ಹೇಳಿ ಕಳೆದ ಒಂದು ವಾರದಿಂದ ಚರ್ಚೆ ಆಯಿತು. ಒಂದು ಈ ರಿಸರ್ವೇಷನ್ ಮಾಡುತ್ತಾ ಇರತಕ್ಕದ್ದು- ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಗೆಅದು ಪೊಲಿಟಿಕಲ್ ವಿಚಾರ ಆಯಿತು. ಕುಡಿಯುವ ನೀರು ಜ್ವಲಂತವಾದ ಸಮಸ್ಯೆ ಇದೆ. ಇದರ ಬಗ್ಗೆ ವ್ಯಾಪಕವಾದ ಚರ್ಚೆ ಆಗಬೇಕು.

ಅಧ್ಯಕ್ಷರು: ಚರ್ಚೆ ಮಾಡಕೂಡದು ಎಂದು ಹೇಳಲಿಲ್ಲ. ಎಷ್ಟು ಸಮಯ ನಿಗದಿ ಮಾಡಬಹುದು ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಎಲ್ಲರೂ ಮಾತನಾಡಬೇಕು. ಆಡಳಿತ ಪಕ್ಷದವರೇ ನಮಗಿಂತ ಹೆಚ್ಚಾಗಿ ಬಹಳ ಮಾತನಾಡುವುದು ಇದೆ.

ಅಧ್ಯಕ್ಷರು: ಒಂದು ಕೆಲಸ ಮಾಡೋಣ. ಗ್ರಾಮೀಣಾಭಿವೃದ್ಧಿ ಬೇಡಿಕೆ ಇವತ್ತು ಹಾಕಿಕೊಂಡಿದ್ದೇವೆ. ಜೊತೆಯಲ್ಲಿಯೇ ಎರಡನ್ನೂ ಮಿಕ್ಸ್ ಮಾಡಬಹುದು.

(ಗೊಂದಲ)

ಶ್ರೀ ಜಗದೀಶ್ ಶಟ್ಟರ್: ಇವತ್ತು ನಿಯಮ 69ರ ಮೇಲೆ ಚರ್ಚೆ ಇಟ್ಟುಕೊಂಡು ನಾವು ಸ್ಟಾರ್ಟ್ ಮಾಡಿದ್ದೇವೆ. ಏಕೆ ಈ ಸಮಯ ನಿಗದಿ ಎಂದು ನಮಗೆ ಗೊತ್ತಾಗುತ್ತಿಲ್ಲ. ಬಾಗೇಪಲ್ಲಿಯಲ್ಲಿ ಸಮಸ್ಯೆ ಇದೆ. ಕೋಲಾರ ಜಿಲ್ಲೆಯಲ್ಲಿ ಸಮಸ್ಯೆ ಇದೆ. ಕೋಲಾರ ಜಿಲ್ಲೆಯ ನಂತರ ತಮ್ಮ ಜಿಲ್ಲೆಯ ಸಮಸ್ಯೆ ಬಗ್ಗೆ ಮಾನ್ಯ ಶ್ರೀನಿವಾಸಗೌಡರು ಪ್ರಸ್ತಾಪ ಮಾಡಿದರು. ಅಲ್ಲಿ ಸಹ ಸಮಸ್ಯೆ ಇದೆ. ಕೋಲಾರ ನಗರ ಇರಬಹುದು, ಕೋಲಾರ ಜಿಲ್ಲೆ ಇರಬಹುದು. ಅಲ್ಲೂ ಸಹಿತ ಇವತ್ತು ಕುಡಿಯುವ ನೀರಿನ ಹಾಹಾಕಾರ ಇದೆ. ಅಲ್ಲಿ ಲೋಕಲ್ ಸಮಸ್ಯೆ ಇರಬಹುದು, ಈ ರೀತಿ ಅಲ್ಲಿ ಅದಕ್ಕೆ ಪರಿಹಾರ ಮಾಡುವಂತಹ ಬಗ್ಗೆ ತೀವ್ರಗತಿಯಿಂದ ಏನೂ ಆಕ್ಷನ್ ತೆಗೆದುಕೊಳ್ಳಲಿಲ್ಲ. ಹೀಗಾಗಿ ಪ್ರತಿನಿತ್ಯ ಅಲ್ಲಿ ಜನರಿಗೆ ತೊಂದರೆ ಆಗುತ್ತಿದೆ. ಚಾಮರಾಜನಗರದಲ್ಲಿ ಕುಡಿಯುವ ನೀರಿಗೆ ತೊಂದರೆ ಪ್ರಾರಂಭ ಆಗಿದೆ. ನಮ್ಮ ಬೆಂಗಳೂರು ನಗರದಲ್ಲಿ ಸಹ ಕುಡಿಯುವ ನೀರಿಗೆ ಹಾಹಾಕಾರ. ಆಮೇಲೆ ಬೆಂಗಳೂರು ಗ್ರಾಮಾಂತರದಲ್ಲಿ ಇವತ್ತು ಕುಡಿಯುವ ನೀರಿಗೆ ಹಾಹಾಕಾರ ಇದೆ.

ರಾಯಚೂರ್ ಜಿಲ್ಲೆಯ ಪ್ರತಿ ಒಂದು ತಾಲ್ಲೂಕಿನಲ್ಲಿ ಸಮಸ್ಯೆ ಇದೆ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮಸ್ಯೆ ಇದೆ. ಆಮೇಲೆ ಇವತ್ತು ನಮ್ಮ ಹಾವೇರಿ ನಗರ, ಹಾವೇರಿ ಜಿಲ್ಲೆಯಲ್ಲಿ ಸಮಸ್ಯೆ ಇದೆ. ಇವತ್ತು ಹಾವೇರಿಯಲ್ಲಿ ಹಣ ಕೊಟ್ಟು ಒಂದೊಂದು ಕೊಡ ನೀರನ್ನು ಹೊತ್ತುಕೊಂಡು ಬರುವಂತಹ ಪರಿಸ್ಥಿತಿ ಇದೆ. ಆರಾರು ಕಿಲೋಮೀಟರ್, ಹತ್ತು ಕಿಲೋ ಮೀಟರ್ ಹೋಗಿ ಒಂದೊಂದು ಕೊಡ ನೀರು ತರುವಂತಹ ಪರಿಸ್ಥಿತಿ ಇದೆ. ಈ ರೀತಿ ಒಂದು ಚಿಂತಾಜನಕ ಸ್ಥಿತಿ ಇದೆ. ಹಾವೇರಿ ಜಿಲ್ಲೆಯಲ್ಲಿ ಸಂಪೂರ್ಣ ಸಮಸ್ಯೆ ಇದೆ. ಆಮೇಲೆ ಹುಬ್ಬಳ್ಳಿ ಧಾರವಾಡ ನಗರದಲ್ಲಿರಬಹುದು, ಮತ್ತು ಬೇರೆ ಬೇರೆ ನಗರಗಳಲ್ಲಿ ಇರಬಹುದು, ಬೆಂಗಳೂರು ನಗರ ಇರಬಹುದು, ಬೆಂಗಳೂರು ಗ್ರಾಮಾಂತರ ಇರಬಹುದು. ಪ್ರತಿ ಒಂದು ಕಡೆಯಿಂದಲೂ ಇವತ್ತು ನಾವು ವರದಿಗಳನ್ನೆಲ್ಲಾ ನೋಡಿದರೆ ಇಡೀ ರಾಜ್ಯದ ತುಂಬಾ ನೀರಿಗಾಗಿ ಇವತ್ತು ಹಾಹಾಕಾರ ನಡೆಯುತ್ತಿದೆ. ಪ್ರತಿ ಒಂದು ಜಿಲ್ಲೆಯಿಂದ ನಾವು ವರದಿಯನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯಲ್ಲಿ 20 ಗ್ರಾಮಗಳು ಇವತ್ತು ಕುಡಿಯುವ ನೀರಿನ ಸಮಸ್ಯೆಯಿಂದ ಪರತಪಿಸುತ್ತಿದೆ. ಕೊಡಗು ಜಿಲ್ಲೆಯ 150 ಗ್ರಾಮಗಳಲ್ಲಿ ಇವತ್ತು ಕುಡಿಯುವ ನೀರಿನ ಸಮಸ್ಯೆ ಇದೆ. ರಾಯಚೂರಿನ 488 ಗ್ರಾಮಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ಹಾಹಾಕಾರ ಇದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 131 ಗ್ರಾಮಗಳು ಕೊಪ್ಪಳ ಜಿಲ್ಲೆಯ 244 ಗ್ರಾಮಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಚಿಂತಾಜನಕ ಇದೆ. ದಾವಣಗೆರೆ ಜಿಲ್ಲೆಯಲ್ಲಿ 106 ಗ್ರಾಮಗಳು ಆಮೇಲೆ ಬಿಜಾಪುರ ಜಿಲ್ಲೆಯಲ್ಲಿ 239 ಗ್ರಾಮಗಳು ಈ ರೀತಿ ಕೇವಲ 10,20 ಗ್ರಾಮಗಳು ಎಂದರೆ ಅದು ಬೇರೆ ವಿಷಯ. ಆದರೆ ನೂರಾರು ಗ್ರಾಮಗಳಲ್ಲಿ ಕುಡಿಯುವ ನೀರಿನ ಪರಸ್ಥಿತಿ ಇವತ್ತು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿದೆ. ಇವತ್ತು ಹಿಂದಿನ ಸರ್ಕಾರ ಒಂದು ಸಮೀಕ್ಷೆಯನ್ನು ಮಾಡಿತ್ತು. ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ಎಂಬ ಒಂದು ಗ್ರಂಥವನ್ನು ಹೊರಡಿಸಿದ್ದರು. ಅದರಲ್ಲಿ ಇವತ್ತು ಶಿಕ್ಷಣ ಖಾತೆ ಇರಬಹುದು, ಇನ್ನಿತರ ಖಾತೆಗಳು ಇರಬಹುದು, ಆರೋಗ್ಯ ಖಾತೆ ಇರಬಹುದು. ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಇರಬಹುದು. ಇದರ ಬಗ್ಗೆ ಸಾಕಷ್ಟು ಅಂಕಿ ಸಂಖ್ಯೆಗಳನ್ನು ಅವರು ಕಲೆ ಹಾಕಿದ್ದಾರೆ. ನಿಜವಾಗಿಯೂ ಅಪ್ರಿಸಿಯೇಷನ್ ಮಾಡುವಂತಹ ಕೆಲಸವನ್ನು ಹಿಂದಿನ ಸರ್ಕಾರದವರು ಮಾಡಿದರು. ಈ ಒಂದು 'ಮಾನವ ಅಭಿವೃದ್ಧಿ 1999' ಎನ್ನುವ ಪುಸ್ತಕ. ಈ ಪುಸ್ತಕವನ್ನು ಪ್ರತಿ ಒಬ್ಬ ಶಾಸಕರೂ ಸಂಗ್ರಹಿಸಿ ಇಟ್ಟುಕೊಂಡು ಇದರ ರೆಫರೆನ್ಸ್ ಮಾಡಿದರೆ ಇದರಿಂದ ಬಹಳಷ್ಟು ಮಾಹಿತಿಗಳು ಇವತ್ತು ಸಿಗಲಿಕ್ಕೆ ಸಾಧ್ಯ ಇದೆ.

(ಈ ಹಂತದಲ್ಲಿ ಶ್ರೀ ಬಿ.ಆರ್.ಯಾವಗಲ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ 1999 ಎಂದು ಏನು ಪುಸ್ತಕ ಮಾಡಿದ್ದಾರೆ,

ಅದರಲ್ಲಿ ಸಾಕಷ್ಟು ಮಾಹಿತಿಗಳು ಇದ್ದಾವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಿಂದಿನ ಸರ್ಕಾರ ಮಾಡಿದೆ, ಇಲ್ಲ ಎಂದು ಹೇಳುತ್ತಿಲ್ಲ. ಅದಕ್ಕೆ ಟಾಸ್ಕ್ ಫೋರ್ಸ್ ಮಾಡಿ ಮಾನ್ಯ ಸಿಂಧ್ಯಾ ಅವರನ್ನೇ ಅಧ್ಯಕ್ಷರಾಗಿ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಅದಕ್ಕೆ ಒಪ್ಪುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಈ ಒಂದು ಪುಸ್ತಕದಲ್ಲಿ ರೆಫರೆನ್ಸ್ ಮಾಡಿದ ಪ್ರಕಾರ ಈಗ ಸರಿಯಾದ ನೀರಿನ ಪೂರೈಕೆ ಆಗಬೇಕಾದರೆ ಏನಾದರೂ ಒಂದು ಗೈಡ್‌ಲೈನ್ಸ್ ಬೇಕಲ್ಲ. ಅಳತೆಗೋಲು ಬೇಕು. ಇವತ್ತು ಒಂದು ನಗರ ಇರಬಹುದು, ಪಟ್ಟಣ ಇರಬಹುದು ಅಥವಾ ಒಂದು ಗ್ರಾಮ ಪ್ರದೇಶದಲ್ಲಿ ಇರಬಹುದು. ಆ ಜನಸಂಖ್ಯೆಗೆ ಅನುಗುಣವಾಗಿ ಏನೇನು ಗೈಡ್‌ಲೈನ್ಸ್ ಹಾಕಬಹುದು? ಸರಿಯಾದ ನೀರು ಪೂರೈಕೆ ವಿಚಾರದಲ್ಲಿ ಲಕ್ಷಕ್ಕೂ ಮೇಲ್ಪಟ್ಟು ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲಿ ಪ್ರತಿ ದಿನ ತಲಾವಾರು ಅಂದರೆ ಪ್ರತಿಯೊಬ್ಬರಿಗೆ 135 ಲೀಟರ್ ನೀರು ಸಿಗಬೇಕು ಎನ್ನುವುದು. ಪ್ರತಿ ಒಂದು ನಗರದಲ್ಲಿ ಲಕ್ಷಕ್ಕೂ ಮೇಲ್ಪಟ್ಟು ಜನಸಂಖ್ಯೆ ಇರುವಲ್ಲಿ 135 ಲೀಟರ್ ನೀರು ಬೇಕು. ಆಮೇಲೆ 20 ಸಾವಿರ ಮತ್ತು ಒಂದು ಲಕ್ಷ ನಡುವಿನ ಜನಸಂಖ್ಯೆ ಇರುವ ಪಟ್ಟಣಗಳಿಗಾಗಿ 100 ಲೀಟರ್ ನೀರು ಬೇಕು. 20 ಸಾವಿರದವರೆಗೆ ಜನಸಂಖ್ಯೆ ಇರುವ ಪಟ್ಟಣಗಳಿಗಾಗಿ 70 ಲೀಟರ್ ನೀರು ಬೇಕು. ನಾವು ನೋಡಿಕೊಂಡರೆ ನಮ್ಮ ರಾಜ್ಯದ ಪಟ್ಟಣಗಳಲ್ಲಿ ಅಂದರೆ ಶೇಕಡಾ 93ರಷ್ಟು ನಗರ ಪ್ರದೇಶಗಳಲ್ಲಿ ನೀರು ಅಸಮರ್ಪಕ ಇದೆ. ಈ ಒಂದು ಅಳತೆಗೋಲನ್ನು ನಾವು ಇಟ್ಟುಕೊಂಡರೆ. ಅದರ ಪ್ರಕಾರ ಇವತ್ತು ಒಂದು ಅಳತೆ ಗೋಲಿನ ಮೇಲೆ ಇವತ್ತು ಪ್ರತಿ ಒಂದು ಜಿಲ್ಲೆಯಲ್ಲಿ ಎಷ್ಟು ಪಟ್ಟಣಗಳು ಇವೆ, ಆ ಎಷ್ಟು ಪಟ್ಟಣಗಳಲ್ಲಿ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಇದೆ? ಅಥವಾ ಇಲ್ಲ ಎನ್ನುವಂತಹ ಒಂದು ಕೋಷ್ಟಕ ಇದೆ. ಅದರ ಪ್ರಕಾರ ಬೆಂಗಳೂರು ಜಿಲ್ಲೆಯಲ್ಲಿ ಅಸಮರ್ಪಕ ನೀರು ಪೂರೈಕೆ ಇರುವ ಪಟ್ಟಣಗಳು 10. ಕೋಲಾರ ಜಿಲ್ಲೆಯಲ್ಲಿ 12 ಪಟ್ಟಣಗಳು ಇದ್ದು ಅದರಲ್ಲಿ 11 ಪಟ್ಟಣದಲ್ಲಿ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ತುಮಕೂರಿನಲ್ಲಿ 10 ಪಟ್ಟಣಗಳು ಇದ್ದು 10ಕ್ಕೂ ಸರಿಯಾದ ವ್ಯವಸ್ಥೆ ಇಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ 9 ಪಟ್ಟಣ ಇದ್ದು 9 ರಲ್ಲೂ ಸರಿಯಾದ ವ್ಯವಸ್ಥೆ ಇಲ್ಲ. ಆಮೇಲೆ ಶಿವಮೊಗ್ಗ ಜಿಲ್ಲೆಯಲ್ಲಿ 10 ಪಟ್ಟಣಗಳಿದ್ದು 9ರಲ್ಲಿ ಸರಿಯಿಲ್ಲ.

5.00 ಪಿ.ಎಂ

ಮೈಸೂರಿನಲ್ಲಿ 12ರಲ್ಲಿ 10 ಅಸಮರ್ಪಕವಾಗಿ ಪೂರೈಕೆಯಾಗುತ್ತಿದ್ದರೆ, ಅದೇ ರೀತಿ ಮಂಡ್ಯದಲ್ಲಿ 7ರಲ್ಲಿ 7 ಸರಿ ಇಲ್ಲ, ಹಾಸನದ ಎಂಟು ಪಟ್ಟಣಗಳ ಪೈಕಿ ಆರು ಪಟ್ಟಣಗಳಲ್ಲಿ ಕುಡಿಯುವ ನೀರಿನ ಸರಿಯಾದ ಪೂರೈಕೆಯಿರುವುದಿಲ್ಲ.

ಚಿಕ್ಕಮಗಳೂರಿನ ಎಂಟು ಪಟ್ಟಣಗಳ ಪೈಕಿ ಏಳರಲ್ಲಿ ಸರಿಯಿಲ್ಲ, ದಕ್ಷಿಣ ಕನ್ನಡದ 10 ಪಟ್ಟಣಗಳ ಪೈಕಿ 10ರಲ್ಲೂ ಸರಿಯಿಲ್ಲ, ಕೊಡಗಿನ ಮೂರು ಪಟ್ಟಣಗಳ ಪೈಕಿ ಎರಡರಲ್ಲಿ ಸರಿಯಿಲ್ಲ, ಗುಲ್ಬರ್ಗದ 12 ಪಟ್ಟಣಗಳ ಪೈಕಿ 10ರಲ್ಲಿ ಸರಿಯಿಲ್ಲ, ರಾಯಚೂರಿನ 10 ಪಟ್ಟಣಗಳ ಪೈಕಿ 10ರಲ್ಲೂ ಸರಿಯಿಲ್ಲ, ಬೀದರ್‌ನಲ್ಲಿ 6 ಪಟ್ಟಣಗಳ ಪೈಕಿ 6ರಲ್ಲೂ ಸರಿಯಾದ ಕುಡಿಯುವ ನೀರಿನ ಪೂರೈಕೆ ಇಲ್ಲ, ಬಳ್ಳಾರಿಯ 11 ಪಟ್ಟಣಗಳ ಪೈಕಿ 10ರಲ್ಲಿ ಸರಿಯಿಲ್ಲ, ಧಾರವಾಡ ಜಿಲ್ಲೆಯ 25 ಪಟ್ಟಣಗಳ ಪೈಕಿ 21ರಲ್ಲಿ ಸರಿಯಿಲ್ಲ, ಬೆಳಗಾವಿಯ 16 ಪಟ್ಟಣಗಳ ಪೈಕಿ 15ರಲ್ಲಿ ಸರಿಯಿಲ್ಲ, ಬಿಜಾಪುರದ 18 ಪಟ್ಟಣಗಳ ಪೈಕಿ 18ರಲ್ಲೂ ಸರಿಯಿಲ್ಲ ಮತ್ತು ಉತ್ತರ ಕನ್ನಡದ 11 ಪಟ್ಟಣಗಳ ಪೈಕಿ 9ರಲ್ಲಿ ಸರಿಯಿರುವುದಿಲ್ಲ. ರಾಜ್ಯದಲ್ಲಿ ಒಟ್ಟು 205 ಪಟ್ಟಣ, ನಗರ ಪ್ರದೇಶಗಳನ್ನು ಗುರ್ತಿಸಿದ್ದು, ಅದರಲ್ಲಿ 190 ನಗರ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಿಯಾದ ಪೂರೈಕೆಯ ವ್ಯವಸ್ಥೆಯಿರುವುದಿಲ್ಲ. ಆದುದರಿಂದ, ಗೈಡ್‌ಲೈನ್ಸ್ ಪ್ರಕಾರ ಕುಡಿಯುವ ನೀರನ್ನು ಸರಿಯಾಗಿ ಪೂರೆಕೆ ವ್ಯವಸ್ಥೆ ಮಾಡುವುದು ಒಂದು ಕಡೆಯಾದರೆ ಮತ್ತೊಂದೆಡೆ ಈ ತಕ್ಷಣದಲ್ಲಿ ಸದರಿ ವ್ಯವಸ್ಥೆ ಮಾಡಲು ಆ್ಯಕ್ಷನ್ ಪ್ಲಾನ್ ಮಾಡುವುದು ಮತ್ತೊಂದಾಗಿದೆ. ಇದರ ಬಗ್ಗೆ ಸರ್ಕಾರ ಇವೊತ್ತು ಚಿಂತನೆ ಮಾಡಬೇಕಾಗಿದೆ. ಅಂದರೆ, ಒಬ್ಬ ವ್ಯಕ್ತಿಗೆ ದಿನವೊಂದಕ್ಕೆ 70 ಲೀಟರ್, 100 ಲೀಟರ್ ಮತ್ತು 120 ಲೀಟರ್‌ಗಳಷ್ಟು ಕುಡಿಯುವ ನೀರನ್ನು ಒದಗಿಸಿಕೊಡುವ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಸರ್ಕಾರದವರು ತಮ್ಮ ಆಯವ್ಯಯ ಪತ್ರದಲ್ಲಿರಬಹುದು ಅಥವಾ ರಾಜ್ಯಪಾಲರ ಭಾಷಣದಲ್ಲಿರಬಹುದು. ಈ ಕುರಿತು ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಕ್ಟೋಬರ್ 27ರಂದು ರಾಜ್ಯಪಾಲರು ತಮ್ಮ ಪ್ರಥಮ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ,

"An important prerequisite for improvement of health is the provision of drinking water. My government will therefore give top priority to provide a minimum level of 55 litres of water per head per day in all the villages within a period of five years."

ಅಂದರೆ, ದಿನವೊಂದಕ್ಕೆ 55 ಲೀಟರ್‌ಗಳಷ್ಟು ಕುಡಿಯುವ ನೀರನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡುವ ಕುರಿತು ಇವೊತ್ತಿನ ಗೈಡ್‌ಲೈನ್ಸ್ ಏನಿದೆ, ಅದು ದಿನವೊಂದಕ್ಕೆ 75 ಲೀಟರ್‌ಗಳಿರಬಹುದು, 100 ಲೀಟರ್‌ಗಳಿರಬಹುದು, 125 ಲೀಟರ್‌ಗಳಿರಬಹುದು. ಈ ಗೈಡ್‌ಲೈನ್ಸ್ ಪ್ರಕಾರ ಪ್ರತಿಯೊಬ್ಬ ನಾಗರಿಕನಿಗೂ ದಿನವೊಂದಕ್ಕೆ 75 ಲೀಟರ್‌ನಿಂದ 125 ಲೀಟರ್‌ಗಳವರೆಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆನ್ನುವುದು ತಜ್ಞರ ಅಭಿಮತವಾಗಿದೆ. ಆದರೆ, ನೀರಿನ ತೀವ್ರ ಅಭಾವವಿರುವಂಥ ಇವೊತ್ತಿನ ಪರಿಸ್ಥಿತಿಯಲ್ಲಿ ದಿನವೊಂದಕ್ಕೆ ಪ್ರತಿಯೊಬ್ಬರಿಗೂ 55

ಲೀಟರ್‌ಗಳಷ್ಟಾದರೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕಾಗಿರುತ್ತದೆ. ಈ ರೀತಿ ಮಾಡಿದಾಗ ಮಾತ್ರ ನಾವು ನಾಡಿನ ನಾಗರಿಕ ಪ್ರಜೆಗಳಿಗೆ ಏನಾದರೊಂದು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾಡಲು ಸಾಧ್ಯವಿರುತ್ತದೆ ಅಥವಾ ನೀರಿನ ಅಭಾವದಿಂದ ಉಂಟಾಗಿರುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ. ಅದಕ್ಕೋಸ್ಕರ ಈ ದಿಸೆಯಲ್ಲಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು? ಎನ್ನುವುದು ನಮಗೆ ಗೊತ್ತಾಗಬೇಕಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತರುವುದೇನೆಂದರೆ, ನಾನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಮ್ಮ ಕಛೇರಿಯ ಫ್ಯಾಕ್ಸ್ ಮೂಲಕ ಪತ್ರ ಕಳಿಸಿ ಕುಡಿಯುವ ನೀರಿನ ಸೌಲಭ್ಯವೊದಗಿಸಲು ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು? ನಿಮ್ಮ ಜಿಲ್ಲೆಯಲ್ಲಿ ಎಷ್ಟು ಗ್ರಾಮೀಣ ಭಾಗಗಳು ಕುಡಿಯುವ ನೀರಿನ ತೊಂದರೆಗೊಳಗಾಗಿವೆ? ಕುಡಿಯುವ ನೀರಿನ ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವೆಷ್ಟು? ನೀವು ಬೇಡಿಕೆ ಸಲ್ಲಿಸಿದ್ದು ಎಷ್ಟು? ಈ ಕುರಿತು ಈಗಾಗಲೇ ಕೈಗೊಂಡಿರುವ ಕ್ರಮಗಳೇನು? ಮುಂತಾದ ವಿವರಗಳನ್ನು ನೀಡಬೇಕೆಂದು ಕೇಳಿಕೊಂಡಿದ್ದರೂ ಕೇವಲ 5-6 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮಾತ್ರ ಈ ಬಗ್ಗೆ ಮಾಹಿತಿ ನೀಡಿದ್ದು ಉಳಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಯಾರೂ ಸಹ ಮಾಹಿತಿ ಕೊಡಲಿಲ್ಲ. ಸರ್ಕಾರದ ಗೌಪ್ಯ ಮಾಹಿತಿ ಕೊಡಬೇಕೆಂದು ನಾನು ಕೇಳಲಿಲ್ಲ. ರಾಜ್ಯದ ಯಾವುದೇ ಒಬ್ಬ ನಾಗರಿಕ ಕಛೇರಿಗೆ ಹೋಗಿ ಕೇಳುವಂಥ ಮಾಹಿತಿ ಇದಾಗಿದೆ. ಹೀಗಿದ್ದರೂ ಉಳಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಮಾಹಿತಿ ಬಂದಿರುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವೂ ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಸಹ ವಿರೋಧ ಪಕ್ಷದ ನಾಯಕರಾಗಿ ಮೂರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದೀರಿ. ಆ ಸಂದರ್ಭದಲ್ಲಿ ತಾವು ಕೇಳುತ್ತಿದ್ದ ಮಾಹಿತಿಗಳನ್ನು ಸರ್ಕಾರ ಒದಗಿಸುತ್ತಿರಲಿಲ್ಲವೇ? ಆದರೆ, ಈಗ ವಿರೋಧ ಪಕ್ಷದ ನಾಯಕರಾಗಿರುವ ಜಗದೀಶ್ ಶೆಟ್ಟರ್‌ವರು ಕುಡಿಯುವ ನೀರಿಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರಗಳನ್ನು ಬರೆದು ಕಳೆದ 8-10 ದಿವಸಗಳಿಂದ ಮಾಹಿತಿಗಳನ್ನು ಒದಗಿಸಿ ಕೊಡಬೇಕೆಂದು ಕೇಳುತ್ತಿದ್ದಾರೆ. ಕುಡಿಯುವ ನೀರಿಗಾಗಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? ಏನೇನು ಪ್ರಪೋಸಲ್ ಬಂದಿದೆ? ಮುಂತಾದ ವಿವರಗಳನ್ನು ಒದಗಿಸಿಕೊಡಲು ಕೇಳಿದ್ದರೂ ಇಂತಹ ಕನಿಷ್ಠ ಮಾಹಿತಿಯನ್ನೂ ಕೊಡುವುದಿಲ್ಲವೆಂದರೆ ನಿಮ್ಮದು ಪಾರದರ್ಶಕ ಸರ್ಕಾರ ಹೇಗಾಗುತ್ತದೆ? ನನಗರ್ಥವಾಗುವುದಿಲ್ಲ. ಅವರೇ ಸ್ವತಃ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಕೇಳುತ್ತಿದ್ದರೂ ಕೊಡುತ್ತಿಲ್ಲ. ಇದನ್ನು ನಾವು ಹೇಳಿದರೆ, ನಿಮಗೆ ಸಿಟ್ಟು ಬಂದು ಯಾವ ನಾಲಿಗೆ ಎಂದು ಕೇಳುತ್ತೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಮಗೆ ಗೊತ್ತಿರುವಂತೆ ನಾನೂ ಸಹ ಮೂರು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕನಾಗಿ ಕಾರ್ಯನಿರ್ವಹಿಸಿದ್ದೇನೆ. ಯಾವುದೇ

ಜಿಲ್ಲಾಧಿಕಾರಿಗಳಿಗೆ, ಕಾರ್ಯದರ್ಶಿಯವರಿಗೆ ನೇರವಾಗಿ ಪತ್ರ ವ್ಯವಹಾರ ಮಾಡಿದರೆ ಅವರು ನೇರವಾಗಿ ಉತ್ತರ ಕಳುಹಿಸದೆ ತಮ್ಮ ಮುಖಾಂತರ ಕಳುಹಿಸುತ್ತಾರೆ ಅಥವಾ ಯಾವುದಾದರೂ ನಾರ್ಮಲ್ ಜಿ.ಓ. ಇದ್ದರೆ ಕಳುಹಿಸಿಕೊಡುತ್ತಾರೆ. ಪ್ರತಿಯೊಂದಕ್ಕೂ ಅವರು ನೇರವಾಗಿ ಪತ್ರ ವ್ಯವಹರಿಸುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅವರು ಕನಿಷ್ಠ ಮಾಹಿತಿಯನ್ನು ಕೇಳುತ್ತಿದ್ದು, ಅದನ್ನೂ ಒದಗಿಸಿಕೊಡುವುದಿಲ್ಲವೆಂದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ:ನಾನು ವಿರೋಧ ಪಕ್ಷ ನಾಯಕನಾಗಿದ್ದಂಥ ಸಂದರ್ಭದಲ್ಲಿ ಬಹಳಷ್ಟು ಪತ್ರಗಳನ್ನು ಬರೆದಿರುವುದನ್ನು ತೋರಿಸುತ್ತೇನೆ. ನೀರಾವರಿಗೆ ಖರ್ಚು ಮಾಡಿರುವ ಹಣವೆಷ್ಟು? ಎಷ್ಟು ಎಲ್.ಓ.ಸಿ. ಬಿಡುಗಡೆ ಮಾಡಿದ್ದೀರಿ? ಮುಂತಾದ ಅನೇಕ ಮಾಹಿತಿಗಳನ್ನು ಪಡೆಯಲು ಪತ್ರಗಳನ್ನು ಬರೆದಿದ್ದರೂ ಎಷ್ಟೋ ಸಲ ಉತ್ತರ ಬರಲಿಲ್ಲವೆಂದು ಹೇಳುತ್ತಿದ್ದೇನೆ. ನಾನು ಅದನ್ನು ಪ್ರೂವ್ ಮಾಡಲೇ?

ಶ್ರೀ ಪಿ.ಜಿ.ಆರ್.ಸಿಂಧ್ಯ: ನೀವು ಕೇಳಿದ ಯಾವ ಪ್ರಶ್ನೆಗೆ ಉತ್ತರಿಸಲಿಲ್ಲವೆಂಬುದನ್ನು ತೋರಿಸಿ.

ಶ್ರೀ ಸಿ.ಬೈರೇಗೌಡ: ಹಾಗಾದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ವಿರೋಧ ಪಕ್ಷದ ನಾಯಕರು ಮಾಹಿತಿಯನ್ನು ಕೇಳಿದರೆ ಕೊಡಬೇಕೆಂದು ಸರ್ಕಾರದ ನೀತಿ ಇದೆಯೇ? ಅಥವಾ ಕೊಡುವುದಿಲ್ಲವೆಂಬ ನೀತಿ ಇದೆಯೇ? ಇದನ್ನಾದರೂ ಸ್ಪಷ್ಟಪಡಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:ಎಲ್ಲಾ ಸಾರ್ವಜನಿಕರಿಗೆ ಕೊಡುವ ಮಾಹಿತಿಗಳನ್ನು ಕೊಡುತ್ತಾರೆ. ಅದು ಬಿಟ್ಟು ನೇರವಾಗಿ ಪತ್ರ ವ್ಯವಹರಿಸುತ್ತಾರೆಯೇ?

ಶ್ರೀ ಸಿ.ಭೈರೇಗೌಡ: ಅವರು ನೇರವಾಗಿ ಪತ್ರ ವ್ಯವಹರಿಸುತ್ತಾರೋ? ಅಥವಾ ದೂರವಾಣಿ ಕರೆ ಮೂಲಕ ಮಾಡುತ್ತಾರೋ? ಆ ಮಾಹಿತಿ ಕೊಡುವುದಿಲ್ಲ, ಕೊಡಬೇಕಾಗಿಲ್ಲ ಎಂದು ಹೇಳಿ.

SRI MALLIKARJUNA KHARGE: Secretary, Deputy Commissioner do not correspond directly with the Opposition leaders.

ಶ್ರೀ ಪಿ.ಜಿ.ಆರ್.ಸಿಂಧ್ಯ: ವಿರೋಧ ಪಕ್ಷದವರು ಮಾಹಿತಿ ಕೇಳಿದರೆ ನಾವು ಇಷ್ಟೇ ಕೊಡುವುದೆಂಬ ಬಗ್ಗೆ ನೀವು ಒಂದು ಗೈಡ್‌ಲೈನ್ಸ್ ಹೊರಡಿಸಿಬಿಡಿ. ನೀವು ಹೇಳಿದ್ದನ್ನೆಲ್ಲವನ್ನೂ ನಾವು ಕೇಳಬೇಕೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಛೇರ್ಮನ್‌ರವರೆ, ಅವರು ಏನೇನು ಮಾಹಿತಿಗಳು ಬೇಕೆಂದು ಕೇಳುತ್ತಿದ್ದಾರೋ, ಅದೆಲ್ಲವನ್ನೂ ಕೂಡ ಸರ್ಕಾರ ಒದಗಿಸಿಕೊಡುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅವರು ಕಳೆದ ಎಂಟು ದಿವಸಗಳಿಂದ ಕೇಳುತ್ತಿದ್ದರೂ ಇನ್ನೂ ಮಾಹಿತಿಗಳನ್ನು ಕೊಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಯಾವ ರೀತಿಯಾಗಿ ಪತ್ರ ವ್ಯವಹರಿಸಿದ್ದಾರೆಂಬುದನ್ನು ನೋಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಎಲ್ಲಾದಕ್ಕೂ ಇದೊಂದು ಉತ್ತರ! ನಿಮ್ಮದು ಎರಡು ನಾಲಗೆ! ನೀವು ಯಾವ ನಾಲಗೆಯಲ್ಲಿ ಈ ಪ್ರಶ್ನೆ ಕೇಳುತ್ತಿದ್ದೀರಾ ಎಂದು ಬೆಳಿಗ್ಗೆ ಮುಖ್ಯಮಂತ್ರಿಗಳು ಹೇಳಿದರಲ್ಲ, ಅವರು ಹೇಳಿದ್ದನ್ನೇ ನಾನೂ ಕೇಳುತ್ತಿದ್ದೇನೆ. 'ಒಂದು ವರ್ಷವಾದ ನಂತರ ನೀವು ಯಾವ ನಾಲಗೆಯಲ್ಲಿ ಮಾತನಾಡುತ್ತೀರಿ? ಅದನ್ನು ನಾವು ಕೇಳುತ್ತೇವೆ' ಎಂದು ಹೇಳಿದ್ದಾರೆ. You can hit us from the butt. We are prepared to receive. ಮಾನ್ಯ ವಿರೋಧ ಪಕ್ಷ ನಾಯಕರು ಕುಡಿಯುವ ನೀರಿನ ಬಗ್ಗೆ ಕನಿಷ್ಠ ಮಾಹಿತಿ ಕೇಳಿದ್ದಾರೆಯೇ ವಿನಹ ಸರ್ಕಾರದ ಯಾವುದೇ ಗೌಪ್ಯ ವಿಚಾರದ ಬಗ್ಗೆ ಕೇಳಿಲ್ಲ, ಸಿ.ಓ.ಡಿ ರಿಪೋರ್ಟ್ ಬಗ್ಗೆಯಾಗಲೀ, ಸಿ.ಬಿ.ಐ. ರಿಪೋರ್ಟ್ ಬಗ್ಗೆಯಾಗಲೀ ಅಥವಾ ಯಾವುದೇ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಅನ್ನು ಕೇಳಿಲ್ಲ. ಕುಡಿಯುವ ನೀರಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬದನ್ನಷ್ಟೆ ಕೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆ ಮಾಹಿತಿಯನ್ನು ನಾವು ಒದಗಿಸಿಕೊಡುತ್ತೇವೆ.

ಶ್ರೀ ಹೆಚ್.ಸಿ ಶ್ರೀಕಂಠಯ್ಯ: ಪ್ರಕೃತಿ ವಿಕೋಪ ನಿಧಿಯಿಂದ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಎಂ.ವೈ.ಘೋರ್ಪಡೆ: ಕುಡಿಯುವ ನೀರನ್ನು ಒದಗಿಸಲು ಹಣದ ಅಭಾವವಿಲ್ಲ ಅಂತೆಯೇ ಆ ಕುರಿತು ಮಾಹಿತಿಯ ಅಭಾವವೂ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಮೂಲಭೂತವಾಗಿರುವ ಮಾಹಿತಿಗಳನ್ನು ಕೇಳಿದ್ದು, ಸ್ಟೇಟ್ ಸೆಕ್ಟಾರ್‌ನಲ್ಲಿ ಜಿಲ್ಲಾವಾರು ಮಾಹಿತಿಯಿದ್ದು, ಬೇಕಾದರೆ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಇವೊತ್ತು ಮಾಹಿತಿ ತಂತ್ರಜ್ಞಾನದ ಬಗ್ಗೆ ನಾವು ಬಹಳ ಮಾತನಾಡುತ್ತೇವೆ. ಒಬ್ಬ ಸಾಮಾನ್ಯ ನಾಗರಿಕ ಯಾವುದೇ ಸರ್ಕಾರಿ ಕಛೇರಿಗೆ ಹೋದರೂ ಆತನಿಗೆ ಮಾಹಿತಿ ಸಿಗಬೇಕು. ಆದರೆ, ಇವೊತ್ತು ಪ್ರತಿಪಕ್ಷದ ನಾಯಕನಾದ ನಾನು ನನ್ನ ಕಛೇರಿಯಿಂದ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರಗಳನ್ನು ಬರೆದು

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಒದಗಿಸಿಕೊಡಬೇಕೆಂದು ಕೇಳಿದ್ದೇನೆ. ನಾನು ಆ ಕುರಿತ ಅಂಕಿ-ಸಂಖ್ಯೆಗಳನ್ನು ಕೇಳುತ್ತಿದ್ದೇನೆಯೇ ವಿನಾ ಸರ್ಕಾರದ ಯಾವುದೇ ಒಂದು ಗೌಪ್ಯ ವಿಷಯವನ್ನು ಕೇಳುತ್ತಿಲ್ಲ. ಆ ರೀತಿ ನಾವು ಕೇಳುವಂಥ ಹಕ್ಕು ಸಹ ಇಲ್ಲವೆನ್ನುವ ಪ್ರಶ್ನೆ ಉದ್ಭವಿಸಿದೆ ಅಥವಾ ಆ ಮಾಹಿತಿಯನ್ನು ಕೊಡಲು ಸಾಧ್ಯವಿಲ್ಲವೆನ್ನುವಂಥ ಪ್ರಶ್ನೆಯೂ ಇದೆ. ಇವೊತ್ತು ನಿಮ್ಮ ಕಡೆ ಆ ಕುರಿತ ಅಂಕಿ-ಸಂಖ್ಯೆಗಳಿವೆ. ನಾನು ಕಳೆದ ಹತ್ತು ದಿವಸಗಳಿಂದಲೂ ಆ ಬಗೆಗಿನ ಮಾಹಿತಿಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಇಲ್ಲಿಯವರೆಗೆ ಕೇವಲ 5-6 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಮಾತ್ರ ಮಾಹಿತಿಗಳು ಬಂದಿದ್ದು, ಇವರುಗಳಿಗೆ ಮಾಹಿತಿಗಳನ್ನು ಕೊಡಲು ಸಾಧ್ಯವಾಗುತ್ತದೆ, ಉಳಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಲು ಏಕೆ ಸಾಧ್ಯವಾಗಿರುವುದಿಲ್ಲ? ಮಾಹಿತಿ ಕೊಡಬಾರದೆಂದು ಏನಾದರೂ ನಿರ್ಬಂಧ ಇದೆಯೇ? ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾಹಿತಿ ಕೇಳಿದಾಗ ಅದನ್ನು ಒದಗಿಸಿಕೊಡುವುದು ನನ್ನ ಜವಾಬ್ದಾರಿಯಾಗಿರುತ್ತದೆ. ಇಲ್ಲದಿದ್ದರೆ, ಇಡೀ ಕರ್ನಾಟಕದಲ್ಲಿ ಒಂದು ತಪ್ಪು ಅಭಿಪ್ರಾಯ ಮೂಡುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ: ತಮ್ಮಿಂದ ಮಾಹಿತಿ ಕೇಳಲಿಲ್ಲ, ತಮ್ಮಲ್ಲಿ ಆ ಕುರಿತ ಮಾಹಿತಿ ಇಲ್ಲವೆಂದು ಹೇಳುತ್ತಿಲ್ಲ, ತಾವು ಅದನ್ನು ಒದಗಿಸಿಕೊಡುತ್ತೀರಿ. ನಿಮ್ಮ ಬಗ್ಗೆ ನಮ್ಮಲ್ಲಿ ಎರಡು ಮಾತಿಲ್ಲ. ಆದರೆ, ಜಿಲ್ಲಾಧಿಕಾರಿಗಳನ್ನು ಕೇಳಿರುವಾಗ ಮಾಹಿತಿಗಳನ್ನು ಒದಗಿಸಿಕೊಡದೆ ಅವರು ಏನು ಮಾಡುತ್ತಿದ್ದಾರೆ? ಪ್ರತಿ ಪಕ್ಷದ ನಾಯಕರಿಗೆ ಆ ಬಗೆಗಿನ ಮಾಹಿತಿಕೊಡುವುದಿಲ್ಲವೆಂದರೆ ದೊಡ್ಡ ಅವಮಾನ ಮಾಡಿದಂತಾಗುತ್ತದೆ.

ಶ್ರೀ ಎ.ರಾಮದಾಸ್: ನಾವು ಕೇಳಿರುವ ಮಾಹಿತಿಯನ್ನು ಈಗ ಒದಗಿಸಿಕೊಡಬೇಕೆಂದು ಕೇಳುತ್ತಿಲ್ಲ, ಮಾಹಿತಿ ಕೇಳಿದಂಥ ಮೂಲಭೂತ ಪ್ರಶ್ನೆ ಇದ್ದುದೇನೆಂದರೆ, ನಮ್ಮ ನಾಯಕರು ಬರೆದಂಥ ಪತ್ರಗಳಿಗೆ ತಮ್ಮ ಜಿಲ್ಲಾಧಿಕಾರಿಗಳು ಯಾವ ರೀತಿ ಸ್ಪಂದಿಸುತ್ತಿದ್ದಾರೆ? ನಿಮ್ಮ ಆಡಳಿತದ ವ್ಯವಸ್ಥೆ ಹೇಗಿದೆ? ಆಡಳಿತ ವ್ಯವಸ್ಥೆ ಯಾವ ರೀತಿ ಹಾಳಾಗಿದೆ ಎಂದು ಹೇಳುತ್ತಿದ್ದೇವೆ. ಮಾಹಿತಿ ನಿಮ್ಮ ಬಳಿ ಇಲ್ಲವೆಂದು ಹೇಳುತ್ತಿಲ್ಲ, ಅನಂತರ ಆ ಮಾಹಿತಿ ಕೊಡಿ ಕೇಳಿರುವಂಥ ಮಾಹಿತಿಯನ್ನು ಏಕೆ ಕೊಟ್ಟಿಲ್ಲವೆನ್ನುವಂಥ ಪ್ರಶ್ನೆಗೆ ಉತ್ತರ ಹೇಳಬೇಕು.

ನಿಮ್ಮ ಆಡಳಿತದ ವ್ಯವಸ್ಥೆ ಹೇಗಿದೆ? ಯಾವ ರೀತಿಯಲ್ಲಿ ಆಡಳಿತ ವ್ಯವಸ್ಥೆ ಹಾಳಾಗಿದೆ ಎಂದು ನಾವು ಕೇಳುತ್ತಿರುವುದು ಮಾಹಿತಿ ತಮ್ಮ ಹತ್ತಿರ ಇಲ್ಲ ಎಂದಲ್ಲ.

ಛೇರ್ಮನ್: ಆಯಿತು ಅವರು ಹೇಳುತ್ತಾರೆ.

ಶ್ರೀ ಎ.ರಾಮದಾಸ್: ಆನಂತರದಲ್ಲಿ ಮಾಹಿತಿಯನ್ನು ಕೊಡಿ. ಏಕೆ ಕೊಟ್ಟಿಲ್ಲ ಎನ್ನುವ ಪ್ರಶ್ನೆಗೆ ಉತ್ತರ ಹೇಳಿ.

ಛೇರ್ಮನ್: ಅವರು ಉತ್ತರ ಕೊಡಲಿ. ಆಮೇಲೆ ತಾವು ಹೇಳಿ.

ಶ್ರೀ ಎ.ರಾಮದಾಸ್: ಏಕೆ ಉತ್ತರ ಕೊಟ್ಟಿಲ್ಲ ಎಂದು ಹೇಳಲಿ.

ಛೇರ್ಮನ್: ಅವರು ಉತ್ತರ ಹೇಳುವುದಕ್ಕೇ ಬಿಡುತ್ತಿಲ್ಲ, ಅವರು ಏನು ಹೇಳುತ್ತಾರೋ ಹೇಳಲಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಎಲ್ಲೆಲ್ಲಿ ಲೋಪ ದೋಷ ಇದೆ ಎಂದು ಅವರ ಗಮನಕ್ಕೆ ತಂದಿದ್ದೀರಾ?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, 1999-2000ದಲ್ಲಿ 116 ಕೋಟಿ ರೂಪಾಯಿ ಸ್ಟೇಟ್ ಸೆಕ್ಟಾರ್‌ನಲ್ಲಿ ಮತ್ತು 114 ಕೋಟಿ ರೂಪಾಯಿ ಸೆಂಟ್ರಲ್ ಸೆಕ್ಟಾರ್‌ನಲ್ಲಿ ರಿಲೀಸ್ ಮಾಡಿದ್ದೇವೆ. ಯಾವ್ಯಾವ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟೆಷ್ಟು ಎಂಬ ಬಗ್ಗೆ ಸಂಪೂರ್ಣ ಮಾಹಿತಿ ನನ್ನ ಕಡೆಗೆ ಇದೆ. ತಾವು ಕೇಳಿದ ಮೇಲೆ ಹೇಳುತ್ತೇನೆ.

ಛೇರ್ಮನ್: ಅವರು ಕೇಳುವುದು ಇಷ್ಟೇ. ತಾವೇನು ಜಿಲ್ಲಾಧಿಕಾರಿಗಳಿಂದ ಮಾಹಿತಿ ಕೇಳಿದ್ದರು, ಅದಕ್ಕೆ ಉತ್ತರ ಬಂದಿಲ್ಲ. ಅದಕ್ಕೆ ತಾವೇನಾದರೂ ಸಬೂಬು ಹೇಳಬಹುದು ಅಥವಾ ಏನಾದರೂ ಕ್ಲಾರಿಫಿಕೇಶನ್ ಹೇಳಬಹುದಾ ಎಂದು ಕೇಳುತ್ತಿದ್ದಾರೆ. ತಾವು ದಯವಿಟ್ಟು ಮುಂದುವರೆಸಿ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ನಾವು ಪ್ರತಿ ಒಂದು ಜಿಲ್ಲೆಯಿಂದ ಮಾಹಿತಿ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡಿದೆವು. ಅದು ಆಗಲಿಲ್ಲ ಎನ್ನುವಂತಹದ್ದು ದುರದೃಷ್ಟಕರ. ಅದಕ್ಕಾಗಿ ಸರ್ಕಾರದಿಂದ ಅಥವಾ ಇಲ್ಲಿ ಒಂದು ರೂಲಿಂಗ್ ಇದರ ಬಗ್ಗೆ ಆಗಿ ಬಿಡಲಿ. ಇವತ್ತು ಏನು ಕೇಳುವ ಹಕ್ಕು ಇದೆ? ಏಕೆಂದರೆ ಈ ಸರ್ಕಾರ ಬಹಳ ಹೇಳುತ್ತಿದೆ. ಮಾಹಿತಿ ಕೊಡುವಂಥ ಹಕ್ಕು, ಇದರ ಬಗ್ಗೆ ಬಹಳಷ್ಟು ಮಾತನಾಡುತ್ತಿದೆ. ನಾನು ಒಬ್ಬ ಪ್ರತಿಪಕ್ಷದ ನಾಯಕನಾಗಿ ಬೇಡ, ಒಬ್ಬರು ಶಾಸಕರು ಬೇಡ. ಒಬ್ಬ ಜನಸಾಮಾನ್ಯ ಯಾವುದೇ ಒಂದು ಕಛೇರಿಗೆ ಹೋಗಿ ಯಾವುದೇ ಒಂದು ತಾಲ್ಲೂಕಿನ ಪರಿಸ್ಥಿತಿ ಬಗ್ಗೆ, ತಾಲ್ಲೂಕಿನ ಯಾವುದೇ ಒಂದು ಅಂಕಿಸಂಖ್ಯೆ ಬಗ್ಗೆ ಮಾಹಿತಿ ಕೇಳಿದರೆ ಅದು ಕೊಡುವಂತಹ ಹಕ್ಕು. ಅದು ಬಿಟ್ಟು ಇಂತಹ ಒಂದು ಸಂದರ್ಭದಲ್ಲಿ ಇವತ್ತು ಒಬ್ಬ ಪ್ರತಿಪಕ್ಷದ ನಾಯಕ ತನ್ನ ಕಛೇರಿಯಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ನನಗೆ ಈ ಮಾಹಿತಿ ಬೇಕು ಎಂದು ಕೇಳಿದಂತಹ ಸಂದರ್ಭದಲ್ಲಿ ಇವತ್ತು

ಕೊಡುತ್ತಿಲ್ಲ ಎಂದರೆ ಆ ಸರ್ಕಾರ ಅದಕ್ಕೆ ನಿರ್ಬಂಧ ಹಾಕಿದೆಯೋ? ಅಥವಾ ಕೇಳುವ ಹಕ್ಕು ನಮಗೆ ಇಲ್ಲವೋ ಎಂಬ ಬಗ್ಗೆ ಒಂದು ನಿರ್ಣಯ ಆಗಬೇಕಾಗಿದೆ. ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟೀಕರಣ ಮಾಡಲಿ. ನಿಮಗೆ ಪ್ರತಿಪಕ್ಷದವರಿಗೆ ಏನೂ ಕೇಳುವ ಹಕ್ಕು ಇಲ್ಲ. ಏನಿದ್ದರೂ ನಮ್ಮ ಮಂತ್ರಿಗಳ ಮುಖಾಂತರ ಕೇಳಿ, ಅಥವಾ ನಮ್ಮ ಸಭಾಧ್ಯಕ್ಷರ ಮುಖಾಂತರ ಕೇಳಿ ಅಥವಾ ಯಾರೋ ಕಾರ್ಯದರ್ಶಿಗಳ ಮುಖಾಂತರ ಕೇಳಿ ಎಂಬ ಬಗ್ಗೆ ಒಂದು ಸ್ಪಷ್ಟೀಕರಣ ಆಗ ಬೇಕಾಗುತ್ತದೆ. ಏಕೆಂದರೆ ನಮಗೆ ಕೇಳುವ ಹಕ್ಕು ಇದೆಯೋ ಇಲ್ಲವೋ ಎಂಬುದು ಗೊತ್ತಾಗಬೇಕಾಗುತ್ತದೆ. ಏಕೆಂದರೆ ಈ ರೀತಿಯ ಒಂದು ಪ್ರತಿಕ್ರಿಯೆ ಕೇವಲ 5-6 ಜಿಲ್ಲೆಗಳಿಂದ ಬಂದಿದೆ. ಕೇವಲ 5-6 ಜಿಲ್ಲೆಯವರು ಮಾಹಿತಿ ಕಳಿಸಿದರೆ ಉಳಿದ ಜಿಲ್ಲೆಯವರು ಮಾಹಿತಿ ಕೊಡಲಿಲ್ಲ. ಇವತ್ತಿನವರೆಗೂ ಕೊಡಲಿಲ್ಲ. ನಮ್ಮ ಕಛೇರಿಯಿಂದ ಎರಡೆರಡು ಮೂರು ಮೂರು ಸಲ ದೂರವಾಣಿ ಮಾಡಿ ಹೇಳಿದರೂ ಅವರು ಮಾಹಿತಿ ಕೊಡಲಿಲ್ಲ. ಅಂದರೆ ಈ ರೀತಿ ಸರ್ಕಾರ ಪಾರದರ್ಶಕದ ಬಗ್ಗೆ ಮಾತನಾಡುತ್ತದೆ. ಏಕೆಂದರೆ ಮುಚ್ಚಿಡುವಂತಹದ್ದು ಏನು ಇತ್ತು? ಎಷ್ಟು ಹಣ ಬಿಡುಗಡೆ ಆಗಿದೆ, ಎಷ್ಟು ಹಣ ನೀವು ಖರ್ಚು ಮಾಡಿದ್ದೀರಿ? ಎಷ್ಟು ಹಣ ಈಗಾಗಲೇ ತೊಡಗಿಸಿದ್ದೀರಿ? ಇದರ ಬಗ್ಗೆ ಮಾಹಿತಿ ಕೇಳುವಂತಹದ್ದು ಇದ್ದಾಗ, ಇದನ್ನು ಮುಚ್ಚಿಡುವಂತಹದ್ದು ಏನಿತ್ತು? ಜಿಲ್ಲಾಧಿಕಾರಿಗಳು ಮಾಹಿತಿ ಕೊಡದೇ ಇರಲು ಕಾರಣ ಏನು? ಅದಕ್ಕಾಗಿ ಇವತ್ತು ಇದರ ಬಗ್ಗೆ ಒಂದು ಸ್ಪಷ್ಟೀಕರಣ ಸರ್ಕಾರ ನೀಡಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ.

ಶ್ರೀ ಎಂ.ವೈ.ಘೋರ್ಪಡೆ: ನಾನೊಂದು ಮಾತು ಹೇಳುತ್ತೇನೆ. ಅದರ ಬಗ್ಗೆ ಯಾವುದೇ ಅಭ್ಯಂತರ ನಮಗೆ ಇಲ್ಲ. ಮಾಹಿತಿ ಸಂಪೂರ್ಣವಾಗಿ ಕೊಡಬೇಕು ನೀವು ಕೇಳಿದ್ದಕ್ಕೆ. ಇಲ್ಲದೇ ಹೋದರೆ ಪಾರದರ್ಶಕ, ಪ್ರಜಾಪ್ರಭುತ್ವ ಅದಕ್ಕೆ ಅರ್ಥ ಉಳಿಯುವುದಿಲ್ಲ. ಇದರಲ್ಲಿ ಎರಡು ಅಭಿಪ್ರಾಯಗಳು ಇಲ್ಲವೇ ಇಲ್ಲ. ಆ ದಿನ ಇದೇ ಮಾತನ್ನು ನಾನು ಹೇಳಿದ್ದಕ್ಕೆ ತಾವು ಸಿಟ್ಟಾದಿರಿ. ಯಾರಾದರೂ ಸೆಕ್ರೆಟರಿಗೆ ಕೇಳಬಹುದು, ಡಿಸಿಗೆ ಕೇಳಬಹುದು, ಯಾವ ವಿಷಯವಾದರೂ ಕೇಳಬಹುದು ಎಂದು ಹೇಳಿದ್ದಕ್ಕೆ ಬೇರೆ ಅರ್ಥ ಕಲ್ಪಿಸಿಕೊಂಡಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಈಗ ಇವತ್ತು ಪರಿಸ್ಥಿತಿ ಹೇಗೆ ಬೆಳೆದಿದೆ ಎಂದರೆ ಈ ಹುಬ್ಬಳ್ಳಿ ಧಾರವಾಡದಲ್ಲಿ ಕಳೆದ ಒಂದು ತಿಂಗಳಿಂದ ನೀರಿನ ಸಮಸ್ಯೆ ಪ್ರಾರಂಭ ಆಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇದರಿಂದೇನೂ ಆಗುವುದಿಲ್ಲ. ಅವರು ಈಲ್ಡ್ ಆಗಿರುವುದರಿಂದ ನಾನು ಹೇಳುತ್ತಿದ್ದೇನೆ. ಈ ಇನ್‌ಫರ್ಮೇಷನ್‌ಗಳನ್ನು

ತರಿಸಿಕೊಳ್ಳತಕ್ಕಂಥಹದ್ದು ಯಾವ ಫೈಲ್ ಎಲ್ಲಿರುತ್ತದೆ ಎನ್ನುವ ಮಾಹಿತಿಯನ್ನು ಜವಾನನ ಕಡೆಯಿಂದ ತರಿಸಿಕೊಳ್ಳುತ್ತಾರೆ. ಅವರೂ ಅದೇ ಮಾಡಿದ್ದಾರೆ. ನಾವೂ ಅದೇ ಮಾಡುತ್ತೇವೆ. It is not that, that question is, in the parliamentary system. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದಂತಹದ್ದಕ್ಕೆ ಎಷ್ಟೊಂದು ಗೌರವ ಸಿಗುತ್ತದೆ? ಅಧಿಕಾರಿಗಳಿಗೆ ಏನು ಸಿಗ್ನಲ್ ಹೋಗುತ್ತದೆ? ನಾವು ಸರ್ಕ್ಯುಲರ್ ಅನ್ನು ಕಳಿಸಬೇಕು ಅಧಿಕಾರಿಗಳಿಗೆ, ಎಂಎಲ್‌ಎಗಳು ಬಂದಾಗ ಎದ್ದು ನಿಂತುಕೊಳ್ಳಿ, ಹಿರಿಯರು ಬಂದಾಗ ಎದ್ದು ನಿಂತುಕೊಳ್ಳಿ ಎಂದು ಅಂದರೆ ನಮ್ಮ ಮಟ್ಟ ಎಲ್ಲಿಗೆ ಬಂದಿದೆ ಅಲ್ಲಿಗೆ ಎಂದು ಹೇಳಿ. ಒಬ್ಬ ಅಧಿಕಾರಿ ಕಾಲ ಮೇಲೆ ಕಾಲು ಹಾಕಿಕೊಂಡು ಟೇಬಲ್ ಮೇಲೆ ಕಾಲು ಇಟ್ಟುಕೊಂಡು ಸಿಗರೇಟ್ ಸೇದಿಕೊಂಡು ಕುಳಿತಿರುತ್ತಾನೆ. ಒಬ್ಬ ಎಂಎಲ್‌ಎ ಹೋದರೆ. ಈ ಸಿಗ್ನಲ್ ಹೋಗಬಾರದು. ಆದ್ದರಿಂದ ಸಚಿವರು ದಯಮಾಡಿ ಹೇಳಬೇಕು. ವಿರೋಧ ಪಕ್ಷದ ನಾಯಕರಿಗೆ ನಮ್ಮ ಸರ್ಕಾರದಲ್ಲಿ ಗೌರವ ಇದೆ. ಏನು ಇನ್‌ಫರ್ಮೇಷನ್ ಕೊಡಬೇಕೋ ಅದನ್ನು ಕೊಡುತ್ತೇವೆಂದು ಹೇಳುವುದರಲ್ಲಿ ನಿಮಗೇನು ತೊಂದರೆ? ಅದಕ್ಕೇಕೆ ನೀವು ಆರ್ಗ್ಯೂ ಮಾಡುತ್ತಿದ್ದೀರಿ? ಇದನ್ನು ನಾವು ಖಂಡನೆ ಮಾಡುತ್ತಿರುವುದು. ಬಾಕಿ ಇನ್ನೇನೂ ಇಲ್ಲ. ನಮಗೂ ವಿರೋಧ ಪಕ್ಷದಲ್ಲಿ ಕೆಲಸ ಮಾಡುವುದಕ್ಕೆ ಬರುತ್ತದೆ. ನಮಗೆ ಏನೂ ಬರುವುದಿಲ್ಲ ಎಂದಲ್ಲ. ನೀವು ಹೇಳುತ್ತೀರಲ್ಲ, ನಮ್ಮ ಗವರ್ನಮೆಂಟ್ ಟ್ರಾನ್ಸಪರೆಂಟ್ ಎಂದು ನಾವು ಕರೆಕ್ಟೀವ್ ವಿಸ್‌ಡಂ ಯೂಸ್ ಮಾಡಬೇಕು. ನೀವು ಮಾಡಲಿಲ್ಲ. ನಿಮಗೆ ಎರಡು ನಾಲಿಗೆ ಎಂದು ಹೇಳಿ. ಒಂದು ನಾಲಿಗೆ ಇರತಕ್ಕವರು ಒಂದು ಮಾತನಾಡಿ ಎಂದು ನಾವು ಹೇಳುತ್ತಿದ್ದೇವೆ ಅಷ್ಟೇ, ಇನ್ನೇನೂ ಅದರಲ್ಲಿ ಇಲ್ಲ.

ಶ್ರೀ ಎಂ.ವೈ.ಘೋರ್ಪಡೆ: ನಾವು ಆರ್ಗ್ಯೂ ಮಾಡುವುದಿಲ್ಲ. ತಾವೇ ಆರ್ಗ್ಯೂ ಮಾಡುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಪರಿಸ್ಥಿತಿ ಹೇಗೆ ಬಂದಿದೆ ಎಂದರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದು ನೀವು ಗಮನಿಸಬೇಕು. ರೂಲ್ಸ್ ಬುಕ್ ತೆಗೆದುಕೊಳ್ಳಿ. ಇವತ್ತು ವಿತ್ತೀಯ ಕಾರ್ಯಕಲಾಪಗಳು. ಬೇಡಿಕೆ ನಂಬರ್ 46, 01, 02, 03, 53, 04-ಗ್ರಾಮೀಣಾಭಿವೃದ್ಧಿ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಸಕ್ಕರೆ, ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಇಷ್ಟು ಬೇಡಿಕೆಗಳ ಬಗ್ಗೆ ಇವತ್ತು ನಾವು ಮಾತನಾಡಬೇಕು. ಇನ್ನೂ ಸಂಬಂಧಪಟ್ಟ ರಿಪೋರ್ಟ್‌ಗಳನ್ನು ಕೊಟ್ಟಿಲ್ಲ. ಯಾವ ಮೆಂಬರ್‌ಗೆ ರಿಪೋರ್ಟ್ ಬಂದಿದೆ ನನಗೆ ತೋರಿಸಲಿ. That shows this government is negligent. It is not respecting the

Opposition. ಅಲ್ಲ ಸ್ವಾಮಿ, ಈ ತರಹ ಯಾವುದಾದರೂ ಇತಿಹಾಸದಲ್ಲಿ ಉಂಟಾ ದಯವಿಟ್ಟು ನನಗೆ ಹೇಳಿ. ಬೇಡಿಕೆಗಳನ್ನು ನೀವು ಮಂಡನೆ ಮಾಡುವಾಗ ಬೇಡಿಕೆಗಳ ಬಗ್ಗೆ ರಿಪೋರ್ಟನ್ನು ನಿನ್ನೆ ರಾತ್ರಿ ನಮಗೆ ಕಳುಹಿಸಿದ್ದರೆ ನಾವು ಮಾತನಾಡುತ್ತಿದ್ದೆವು. ಈಗ ಏನು ನಾವು ಊಹೆ ಮಾಡಿಕೊಂಡು ಮಾತನಾಡುವುದು? ದಯವಿಟ್ಟು ಹೇಳಿ. ಇದಕ್ಕೇನು ಉತ್ತರ ಕೊಡುತ್ತೀರಿ? ಇದನ್ನು ನಾವು ಕೇಳಿದರೆ ನಿಮ್ಮ ಕಿವಿಗೆ ಇದು ಇಂಪಾಗುವುದಿಲ್ಲ. ಇದು ಕರ್ಕಶ ಧ್ವನಿ. ನಿಮ್ಮ ಅಧಿಕಾರಿಗಳ ಹತ್ತಿರ ನಾವು ಹೋಗಿ ಕೇಳಿಕೊಳ್ಳಬೇಕು. ನಿಮ್ಮ ರಿಪೋರ್ಟ್ ಏನು ಕೊಟ್ಟಿದ್ದೀರಿ? ದಯವಿಟ್ಟು ನಮಗೆ ಕೊಡಿ. ಈ ಸ್ಥಿತಿಗೆ ನೀವು ನಮ್ಮನ್ನು ತೆಗೆದುಕೊಂಡು ಬಂದರೆ ಹೇಗೆ ಉಳಿಯುತ್ತದೆ ತಾವೇ ದಯವಿಟ್ಟು ಯೋಚನೆ ಮಾಡಿ. ನಿಮ್ಮನ್ನು ಟೀಕೆ ಮಾಡಬೇಕು ಎನ್ನುವ ದೃಷ್ಟಿಯಿಂದಾಗಿ ಹೇಳುತ್ತಿಲ್ಲ. ಈಗ ಈ ಬೇಡಿಕೆಗಳ ಬಗ್ಗೆ ದಯವಿಟ್ಟು ನನಗೆ ಹೇಳಿ.

ಛೇರ್ಮನ್: ಅವರೇನೋ ಹೇಳಬೇಕು ಎಂದು ಇದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವು ಮಿನಿಮಮ್ ಕರ್ಟೆಸಿ ಎಕ್ಸ್‌ಪೆಕ್ಟ್ ಮಾಡುತ್ತೇವೆ. ನಾವು ಇನ್ನೇನೂ ಎಕ್ಸ್‌ಪೆಕ್ಟ್ ಮಾಡುವುದಿಲ್ಲ. ಇವತ್ತು ನಮಗೇ ಹೀಗಾದರೆ, ಐದು ಸಾರಿ ಆರು ಸಾರಿ ಗೆದ್ದು ಬಂದಿರತಕ್ಕವರಿಗೆ ಒಂದು ರಿಪೋರ್ಟ್ ತರಿಸಿಕೊಳ್ಳಬೇಕು ಎಂದು ಹೇಳಿದರೆ ನಿಮ್ಮ ಹತ್ತಿರ ಹೇಳಿಸಿಕೊಳ್ಳಬೇಕು. ಅಧಿಕಾರಿಗಳ ಹತ್ತಿರ ಹೋಗಿ, ಗೊಡ್ಡು ಸಲಾಮು ಹೊಡೆದು, ಅವರಿಗೆ ಬೆಳಿಗ್ಗೆ ದೂರವಾಣಿ ಮಾಡಿದರೆ ಸಾಯಂಕಾಲ ಬನ್ನಿ, ಸಾಯಂಕಾಲ ದೂರವಾಣಿ ಮಾಡಿದರೆ ಅವರು ಎಲ್ಲೋ ಹೋಗಿದ್ದಾರೆ, ಇದು ನಮಗೆ ಬಂದಿರುವಂತಹ ಪೊಸಿಷನ್. ಇದು ನಿಮಗೂ ಬರಬೇಕಾ? ಇದೇನಿದು ನಾವು ಹೀಗೆ ಹೇಳಿದರೆ ನಿಮಗೆ ಸಿಟ್ಟು ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ವಾರ್ಷಿಕ ವರದಿ ನ್ಯಾಚುರಲಿ ಡಿಮ್ಯಾಂಡ್ ಇದ್ದಾಗ ಇಲ್ಲಿ ಇಡಲೇಬೇಕು. ಅದು ನಮ್ಮೆಲ್ಲರ ಕರ್ತವ್ಯ. ಡೆಫೆನೆಟ್ ಆಗಿ ಅದರ ಬಗ್ಗೆ ಸಂಬಂಧಪಟ್ಟವರ ಹತ್ತಿರ ಮಾಡನಾಡುತ್ತೇನೆ. ಮಾನ್ಯ ಅಧ್ಯಕ್ಷರ ಹತ್ತಿರ ಕೂಡ ಮಾತನಾಡುತ್ತೇನೆ. ಮತ್ತು ಯಾರ್ಯಾರ ಡಿಮ್ಯಾಂಡ್ ಇದೆ, ಆ ಇಲಾಖೆಯವರ ಜೊತೆ ಕೂಡ ನಾನು ಚರ್ಚಿಸುತ್ತೇನೆ.

ಛೇರ್ಮನ್: ಅವೆಲ್ಲಸರಿ ಮಾಡಿ, ಅವರು ಕೇಳುತ್ತಿರುವುದು ಸರಿ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆ ಬೇಸಿಸ್ ಮೇಲೆಯೇ ಡಿಬೇಟ್ ಆಗತಕ್ಕದ್ದು.

ಛೇರ್ಮನ್: ಅವರು ಕೇಳಿದ್ದು ಸರಿ, ವಾರ್ಷಿಕ ವರದಿ ಇಲ್ಲಿ ಬರಬೇಕಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್: ಈಗ ಆನ್ಯುಯಲ್ ರಿಪೋರ್ಟ್ ಬರಬೇಕಾಗಿತ್ತು. ಇನ್ನೂ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಇಲಾಖೆ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ನೀವು ತಯಾರೇ ಇಲ್ಲವಲ್ಲ. ನೀವು ಬೇಡಿಕೆ ಮೇಲೆ ಚರ್ಚೆ ಶುರು ಮಾಡಿ, ವಾರ್ಷಿಕ ವರದಿ ಬರುತ್ತದೋ ಇಲ್ಲವೋ ನೋಡೋಣ,

ಶ್ರೀ ಜಗದೀಶ್ ಶೆಟ್ಟರ್: ಇವತ್ತು ನಾವು ಹುಬ್ಬಳ್ಳಿ ಧಾರವಾಡದ ಪರಿಸ್ಥಿತಿ ಹೇಳಬೇಕು ಎಂದರೆ ಇವತ್ತು ಬೆಳಿಗ್ಗೆ ಒಂದು ನ್ಯೂಸ್ ಬಂದಿದೆ. ಇಲ್ಲ ಕುಡಿಯುವ ನೀರಿನ ಸಮಸ್ಯೆ ಒಂದು ರೀತಿಯಿಂದ ಬಾಧಕವಾಗಿ ಈ ಕಡೆ ಕಾಲರಾ ಹುಬ್ಬಳ್ಳಿ-ಧಾರವಾಡದಲ್ಲಿ ಬರುತ್ತಿದೆ. ಇವತ್ತಿನ ರಿಪೋರ್ಟ್ ಪ್ರಕಾರ ನಾಲ್ಕು ಜನ ಈ ಕಾಲರಾದಿಂದ ಹುಬ್ಬಳ್ಳಿ-ಧಾರವಾಡದಲ್ಲಿ ಸತ್ತಿದ್ದಾರೆ. ಅಂದರೆ ಒಂದಕ್ಕೊಂದು ಈ ಸಾಂಕ್ರಾಮಿಕ ರೋಗ ಹತ್ತುವಂತಹದ್ದು. ಇವೆಲ್ಲಾ ಪ್ರಾರಂಭವಾಗುತ್ತದೆ. ಹುಬ್ಬಳ್ಳಿ-ಧಾರವಾಡದ ವಿಚಾರದ ಬಗ್ಗೆ ಕಳೆದ ಒಂದು ವರ್ಷದಿಂದ ಪ್ರಯತ್ನ ಮಾಡುವುದಕ್ಕೆ ಹೊರಟಿದ್ದೇನೆ. ಮೊನ್ನೆಯೂ ಸಹ ಪ್ರಸ್ತಾಪ ಮಾಡಿದ್ದೆ. ನಮ್ಮ ನಗರಾಭಿವೃದ್ಧಿ ಸಚಿವರಾದ ಮಾನ್ಯ ಚಿಮ್ಮನಕಟ್ಟಿಯವರು ಇಲ್ಲೇ ಇದ್ದಾರೆ. ಈ ಹುಬ್ಬಳ್ಳಿ-ಧಾರವಾಡದ ಬಗ್ಗೆ ಕಳೆದ ಬಾರಿಯೂ ಪ್ರಶ್ನೋತ್ತರ ಸಮಯದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅಂದರೆ ಕಳೆದ ಒಂದು ವರ್ಷದಿಂದ ಅಲ್ಲಿ ಸಮಸ್ಯೆ ಪ್ರಾರಂಭ ಆಗಿದೆ. 5 ದಿವಸ 10 ದಿವಸ ಕುಡಿಯುವ ನೀರು ಇದ್ದಿಲ್ಲ. ಅಲ್ಲಿ ನೀರು ಸಿಗುತ್ತಿಲ್ಲ. 35 ಕೋಟಿ ರೂಪಾಯಿಯ ಒಂದು ಯೋಜನೆ. ನಾವು ಇಲ್ಲಿಗೆ ಬಂದ ಮೇಲೆ ನಾಲ್ಕು ತಿಂಗಳಿಂದ ಅದನ್ನು ಮಂಜೂರು ಮಾಡಿ ಎಂದು ಹೇಳುತ್ತಿದ್ದೇವೆ ಈ ಬಾರಿಯ ಕ್ಯಾಬಿನೆಟ್‌ನಲ್ಲಿ ಮಾಡುತ್ತೇವೆಂದು ಮೊನ್ನೆ ಹೇಳಿದರು. ಅಂದರೆ ಇಂತಹ ಕೆಲವು ಸಮಸ್ಯೆ ಇರುತ್ತವೆ, ಕೆಲವೊಂದು ಯೋಜನೆಗಳು ಇರುತ್ತವೆ. ಅದನ್ನು ತತ್‌ಕ್ಷಣವೇ ಫಾಲೋ ಅಪ್ ಮಾಡುವಂತಹದ್ದು ಮತ್ತು ಅದಕ್ಕೆ ಹಣ ಮಂಜೂರು ಮಾಡುವಂತಹದ್ದು ಮಾಡಿದರೆ ಒಳ್ಳೆಯದು. ರಾಜ್ಯ ಸರ್ಕಾರ ಇಲ್ಲಿ ಮಾಡುವಂತಹದ್ದು ಏನೆಂದರೆ ಕೇವಲ 7.5 ಕೋಟಿ ರೂಪಾಯಿ ಬಿಡುಗಡೆ ಮಾಡುವಂತಹದ್ದು. ಇನ್ನು 2.5 ಕೋಟಿ ರೂಪಾಯಿ ಕಾರ್ಪೊರೇಷನ್ ಕೊಡುವಂತಹದ್ದು. ಇನ್ನೊಂದು ಹುಡ್ಕೋ ಲೋನ್ ಎಂದು ಹೇಳುವಂತಹದ್ದು. ಈ 35 ಕೋಟಿ ರೂಪಾಯಿಯಲ್ಲಿ ಇವರು 7.5 ಕೋಟಿ ರೂಪಾಯಿ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಸರ್ಕಾರ ಏಕೆ ಇರಬೇಕು. ಕೇವಲ ಬೆಂಗಳೂರು ಉದ್ಧಾರ ಮಾಡುವುದಕ್ಕೆ ಇದ್ದಾರೋ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ: 35 ಕೋಟಿ ರೂಪಾಯಿ ನಾವು ಮಂಜೂರು ಮಾಡುತ್ತೇವೆ. ಮುಂದಿನ ಕ್ಯಾಬಿನೆಟ್‌ನೊಳಗೆ ತಂದು ಸ್ಯಾಂಕ್ಷನ್ ಮಾಡಿಸಕೊಡುತ್ತೇನೆ ಎಂದು ಹೇಳಿದ್ದೇನೆ. ಅದೇನು ಅಷ್ಟು ಬೇಗ 35 ಕೋಟಿ ರೂಪಾಯಿ ಒಮ್ಮಿಂದ ಒಮ್ಮೆಗೇ ಜಾದೂ ಮಾಡಿ ಕೊಡಬೇಕಾ? ಯಾವ ಸರ್ಕಾರಕ್ಕೆ ಸಾಧ್ಯ ಇದೆ? ನೀವು ಘಟಾನುಘಟಿಗಳನ್ನು ಇಟ್ಟುಕೊಂಡು 50ವರ್ಷ ಮಾಡಿದವರಿಗೆ ಆಗಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಆರು ತಿಂಗಳೊಳಗೆ ಪಕ್ಷಾತೀತವಾಗಿ ಆ ಜನರಿಗೆ ತೊಂದರೆ

ಆಗಬಾರದು ಎಂದು ಹೇಳಿ ಆ ಕೆಲಸ ಮಾಡುತ್ತಿದ್ದೇವೆ. ಕುಡಿಯುವ ನೀರಿನ ಯೋಜನೆಗೆ ನೀವು ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಸಿ.ಭೈರೇಗೌಡ: ಮಾನ್ಯ ಛೇರ್ಮನ್‌ರವರೇ, ಮಾನ್ಯ ಮಂತ್ರಿಗಳು ನಾವು ಪಕ್ಷಾತೀತವಾಗಿ ಕೆಲಸ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಮೊನ್ನೆ ಮಾನ್ಯ ಮಂತ್ರಿಗಳು ನಾನು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟರು. ಕೆರೆಯಲ್ಲಿ ನೀರಿಲ್ಲ, ಹೂಳು ತೆಗೆಯುವುದಕ್ಕೆ ಸ್ವಲ್ಪ ಹಣ ಕೊಟ್ಟರೆ ಅದರ ಸಂಗ್ರಹಣ ಸಾಮರ್ಥ್ಯ ಜಾಸ್ತಿಯಾಗುತ್ತದೆ ಎಂದು ನಾವು ಹೇಳಿದೆವು. ಕೊನೆಯ ಪಕ್ಷ ಅದಕ್ಕೆ ಅನುಕೂಲಕರವಾಗಿ ಪ್ರತಿಕ್ರಿಯಿಸತಕ್ಕಂಥ ಔದಾರ್ಯವನ್ನು ಇವರು ತೋರಿಸಲೇ ಇಲ್ಲ. ಅವರು ಈಗ ನಮಗೆ ಉಪದೇಶ ಹೇಳಲಿಕ್ಕೆ ಹೊರಟಿದ್ದಾರೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಛೇರ್ಮನ್‌ರವರೇ, ಮಾನ್ಯ ಭೈರೇಗೌಡರು ಹಿಂದೆ ಅಧಿಕಾರದಲ್ಲಿದ್ದಾಗ ಬಹಳ ಪ್ರಮುಖವಾದಂತಹ ಖಾತೆಯನ್ನೇ ಹೊಂದಿದ್ದರು. ಐದು ವರ್ಷಗಳ ಕಾಲ ಮಾನ್ಯ ಭೈರೇಗೌಡರು ಅಧಿಕಾರದಲ್ಲಿದ್ದಾಗ ಕೋಲಾರ ಪಟ್ಟಣಕ್ಕೆ ಹೂಳು ತೆಗೆಸುವ ಸಲುವಾಗಿ ಎಷ್ಟು ದುಡ್ಡು ರಿಲೀಸ್ ಮಾಡಿಸಿದ್ದಾರೆ? ಒಂದು ಪೈಸೆ ಕೂಡ ನೀವು ದುಡ್ಡು ಅಲ್ಲಿ ಖರ್ಚು ಮಾಡಿಸಿಲ್ಲ.

ಶ್ರೀ ಸಿ.ಭೈರೇಗೌಡ: ಎಷ್ಟು ದುಡ್ಡು ಖರ್ಚು ಮಾಡಿದ್ದೇವೆ ಮತ್ತು ಅಲ್ಲಿ ಏನು ಕೆಲಸ ಮಾಡಿದ್ದೇವೆ ಎಂಬ ಬಗ್ಗೆ ನಾನು ನಿಮ್ಮನ್ನೇ ಕರೆದುಕೊಂಡು ಹೋಗಿ ತೋರಿಸುತ್ತೇನೆ ಬನ್ನಿ. ನಿಮಗೆ ವಿಷಯ ಗೊತ್ತಿಲ್ಲದಿದ್ದರೆ ನಿಮ್ಮ ಪಕ್ಕದಲ್ಲಿ ಇರುವವರ ಹತ್ತಿರವಾದರೂ ವಿಷಯ ತಿಳಿದುಕೊಂಡು ಮಾತನಾಡಿ. ವಿಷಯ ತಿಳಿದುಕೊಳ್ಳದೇ ಇಲ್ಲಿ ಮಾನ್ಯ ಮಂತ್ರಿಗಳು ಮಾತನಾಡಲು ಹೋಗಬೇಡಿ.

ಛೇರ್ಮನ್: ಮಾನ್ಯ ಭೈರೇಗೌಡರೇ, ತಾವು ಬೇರೆ ವಿಷಯ ಪ್ರಸ್ತಾಪಿಸಿ ಚರ್ಚೆಗೆ ನಿಂತರೆ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣ ಮುಗಿಸುವವರೆಗೆ ಯಾರೂ ಮಧ್ಯ ಪ್ರವೇಶಿಸಬೇಡಿ. ಇಲ್ಲಾಂದರೆ ಅದು ಚರ್ಚೆಯಾಗುವುದಿಲ್ಲ, ಅದು ಬರೀ ಗಲಾಟೆಯಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಛೇರ್ಮನ್‌ರವರೇ, ಈಗ ಮಾನ್ಯ ಚಿಮ್ಮನಕಟ್ಟಿಯವರು ನಾವು ಒಮ್ಮೆಲೇ ಏನು ಮಾಡುವುದಕ್ಕಾಗುತ್ತದೆ ಎಂದು ಹೇಳಿದರು. ಆದರೆ ನಾವು ಈ ವಿಷಯದ ಬಗ್ಗೆ ಕೇವಲ ಒಂದು ವಾರದ ಹಿಂದೆ ಮಾತ್ರ ಹೇಳಿದ್ದಲ್ಲ. ಸರ್ಕಾರಕ್ಕೆ ಇದರ ಬಗ್ಗೆ ಪ್ರಸ್ತಾವನೆ ಬಂದು ಈಗಾಗಲೇ ಒಂದು ವರ್ಷವಾಗಿದೆ. ನಾವು ಅದರ ಬೆನ್ನತ್ತಿ ಈಗಾಗಲೇ ಮೂರು ತಿಂಗಳಾಯಿತು. ಇಷ್ಟಾದರೂ ಇದರ ಬಗ್ಗೆ ಸರ್ಕಾರಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ ಎನ್ನುವುದಾದರೆ, ಇದರ ಹಿನ್ನೆಲೆಯೇನು? ಇದನ್ನು ನೋಡಿದರೆ ಸರ್ಕಾರಕ್ಕೆ ಆ ನಗರದ

ಜನತೆಯ ಬಗ್ಗೆ ಕಳಕಳಿಯೇ ಇಲ್ಲವೇನೋ ಎಂದು ಅನ್ನಿಸುತ್ತಿದೆ. ಇದರ ಬಗ್ಗೆ ಸರ್ಕಾರ ತೀವ್ರವಾದಂತಹ ಗಮನ ಹರಿಸಬೇಕು. ಈಗ ಬೇಸಿಗೆ ಕಾಲ ಬಂದಿದೆ. ಅಲ್ಲಿ ಹತ್ತು ದಿವಸಗಳಿಂದ ನೀರಿಲ್ಲ. ಮಾನ್ಯ ಮಂತ್ರಿಗಳು ಬೇಕಾದರೆ ಒಮ್ಮೆ ಹುಬ್ಬಳ್ಳಿಯನ್ನು ವಿಸಿಟ್ ಮಾಡಿ ಬರಲಿ. ಅಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂಬುದು ಮಾನ್ಯ ಮಂತ್ರಿಗಳಿಗೂ ಆಗ ಗೊತ್ತಾಗುತ್ತದೆ. ನಾವು ಅಲ್ಲಿಗೆ ಹೋದರೆ ನಮ್ಮನ್ನು ಅಲ್ಲಿಯ ಜನ ಈಗ ಸುಮ್ಮನೆ ಬಿಡುವುದಿಲ್ಲ. ಅಲ್ಲಿ ಧರಣಿ, ಸತ್ಯಾಗ್ರಹ ಮತ್ತು ಮುಷ್ಕರಗಳು ನಡೆಯುತ್ತಿವೆ. ಪರಿಸ್ಥಿತಿ ಇಷ್ಟೊಂದು ಗಂಭೀರವಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮಂತ್ರಿಗಳು ಚರ್ಚೆ ಮಾಡಿ ಇದರ ಬಗ್ಗೆ ತಕ್ಷಣ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ಈ ವಿಷಯ ಯಾವಾಗಲೋ ಕ್ಯಾಬಿನೆಟ್‌ನಲ್ಲಿ ಚರ್ಚೆಗೆ ಬರಬೇಕಾಗಿತ್ತು. ಈ ವಿಷಯ ಮುಂದಿನ ಕ್ಯಾಬಿನೆಟ್‌ನಲ್ಲಿ ಏಕೆ ಚರ್ಚೆಯಾಗಬೇಕು? ಇದು ಹಿಂದಿನ ಕ್ಯಾಬಿನೆಟ್ ಸಭೆಯಲ್ಲೇ ಏಕೆ ಚರ್ಚೆಗೆ ಬರಲಿಲ್ಲ ಎಂಬುದು ನನ್ನ ಪ್ರಶ್ನೆಯಾಗಿದೆ. ಇದೊಂದು ಸಣ್ಣ ಯೋಜನೆ. ಸರ್ಕಾರ ಬೆಂಗಳೂರು ನಗರ ಸೇರಿದಂತೆ ಹಲವಾರು ನಗರಗಳಿಗೆ ಬೇರೆ ಬೇರೆ ಯೋಜನೆಯನ್ನು ಮಂಜೂರು ಮಾಡುತ್ತಿದೆ. ಆದರೆ ಹುಬ್ಬಳ್ಳಿ ನಗರಕ್ಕೆ ಏಕೆ ಯೋಜನೆಗೆ ಮಂಜೂರಾತಿ ಜಾರಿಗೊಳಿಸುತ್ತಿಲ್ಲ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಈ ವಿಷಯ ಇಷ್ಟು ದಿವಸ ಏಕೆ ಪೆಂಡಿಂಗ್ ಬಿತ್ತು? ಇದರ ಬಗ್ಗೆ ಸರ್ಕಾರ ತೀವ್ರವಾದಂತಹ ಗಮನ ಕೊಡಬೇಕು. ಇಲ್ಲದಿದ್ದರೆ ಇದು ಪ್ರತಿನಿತ್ಯದ ಸಮಸ್ಯೆಯಾಗಿ ಮುಂದುವರೆಯುತ್ತದೆ ಅನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಿಂದೆ ಹಲವಾರು ಯೋಜನೆಗ್ಳು ನಮ್ಮ ಕರ್ನಾಟಕಕ್ಕೆ ಬಂದವು. ಅದರಲ್ಲಿ ನೆದರ್‌ಲ್ಯಾಂಡ್ ಸರ್ಕಾರದ ನೆರವಿನ 70 ಕೋಟಿ ರೂಪಾಯಿಗಳ ಯೋಜನೆಯೂ ಕೂಡ ಒಂದು. ಈ ಯೋಜನೆಯಡಿ 1991ನೇ ಇಸವಿಯಲ್ಲಿ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ನೆದರ್‌ಲ್ಯಾಂಡ್ ಸರ್ಕಾರ ಕರ್ನಾಟಕ ಸರ್ಕಾರಕ್ಕೆ 70 ಕೋಟಿ ರೂಪಾಯಿಗಳನ್ನು ಕೊಟ್ಟರು. ಸರ್ಕಾರದ ಬೇಜವಾಬ್ದಾರಿಯಿಂದಾಗಿ ಆ ಹಣ ಖರ್ಚಾಗಲಿಲ್ಲ. ಈ ಹಣವನ್ನು ಒಂದೂವರೆ ವರ್ಷದಲ್ಲಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಇದರಿಂದಾಗಿ ಎಷ್ಟೋ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿತ್ತು. ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ನೀಗುವುದಕ್ಕಾಗಿಯೇ ಈ 70 ಕೋಟಿ ರೂಪಾಯಿಗಳನ್ನು ನೆದರ್‌ಲ್ಯಾಂಡ್ ಸರ್ಕಾರ ಬಿಡುಗಡೆ ಮಾಡಿತ್ತು. ಬಹುಶಃ ಕಳೆದ ವರ್ಷದಿಂದ ಈ ಕಾರ್ಯಕ್ರಮ ಆರಂಭವಾಗಿದೆ, ಅದು ಇನ್ನೂ ನಡೆಯುತ್ತಿದೆ. 1991ರಲ್ಲಿ ಬಿಡುಗಡೆ ಮಾಡಿದ ಹಣದ ಕೆಲಸ ಈಗಲೂ ನಡೆಯುತ್ತಿದೆ. ನೆದರ್‌ಲ್ಯಾಂಡ್ ಸರ್ಕಾರದವರು ಕೆಲವೊಂದು ಗೈಡ್‌ಲೈನ್ಸ್‌ಗಳನ್ನು ಕೊಟ್ಟು ಅದರ ಪ್ರಕಾರವೇ ಹಣ ಬಿಡುಗಡೆ ಮಾಡಿ ಯೋಜನೆ ಇಂಪ್ಲಿಮೆಂಟ್ ಮಾಡಬೇಕು ಎಂಬ ಷರತ್ತುಗಳನ್ನು ಹಾಕಿದ್ದರು. ಎಲ್ಲದರಲ್ಲೂ ಕಮೀಷನ್ ಸಿಗಬೇಕೆಂಬ ಮೆಂಟಾಲಿಟಿ ನಮ್ಮ ಅಧಿಕಾರಿಗಳಲ್ಲಿದೆ. ಆದರೆ ಈ ಯೋಜನೆ ಅನುಷ್ಠಾನದಲ್ಲಿ ಅದಕ್ಕೆ ಅವಕಾಶ

ಇಲ್ಲದ್ದರಿಂದ ಆ ಯೋಜನೆಯನ್ನೇ ಇಂಪ್ಲಿಮೆಂಟ್ ಮಾಡಲು ಹೋಗಲಿಲ್ಲ. ನೆದರ್‌ಲ್ಯಾಂಡ್ ಸರ್ಕಾರದವರು ಆ ಹಣವನ್ನು ವಾಪಸ್ ತೆಗೆದುಕೊಂಡು ಹೋಗಲು ಹೊರಟಿದ್ದರು. ಆದರೆ ಇಲ್ಲಿಯ ಕೆಲವು ರಾಜಕಾರಣಿಗಳು ಒತ್ತಡ ತಂದಿದ್ದರಿಂದ, ಕಳೆದ ವರ್ಷದಿಂದ ಈ ಯೋಜನೆ ಪ್ರಾರಂಭವಾಗಿದೆ. ಈ ಯೋಜನೆಯ ಅನುಷ್ಠಾನ ಕಾರ್ಯ ಎಲ್ಲಿಯವರೆಗೆ ಬಂದಿದೆ ಎಂಬ ಬಗ್ಗೆ ಕೂಡ ಸರ್ಕಾರ ವಿವರಗಳನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ. ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕುಗಳ ಎಷ್ಟು ಪಟ್ಟಣಗಳು, ನಗರಗಳು ಕುಡಿಯುವ ನೀರಿನ ಸಮಸ್ಯೆಯಿಂದ ಪರಿತಪಿಸುತ್ತಿವೆ ಎಂಬ ಬಗ್ಗೆ ನಮ್ಮ ಬಳಿಯಿರುವ ಮಾಹಿತಿಯನ್ನು ಆಧರಿಸಿ ನಾವು ಇಲ್ಲಿ ಹೇಳಿದ್ದೇವೆ. ಅದರ ಬಗ್ಗೆ ಸರ್ಕಾರದ ವತಿಯಿಂದಲೂ ಕೂಡ ಮಾಹಿತಿಗಳನ್ನು ಸದನಕ್ಕೆ ಕೊಡಬೇಕಾಗುತ್ತದೆ. ಯಾವ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆಗೆ ಒಳಗಾಗಿವೆ? ಇದರ ಬಗ್ಗೆ ಎಷ್ಟು ಪ್ರಸ್ತಾವನೆಗಳು ಬಂದಿವೆ? ಎಂಬ ವಿವರ ಸರ್ಕಾರ ನೀಡಬೇಕು. ಜಿಲ್ಲಾಧಿಕಾರಿಗಳಿಂದ ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಪರಿಹಾರ ಕಾರ್ಯಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ ಎಂಬ ಬಗ್ಗೆ ಸರ್ಕಾರಕ್ಕೆ ಹಲವಾರು ಪ್ರಸ್ತಾವನೆಗಳು ಬಂದಿವೆ. ಅದರ ವಿವರಗಳನ್ನೂ ಕೂಡ ಸರ್ಕಾರ ನೀಡಬೇಕು. ಇದರಲ್ಲಿ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಅದರಲ್ಲಿ ಎಷ್ಟು ಹಣ ಖರ್ಚು ಮಾಡಿದೆ? ಇನ್ನೂ ಆಗಬೇಕಾದಂತಹ ಕೆಲಸಗಳು ಯಾವುವು? ಈಗ ಅಲ್ಲಿ ಪರಿಸ್ಥಿತಿ ಹೇಗಿದೆ? ಇದರ ಬಗ್ಗೆ ಡೀಟೈಲಾದಂತಹ ವಿವರಗಳನ್ನು ಈ ಸರ್ಕಾರ ಇವತ್ತು ಈ ಸದನಕ್ಕೆ ಕೊಡಬೇಕಾಗುತ್ತದೆ ಎಂಬ ಮಾತನ್ನು ನಾನಿಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಷಯವೇನೆಂದರೆ, ಇವತ್ತು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅಂತರ್ಜಲದ ಮಟ್ಟ ಬಹಳ ಕಡಿಮೆಯಾಗುತ್ತಿದೆ. ಈಗಾಗಲೇ ನಾವು ಎಲ್ಲಾ ಕಡೆಗಳಲ್ಲಿ ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಇವತ್ತು ಎಲ್ಲಿಯಾದರೂ ಕುಡಿಯುವ ನೀರಿನ ಸಮಸ್ಯೆ ಇದೆ ಎಂದಾಕ್ಷಣ ನಾವು ಅಲ್ಲಿಗೊಂದು ಬೋರ್‌ವೆಲ್ ಅನ್ನು ಮಂಜೂರು ಮಾಡಿಬಿಡುತ್ತೇವೆ. ಕೆಲವೊಂದು ತಜ್ಞರ ಅಭಿಪ್ರಾಯದ ಪ್ರಕಾರ ನಾವು ಬಹಳಷ್ಟು ಬೋರ್‌ವೆಲ್‌ಗಳನ್ನು ತೋಡುತ್ತಾ ಹೋದರೆ ಅಂತರ್ಜಲ ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು ಅದರಿಂದ ಪರಿಸ್ಥಿತಿಯೂ ಕೂಡ ಬಹಳ ಗಂಭೀರವಾಗಬಹುದಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಈ ಅಂತರ್ಜಲ ಮಟ್ಟವನ್ನು ನಾವು ಕಾಯ್ದುಕೊಂಡು ಹೋದರೆ ಮಾತ್ರ ಏನಾದರೂ ಒಂದು ಪರಿಹಾರ ಸಿಗಲಿಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದಲ್ಲಿ ನಾವು ಬಹಳ ತೊಂದರೆಗೆ ಈಡಾಗಬೇಕಾಗುತ್ತದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನಮ್ಮಲ್ಲಿರುವಂತಹ ಕೆರೆಗಳನ್ನು ಉಳಿಸಿಕೊಳ್ಳುವಂತಹ ಕೆಲಸವನ್ನೂ ಕೂಡ ನಾವು ಮಾಡುತ್ತಿಲ್ಲ. ಇವತ್ತು ಎಷ್ಟೋ ಕೆರೆಗಳು ಬತ್ತಿ ಹೋಗುತ್ತಿವೆ. ಮತ್ತೆ ಕೆಲವು ಕೆರೆಗಳಲ್ಲಿ ಹೂಳು ತುಂಬಿ, ಹೂಳನ್ನು

ತೆಗೆಯಲಾರದಂತಹ ಪರಿಸ್ಥಿತಿಯಲ್ಲಿ ಆ ಕೆರೆಗಳು ಇವತ್ತು ಮುಚ್ಚಿ ಹೋಗುತ್ತಿವೆ. ದಾಖಲೆಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು 12.500 ಕೆರೆಗಳು ಇವತ್ತು ಮುಚ್ಚಿ ಹೋಗಿವೆ. ಇನ್ನು 25,000 ಕೆರೆಗಳಲ್ಲಿ ಹೂಳು ತುಂಬಿದೆ. ಅವುಗಳಲ್ಲಿ ಹೆಚ್ಚಿನ ಅಂತರ್ಜಲ ಸಂಗ್ರಹವಾಗದೇ ಅವೂ ಕೂಡ ಇವತ್ತು ಬತ್ತಿ ಹೋಗುವಂತಹ ಪರಿಸ್ಥಿತಿಯಲ್ಲಿವೆ. ಇನ್ನೊಂದು ಆತಂಕಕಾರಿಯಾದ ವಿಷಯವೇನೆಂದರೆ, ಬೆಂಗಳೂರು ನಗರದಲ್ಲಿ ಕೆಲವೊಂದು ಕೆರೆಗಳು ಮುಚ್ಚಿ ಹೋದ ಜಾಗಗಳನ್ನು ಇವತ್ತು ಬಿಡಿಎನವರು ಅಕ್ವೈರ್ ಮಾಡಿಕೊಂಡು ಅಲ್ಲಿ ಲೇಔಟ್‌ಗಳನ್ನು ರಚಿಸುವಂತಹ ಸಂಚೂ ಕೂಡ ಇವತ್ತು ನಡೆಯುತ್ತಿದೆ. ಮುಚ್ಚಿದ ಕೆರೆಗಳ ಜಾಗಗಳನ್ನು ಡೆವಲಪ್ ಮಾಡಿಸಿ ಅಲ್ಲಿ ಸೈಟುಗಳನ್ನು ರಚಿಸುವಂತಹ ವಿಚಾರದ ಬಗ್ಗೆ ಇಂದು ಬಿಡಿಎನವರು ಯೋಚಿಸುತ್ತಿರುವುದು ಬಹಳ ಆತಂಕಕಾರಿಯೇ ಸರಿ. ಈ ಬಗ್ಗೆ ಪತ್ರಿಕೆಗಳ ಸಂಪಾದಕೀಯಗಳಲ್ಲಿ ಸಹಾ ಉಲ್ಲೇಖವಾಗಿದೆ. ಪರಿಸ್ಥಿತಿ ಈ ರೀತಿಯಾದರೆ ಹೇಗೆ? ಇರುವ ಕೆರೆಗಳೆಲ್ಲವೂ ಕೂಡ ನಾಳೆ ಬತ್ತಿ ಹೋದರೆ ನಾವು ಇನ್ನೂ ಭಯಂಕರವಾದ ರೀತಿಯಲ್ಲಿ ನಾವು ಕುಡಿಯುವ ನೀರಿನ ಅಭಾವದ ಭೀತಿಯನ್ನು ಎದುರಿಸಬೇಕಾಗುತ್ತದೆ. ನಾವು ಎಲ್ಲಿಯವರೆಗೆ ಕೆರೆಗಳನ್ನು ಸರಿಯಾದ ದಿಕ್ಕಿನಲ್ಲಿ ಸಂರಕ್ಷಣೆ ಮಾಡಿಕೊಂಡು ಹೊಗುವುದಿಲ್ಲವೋ ಅಲ್ಲಿಯವರೆಗೆ ನಾವು ಕೇವಲ ತಾತ್ಕಾಲಿಕ ಪರಿಹಾರಗಳನ್ನೇ ಹುಡುಕಿಕೊಂಡು ಹೋಗಬೇಕಾಗುತ್ತದೆ. ಅದಕ್ಕಾಗಿ ಇದರ ಬಗ್ಗೆ ನಾವು ಹೆಚ್ಚಿನ ಚಿಂತನೆಯನ್ನು ಮಾಡಬೇಕಾಗಿದೆ. ಇದರ ಜೊತೆಗೆ ಮಳೆ ನೀರು ವ್ಯರ್ಥವಾಗಿ ಸಮುದ್ರಕ್ಕೆ ಹರಿದು ಹೋಗುವುದನ್ನು ನಾವು ಇವತ್ತು ತಡೆಯಬೇಕಾಗಿದೆ. ಒಂದು ಅಂದಾಜಿನ ಪ್ರಕಾರ ಸುಮಾರು 34,440 ಟಿಎಂಸಿಗಳಷ್ಟು ಮಳೆ ನೀರು ನದಿ ಮೂಲಕ ಸಮುದ್ರಕ್ಕೆ ಸೇರಿ ವೇಸ್ಟ್ ಆಗುತ್ತಿದೆ. ಅದೇ ರೀತಿಯಲ್ಲಿ ನಮ್ಮ ಕರಾವಳಿ ಭಾಗದಲ್ಲಿ 2,000 ಟಿಎಂಸಿಗಳಷ್ಟು ನೀರು ಹರಿದು ಹೋಗಿ ಸಮುದ್ರ ಸೇರುತ್ತಿದೆ. ಈ ರೀತಿ ನೀರು ವೇಸ್ಟ್ ಆಗುತ್ತಿದೆ. ನಾವು ಇವತ್ತು ಮಳೆ ನೀರನ್ನು ತಡೆ ಹಿಡಿಯುವಂತಹ ಕೆಲಸ ಮಾಡಿದಾಗ ಮಾತ್ರ ನಾವು ಏನಾದರೂ ಒಂದು ಸುಧಾರಣೆಯನ್ನು ಕಾಣಲಿಕ್ಕೆ ಸಾಧ್ಯವಿದೆ. ನೀರನ್ನು ವೇಸ್ಟ್ ಮಾಡಬಾರದು. ನೀರನ್ನು ವೇಸ್ಟಾಗದ ರೀತಿಯಲ್ಲಿ ತೆಗೆದುಕೊಂಡು ಹೋಗುವುದಷ್ಟೇ ಅಲ್ಲ, ನಾವು ಮಳೆ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡರೆ ಅಥವಾ ಹಿಡಿದಿಟ್ಟುಕೊಂಡರೆ, ಬಹುಶಃ ಅದರಿಂದಲೂ ಸಹಿತ ನಾವು ಸಾಕಷ್ಟು ಸಮಸ್ಯೆಯನ್ನು ನಿವಾರಿಸಬಹುದು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಎನ್‌ವೈರನ್‌ಮೆಂಟ್ ಅಂಡ್ ಹೆಲ್ತ್ ಫೌಂಡೇಷನ್ ಎಂಬ ಸಿಟಿ ಬೇಸ್ಡ್ ಸೋಷಿಯಲ್ ಆರ್ಗನೈಸೇಷನ್ ರಿಸರ್ಚ್ ಮಾಡಿ ಬೆಂಗಳೂರು ನಗರ ನೀರು ಸರಬರಾಜು ಮಂಡಳಿಯೊಂದಿಗೆ ಸಮಾಲೋಚನೆ ಮಾಡಿ ಕೆಲವೊಂದು ಒಳ್ಳೆಯ ಸಲಹೆಗಳನ್ನು ನೀಡಿದ್ದಾರೆ. ಬಟ್ಟೆ ಒಗೆಯಲು, ಕಾರು ತೊಳೆಯಲು ಹಿಡಿದಿಟ್ಟುಕೊಳ್ಳುವ ಮಳೆ ನೀರನ್ನು ಬಳಸಬಹುದಾಗಿದೆ. ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಕೆಲವೊಂದು ಯೋಜನೆಗಳನ್ನು ನಾವು ಮಾಡಿ ಅಂತಹ ನೀರನ್ನು

ಇಂತಹ ಕೆಲಸಗಳಿಗಾಗಿ ಬಳಸಿಕೊಂಡಲ್ಲಿ ಬಹುಶಃ ಕುಡಿಯುವ ನೀರಿನ ಸಮಸ್ಯೆ ಉಂಟಾಗಲಿಕ್ಕಿಲ್ಲ.

5-30 ಪಿ.ಎಂ

ಅವರು ಬಹಳ ಡೀಟೈಲಾಗಿ ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಬಹುಶಃ ಸರ್ಕಾರದ ಗಮನಕ್ಕೆ ತೆಗೆದುಕೊಂಡರೆ ಬಹಳಷ್ಟು ಕೆಲಸಗಳನ್ನು ಮಾಡಬಹುದು. ಕುಡಿಯುವ ನೀರಿನ ಸಮಸ್ಯೆಗೆ ಏನಾದರೂ ಪರಿಹಾರ ಹುಡುಕಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಮಿಳುನಾಡಿನಲ್ಲಿ ಈ ವ್ಯವಸ್ಥೆ ಇದೆ. ತಮಿಳುನಾಡಿನಲ್ಲಿ ಯಾರಾದರೂ ಒಬ್ಬ ಬಿಲ್ಡರ್ ಹೊಸದಾಗಿ ಬಿಲ್ಡಿಂಗ್ ಕಟ್ಟಿಸಬೇಕಾದರೆ ಬಿಲ್ಡಿಂಗ್ ಮೇಲೆ ಮಳೆ ನೀರು ಹಿಡಿದು ಇಟ್ಟುಕೊಳ್ಳುವ ಟ್ಯಾಂಕ್ ಕಟ್ಟುವುದು, ಸಂಪ್ ಕಟ್ಟುವುದು ಇದನ್ನು ಮಾಡಲೇಬೇಕು ಎಂದು ಮ್ಯಾಂಡೆಟರಿಯಾಗಿ ಬಿಲ್ಡಿಂಗ್ ಪರ್ಮಿಷನ್ ಕೊಡುವಾಗ ಕಂಡೀಷನ್ ಹಾಕುತ್ತಿದ್ದಾರೆ. ಆ ಬಿಲ್ಡಿಂಗ್‌ನಲ್ಲಿ ಇದ್ದಂತಹ ಜನರಿಗೆ ಇವತ್ತು ಏನಾದರೂ ವಾಶಿಂಗ್ ಸಲುವಾಗಿ ನೀರು ಕಾರು ತೊಳೆಯುವುದಕ್ಕೆ ನೀರು, ಜಳಕ ಮಾಡುವುದಕ್ಕೆ ನೀರು ಬೇಕಾದರೆ ಟ್ಯಾಂಕ್‌ನಿಂದ ಬಳಸಿಕೊಳ್ಳಬಹುದು. ಬಹುಶಃ ಕ್ವಾಂಟಿಟಿ ಹೆಚ್ಚು ಕಡಿಮೆ ಮಾಡಬಹುದು. ಇಂತಹ ವಿಷಯಗಳನ್ನು ನಾವು ಕೂಲಂಕುಷವಾಗಿ ಚರ್ಚೆ ಮಾಡಿದರೆ ಬಹಳಷ್ಟು ನಾವು ಈ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಿಕ್ಕೆ ಸಾಧ್ಯ ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರ ರಿಪೋರ್ಟ್ ಪ್ರಕಾರ ನಮ್ಮ ಬೆಂಗಳೂರಿನಲ್ಲಿ 568 ಕೆರೆಗಳಿದ್ದವು. ಹಿಂದಿನ 20ನೇ ಶತಮಾನದಲ್ಲಿ ಇದ್ದಂತಹ 568 ಕೆರೆಗಳೂ ಬತ್ತಿ ಹೋಗಿವೆ. 1981ನೇ ಇಸವಿಯಿಂದ ಇಲ್ಲಿಯವರೆಗೆ 320 ಕೆರೆಗಳು ಇವತ್ತು ಬತ್ತಿ ಹೋಗಿವೆ. ಹೀಗಾಗಿ ನಾವು ಈ ಯೋಜನೆಯನ್ನು ಮಾಡಿದರೆ ಬಹಳಷ್ಟು ಬದಲಾವಣೆಯಾಗುತ್ತದೆ. ಏಕೆಂದರೆ, ಬೆಂಗಳೂರಿನ ಪಾಪ್ಯುಲೇಷನ್ ತೆಗೆದುಕೊಂಡರೆ ಪ್ರತಿ 10 ವರ್ಷಕ್ಕೊಮ್ಮೆ 90 ಪರ್ಸೆಂಟ್ ಗ್ರೋತ್ ಆಗುತ್ತದೆ. ಅದನ್ನು ಲೆಕ್ಕ ಹಾಕಿದರೆ ಇನ್ನು ಎಷ್ಟು ಕುಡಿಯುವ ನೀರಿನ ಯೋಜನೆಗಳನ್ನು ಮಾಡಿದರೂ ಮುಂದೆ ಬರುವಂತಹ ಜನಸಂಖ್ಯೆಗೆ ಸಾಲುವುದಿಲ್ಲ. ಫ್ಯೂಚರ್ ಪ್ಲಾನ್ ಮಾಡಬೇಕು. ಆ ಫ್ಯೂಚರ್ ಆ್ಯಂಬಿಷನ್ ಇಟ್ಟುಕೊಂಡು ನಾವು ಕೆಲಸ ಮಾಡಿದರೆ ಈ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಚೆಕ್ ಡ್ಯಾಮ್ ಕಟ್ಟುವುದು, ಅಲ್ಲಿರುವಂತಹ ಟ್ಯಾಂಕ್‌ಗಳನ್ನು ಸರಿಯಾಗಿ ನಡೆಸುವುದು, ಅಂತರ್ಜಲ ಮಟ್ಟವನ್ನು ನಾವು ಕಾಯ್ದುಕೊಂಡು ಹೋಗುವಂತಹ ಹಲವಾರು ಯೋಜನೆಗಳನ್ನು ಕೈಗೊಂಡರೆ ನಾವು ಈ ಕುಡಿಯುವ ನೀರಿನ ಸಮಸ್ಯೆಗೆ ಸರಿಯಾದ ದಿಕ್ಕಿನಲ್ಲಿ ವ್ಯವಸ್ಥೆ ಮಾಡಬಹುದು. ಇಲ್ಲದೇ ಇದ್ದರೆ ಎಲ್ಲಿ ಒಂದು ಕಡೆ ಸಮಸ್ಯೆ ಆಗಿದೆ ಅಲ್ಲಿ ಒಂದು ಬೋರ್‌ವೆಲ್ ಹಾಕಿ ನೀರು ತೆಗೆದುಕೊಂಡರೆ ಸಮಸ್ಯೆ ನಿವಾರಣೆ ಆಗುವುದಿಲ್ಲ. ಸರ್ಕಾರ ಈ ದಿಕ್ಕಿನಲ್ಲಿ ವಿಚಾರ ಮಾಡಬೇಕು. ಈಗ ಏನು ಕ್ರಮ ಕೈಗೊಂಡಿದ್ದಾರೆ ಅದರ

ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಹಲವಾರು ಯೋಜನೆಗಳು ಗ್ರಾಮೀಣ ಪ್ರದೇಶಗಳಲ್ಲಿರುತ್ತವೆ. ಕೆಲವು ನಗರ ಪ್ರದೇಶಗಳಲ್ಲಿರುತ್ತವೆ. ವಿದ್ಯುತ್ತಿನ ಅಭಾವದಿಂದ ಸರಿಯಾದ ರೀತಿಯಿಂದ ಕಂಟಿನ್ಯೂಯಸ್ಸಾಗಿ ವಿದ್ಯುತ್ ಪೂರೈಕೆ ಇಲ್ಲದೆ ಇದ್ದುದರಿಂದ ನೀರು ಪಂಪ್ ಮಾಡುವುದಕ್ಕೆ ಆಗುವುದಿಲ್ಲ. ಪಂಪ್ ಮಾಡುವುದಕ್ಕೆ ಆಗದೆ ಕುಡಿಯುವ ನೀರಿನ ಸಮಸ್ಯೆ ಎಷ್ಟೋ ಗ್ರಾಮಗಳಲ್ಲಿ ತಲೆದೋರಿದೆ. ಎಷ್ಟೋ ಕಡೆ ಬೋರ್‌ವೆಲ್‌ಗಳು ಕೆಟ್ಟುಹೋಗಿವೆ. ಅದರ ಅಂಕಿ ಸಂಖ್ಯೆ ನನ್ನ ಬಳಿ ಇದೆ. ಸಾವಿರಾರು ಬೋರ್‌ವೆಲ್‌ಗಳು ಕೆಟ್ಟು ಹೋಗಿವೆ. ಅದನ್ನು ತಕ್ಷಣ ರಿಪೇರಿ ಮಾಡದೆ ಇರುವುದರಿಂದ ಇವತ್ತು ಎಷ್ಟೋ ಕಡೆ ಕುಡಿಯುವ ನೀರಿನ ಸಮಸ್ಯೆ ಇದೆ. ವಿದ್ಯುತ್ತನ್ನು ಸರಿಯಾಗಿ ಪೂರೈಕೆ ಮಾಡಬೇಕು. ಕುಡಿಯುವ ನೀರಿನ ಯೋಜನೆಯಲ್ಲಿ ಯಾವಾಗಲೂ ವಿದ್ಯುತ್ತಿನ ಅಭಾವ ಆಗಬಾರದು, ಪೂರ್ಣವಾಗಿ ಯಾವುದೇ ಅಡೆತಡೆ ಇಲ್ಲದೆ ವಿದ್ಯುತ್ ಪೂರೈಕೆ ಆಗಬೇಕು. ಅಂತರ್ಜಲ ಮಟ್ಟವನ್ನು ಕಾಯ್ದುಕೊಂಡು ಹೋಗುವುದು ಆಗಬೇಕು. ಬೋರ್‌ವೆಲ್ ಎಲ್ಲಾದರೂ ಕೆಟ್ಟಿದ್ದರೆ ತಕ್ಷಣ ರಿಪೇರಿ ಆಗುವ ವ್ಯವಸ್ಥೆ ಬರಬೇಕು. ಸರಿಯಾಗಿ ಮೇಂಟೈನ್ ಮಾಡುವ ವ್ಯವಸ್ಥೆ ಆಗಬೇಕು. ಎಲ್ಲಿ ಕುಡಿಯುವ ನೀರಿನ ಅಭಾವ ಇದೆ, ಅದನ್ನು ಸರಿಪಡಿಸುವುದಕ್ಕೆ ತಕ್ಷಣ ಕ್ರಮ ಕೈಗೊಳ್ಳುವುದು ಆಗಬೇಕು. ಈ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಿದರೆ ಜನ ಬದುಕುತ್ತಾರೆ. ಜನರ ಸಮಸ್ಯೆ ನಿವಾರಣೆಯಾಗುವುದಕ್ಕೆ ಸಾಧ್ಯ ಇದೆ. ಆ ದಿಸೆಯಲ್ಲಿ ಸರ್ಕಾರ ವಿಚಾರ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಛೇರ್ಮನರವರೇ, ನಿಯಮ 69ರ ಪ್ರಕಾರ ನಮ್ಮ ಪಕ್ಷದವರು ಮತ್ತು ಇತರೆ ಪಕ್ಷದ ಸದಸ್ಯರು ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದ್ದೆವು. ಮಾನ್ಯ ಅಧ್ಯಕ್ಷರು ಜೆಡಿ(ಯು) ಮತ್ತು ಜೆಡಿ(ಎಸ್) ಇಬ್ಬರೂ ಈ ಒಟ್ಟಿಗೆ ಮಾತನಾಡಿ ಎಂದು ಹೇಳಿದ್ದರು. ಈಗಾಗಲೇ ಒಂದು ಪಕ್ಷದವರು ಮಾತನಾಡಿದ್ದಾರೆ. ಈಗ ನಮ್ಮ ಕಡೆಯವರು ಮಾತನಾಡುತ್ತಾರೆ.

+ ಛೇರ್ಮನ್: ಮಾನ್ಯ ಅಧ್ಯಕ್ಷರು ಕೊಟ್ಟಂತಹ ಲಿಸ್ಟ್ ನನ್ನ ಬಳಿ ಇದೆ. ಅದರಲ್ಲಿರುವವರು ಮಾತನಾಡಿದ ಮೇಲೆ ಬೇರೆಯವರು ಮಾತನಾಡಲಿ ಲಿಸ್ಟ್‌ನಲ್ಲಿ ಇಲ್ಲದೆ ಇರುವವರಿಗೆ ನಾನು ಅವಕಾಶ ಕೊಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಸದಾನಂದಗೌಡರು ಈಗ ಮಾತನಾಡಲಿ, ಅವರು ಮಾತನಾಡಿದ ಮೇಲೆ ಮಾನ್ಯ ಸೋಮಶೇಖರ್‌ರವರು ಮಾತನಾಡಲಿ. ಅಧ್ಯಕ್ಷರು ನಮಗೆ ಚರ್ಚೆಯನ್ನು ರೂಲ್ 69ರಲ್ಲಿ ತೆಗೆದುಕೊಳ್ಳುತ್ತೇವೆ ಎಲ್ಲರೂ ಮಾತನಾಡಿ ಎಂದು ಹೇಳಿದ್ದಾರೆ.

+ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ಬಹುಶಃ ಬಹಳ ಬೇಸರದಿಂದ ಒಂದು ಮಾತನ್ನು ಸರ್ಕಾರದ ಬಗ್ಗೆ ಹೇಳಬೇಕಾಗಿದೆ.

ಛೇರ್ಮನ್ : ಬಹಳ ಜನ ಅಭಿಪ್ರಾಯ ವ್ಯಕ್ತ ಮಾಡಬೇಕೆಂದು ಇರುವುದರಿಂದ ಸ್ವಲ್ಪ ಬ್ರೀಫಾಗಿ ಮಾತನಾಡಿದರೆ ಉತ್ತಮ. ಇದಕ್ಕೆ ರಿಪ್ಲೈ ಬೇಕು.

ಶ್ರೀ ಡಿ.ವಿ.ಸದಾನಂದಗೌಡ: ನೇರ ಆರೋಪ ಈ ಸರ್ಕಾರದ ಮೇಲೆ ಇದೆ. ಗ್ರಾಮೀಣ ಪ್ರದೇಶದ ಜನರ ಮೂಲಭೂತ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡುವ ವ್ಯವಸ್ಥೆ ಈ ಸರ್ಕಾರದಲ್ಲಿ ಇಲ್ಲ. ಇವರು ಚಿಂತನೆ ಮಾಡುವ ಬದಲು ಅವರ ರಾಜಕೀಯ ಬೇಳೆಯನ್ನು ಬೇರೆ ಬೇರೆ ಹಂತದಲ್ಲಿ ಯಾವ ರೀತಿ ಬೇಯಿಸಬೇಕೆಂದು ಆಲೋಚನೆ ಮಾಡುತ್ತಿದ್ದಾರೆ. ಈ ಸದನದಲ್ಲಿ ಸುಮಾರು 10 ದಿನಗಳ ಹಿಂದೆ ನೋಟಿಸ್ ಕೊಟ್ಟಿದ್ದೇವೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಬ್ಬರೂ ಕೂಡ ಲಭ್ಯ ಇಲ್ಲದ ಪರಿಸ್ಥಿತಿ ಕಳೆದ ಮೂರು-ನಾಲ್ಕು ದಿನಗಳಿಂದ ಸದನದಲ್ಲಿ ಆಗಿದೆ. ಕುಡಿಯುವ ನೀರಿನ ಸಮಸ್ಯೆಗೆ ಆದ್ಯತೆ ಕೊಡಬೇಕಾದ ಸರ್ಕಾರ ಇವರು ಬಾಕಿ ತಿದ್ದುಪಡಿಗಳಿಗೆ ಆದ್ಯತೆ ಕೊಡುತ್ತಾರೆ. ಇವರಿಗೆ ಸಹಕಾರ ಸಂಘಗಳ ಕಾಯಿದೆ ತಿದ್ದುಪಡಿ ಆಗಬೇಕು. ಮೂಲಭೂತ ಸಮಸ್ಯೆ ಇಡೀ ಕರ್ನಾಟಕದ ಜನರ ನೀರಿನ ಬವಣೆ ಬಗ್ಗೆ ಮಾತನಾಡುವುದಕ್ಕೆ ಪುರುಸೊತ್ತು ಇಲ್ಲ. ಸಹಕಾರಿ ಸಂಘದ ಕಾಯಿದೆ ತಿದ್ದುಪಡಿ ಮಾಡಿ ತುರ್ತಾಗಿ ಅವರ ಜನರಿಗೆ ಅಧಿಕಾರದ ಕುರ್ಚಿ ಕೊಡುವುದಕ್ಕೆ ಆತುರ ಇದೆ. ನೀರಿನ ಬಗ್ಗೆ ಈ ಸರ್ಕಾರ ರಾಜಕೀಯ ಮಾಡುತ್ತದೆ ಎನ್ನುವ ಆರೋಪವನ್ನು ಮಾಡುತ್ತಿದ್ದೇನೆ.

ಶ್ರೀ ಬಿ.ಕಾಗೋಡು ತಿಮ್ಮಪ್ಪ: ಅದು ಮಾಡುತ್ತೀರಿ, ಇದು ಮಾಡುತ್ತೀರಿ ಎಂದು ಹೇಳುವ ಬದಲು ವಿಷಯ ಪ್ರಸ್ತಾಪ ಮಾಡಿದರೆ ಒಳ್ಳೆಯದು.

ಶ್ರೀ ಡಿ.ವಿ.ಸದಾನಂದಗೌಡ: ಕಾಗೋಡು ತಿಮ್ಮಪ್ಪನವರೇ, ತಮಗೆ ಬೇಕಾದಷ್ಟು ನೀರಿನ ವ್ಯವಸ್ಥೆ ಇರಬಹುದು, ನಿಮಗೆ ಸಾಮಾನ್ಯ ಜನರ ಬವಣೆ ಗೊತ್ತಿಲ್ಲ. ಒಂದು ಮಾತು ಕೇಳುತ್ತೇನೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯ ಸಚಿವರಿದ್ದೀರಿ, ಇಡೀ ಸಮಾಜ ಕಲ್ಯಾಣ ಇಲಾಖೆ ಕೈಯಲ್ಲಿ ಇಟ್ಟುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಚಾರ ಏನು ಹೇಳುತ್ತೀರಿ, ಇವತ್ತು ಆ ಜನರಿಗೆ ಕುಡಿಯುವುದಕ್ಕೆ ನೀರು ಇದೆಯೋ ಇಲ್ಲವೆಂದು ನೋಡಿದ್ದೀರಾ?

ಶ್ರೀ ಬಿ.ಕಾಗೋಡು ತಿಮ್ಮಪ್ಪ: ಎಲ್ಲ ಕಡೆ ನನ್ನ ಕ್ಷೇತ್ರದಲ್ಲೂ ಸಮಸ್ಯೆ ಇದೆ. ಜಿಲ್ಲಾ ಪಂಚಾಯಿತಿ ಸದಸ್ಯರಿದ್ದೀರಿ, ಜಿಲ್ಲಾ ಪಂಚಾಯಿತಿಯಲ್ಲಿ ಬಂದಂತ ಹಣವನ್ನು ಏಕೆ ಖರ್ಚು ಮಾಡಲಿಲ್ಲ. ಕುಡಿಯುವ ನೀರಿನ ಯೋಜನೆಗೆ ಏಕೆ ಉಪಯೋಗ ಮಾಡಲಿಲ್ಲ.

(ಗೊಂದಲ)

ಶ್ರೀ ಸಿ.ಆರ್.ಸಗೀರ್ ಅಹಮದ್: ಅವರು ಯಾವ ಭಾಗದಿಂದ ಬಂದಿದ್ದಾರೆ ಕೇಳಿ ಅವರು ಮಲೆನಾಡಿನಿಂದ ಬಂದವರು.

ಶ್ರೀ ಡಿ.ವಿ.ಸದಾನಂದಗೌಡ: ತಾವು ಸ್ವೀಡನ್‌ನಲ್ಲಿ ಬಾಟಲಿ ನೀರು ಕುಡಿಯುತ್ತಿದ್ದಿರಿ, ಇಲ್ಲಿಯ ಜನರಿಗೆ ಹನಿ ನೀರು ಸಿಗುತ್ತಿಲ್ಲ. ಇದನ್ನು ನಾವು ನೋಡಬೇಕಾಗಿದೆ.

ಛೇರ್ಮನ್: ತಾವು ಆ ಕಡೆ ನೋಡದೆ ರಾಜಕೀಯ ಕಡಿಮೆ ಮಾಡಿ ಮಾತನಾಡಿದರೆ ಯಾವುದೂ ಗೊಂದಲ ಉದ್ಭವವಾಗುವುದಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಕುಡಿಯುವ ನೀರಿನ ವಿಷಯದಲ್ಲಿ ಈ ಸರ್ಕಾರ ರಾಜಕಾರಣ ಮಾಡುತ್ತಿದೆ. ಅದು ಮಾಡಬಾರದು. 10 ದಿವಸಗಳ ಹಿಂದೆ ಸದನದಲ್ಲಿ ಇದು ಅತ್ಯಂತ ಗಂಭೀರವಾದ ವಿಚಾರವೆಂದು ಪ್ರಸ್ತಾಪ ಮಾಡುವಂತಹ ಪ್ರಯತ್ನವನ್ನು ವಿರೋಧ ಪಕ್ಷದವರು ಮತ್ತು ನಮ್ಮ ಎಲ್ಲ ಸಹಪಾಠಿ ಸದಸ್ಯರು ಸೇರಿ ಮಾಡಿದ್ದೇವೆ. ನಿಜವಾಗಿ ಸಾಮಾನ್ಯ ಜನರ ನೀರಿನ ಸಮಸ್ಯೆ ಬಗ್ಗೆ ಇವರಿಗೇನಾದರೂ ಅಲ್ಪ ಕಾಳಜಿ ಇದ್ದಿದ್ದರೆ ತಕ್ಷಣ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಬಹುದಾಗಿತ್ತು. ಮಾನ್ಯ ಸಚಿವರು ಬಾಕಿ ಎಲ್ಲ ವಿಚಾರ ಅಲ್ಲಿ ಇರಲಿ, ಕುಡಿಯುವ ನೀರಿನ ತೊಂದರೆಯಾಗಿದೆ, ಅದರ ಬಗ್ಗೆ ಚರ್ಚೆ ಮಾಡೋಣ ಎಂದಿದ್ದರೆ ಇದು ನಿಜವಾಗಿ ರಾಜಕೀಯ ಮೌಲ್ಯಕ್ಕೆ ಒತ್ತು ಕೊಡುವ ರಾಜಕಾರಣ ಆಗುತ್ತಿತ್ತು. ಆದರೆ ಇದನ್ನು ನೀವು ಮಾಡಲಿಲ್ಲ. ಇಷ್ಟಾಗಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಇವತ್ತು ತೆಗೆದುಕೊಳ್ಳುವುದು ಬೇಡ, ನಾಳೆ ತೆಗೆದುಕೊಳ್ಳೋಣವೆಂದು ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಜನರಿಗೆ ಒಂದೊಂದು ದಿವಸವೂ ಕೂಡ ನೀರು ಕಡಿಮೆಯಾಗುತ್ತಿರುವ ಬಗ್ಗೆ ನಾವು ಯೋಚನೆ ಮಾಡಬೇಕು. ಅಧಿಕಾರದ ಕುರ್ಚಿಯಲ್ಲಿ ಕುಳಿತ ಕೂಡಲೇ ಸಾಮಾನ್ಯ ಜನರ ಬದುಕಿನ ಬವಣೆಯನ್ನು ಮರೆಯುವುದು ಸರಿಯಲ್ಲ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಮೊನ್ನೆ ದಿವಸ ಈ ಸದನದಲ್ಲಿ ಪಂಚಾಯತ್ ರಾಜ್ ತಿದ್ದುಪಡಿ ಮತ್ತು ಕೋ-ಅಪರೇಟಿವ್ ಸೊಸೈಟಿ ಬಿಲ್ ಬಂದಾಗ ತಕ್ಷಣ ಇದು ಪಾಸ್ ಆಗಬೇಕೆಂದು ಹಟ ಮಾಡಿದರಲ್ಲ ಅದೇ ರೀತಿ ಕುಡಿಯುವ ನೀರಿನ ಸಮಸ್ಯೆ ತಕ್ಷಣ ಪರಿಹಾರವಾಗಬೇಕೆಂದು ಏಕೆ ಒತ್ತಾಯ ಮಾಡಲಿಲ್ಲ? ಆದ್ದರಿಂದಲೇ ಇವತ್ತಿನ ದಿವಸ ಸರ್ಕಾರವನ್ನು ಎಚ್ಚತ್ತುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಮತ್ತೆ ಇದಕ್ಕಿಂತ ಹೆಚ್ಚು ಮಾತುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ರಾಜ್ಯದಲ್ಲಿ ಬರ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿದ ಕೂಡಲೇ ದಿನಾಂಕ 8-02-2000ರಂದು ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. ಆದರೆ, ಈಗಾಗಲೇ ಮಾರ್ಚ್ ಮತ್ತು ಏಪ್ರಿಲ್ ತಿಂಗಳು ಮುಗಿದು

ಹೋಯಿತು. ಇದುವರೆಗೂ ಯಾವುದೇ ಸಮಸ್ಯೆ ವಿಚಾರದಲ್ಲಿ ಪರಿಹಾರ ಮಾಡಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಫೆಬ್ರವರಿ 8ನೇ ತಾರೀಖು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ವಿಷಯ ಪತ್ರಿಕೆಯಲ್ಲಿ ಬಂದಿದೆ. ''ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ಭಾಗಗಳು ಸೇರಿದಂತೆ ಮತ್ತು ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ ಪರಿಸ್ಥಿತಿಯನ್ನು ಅಧ್ಯಯನ ಮಾಡಲಿಕ್ಕೆ ಕೇಂದ್ರ ತಂಡವನ್ನು ಕಳುಹಿಸಿಕೊಡುವಂತೆ ಕರ್ನಾಟಕ ಇಂದು ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿತು. ಮಾನ್ಯ ಮುಖ್ಯಮಂತ್ರಿ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಪ್ರಧಾನ ಮಂತ್ರಿ ಶ್ರೀ ಅಟಲ್ ಬಿಹಾರಿ ವಾಜಪೇಯಿರವರಿಗೆ ಒಂದು ಸುದೀರ್ಘವಾದ ಮನವಿಪತ್ರವನ್ನು ಡಿಸೆಂಬರ್ ತಿಂಗಳಲ್ಲಿ ಸಲ್ಲಿಸಿ 461.59 ಕೋಟಿ ರೂಪಾಯಿಗಳ ನೆರವು ಕೋರಿದ್ದಾರೆ, ಹಾಗೆಯೆ ಈಗಿನ ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಫೆಬ್ರವರಿ 8ನೇ ತಾರೀಖಿನ ದಿವಸ ಹೇಳಿದ್ದಾರೆ.'' ಕರ್ನಾಟಕ ರಾಜ್ಯದಲ್ಲಿ ನೀರಿನ ಅಭಾವ ಎಲ್ಲಾ ಕಡೆ ಇದೆ ಎಂದು ಸರ್ಕಾರಕ್ಕೆ ಗೊತ್ತಿದ್ದರೂ ಸಹ ಈ ವಿಷಯದ ಬಗ್ಗೆ ಮಾತನಾಡಬೇಕೆಂದರೂ ಅವರಿಗೆ ಮಾತನಾಡುವುದಕ್ಕೆ ಸಮಯವಿಲ್ಲ. ಈ ರೀತಿ ಆಗಬಾರದೆಂದು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾದ ಒಂದು ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ಇವರು ಆಡಳಿತ ನಡೆಸುತ್ತಿದ್ದಾರೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ನಾನು ಕೇಳುವುದೇನೆಂದರೆ, ಇವತ್ತಿನದಿವಸ ಜನ ಸಂಖ್ಯೆ ಜಾಸ್ತಿಯಾದ ಹಾಗೆ ಟ್ಯಾಂಕ್‌ಗಳು ದೊಡ್ಡದಾಗುವುದಿಲ್ಲ ಹಾಗೆಯೇ ಪಂಪಿನ ಹಾರ್ಸ್ ಪವರ್ ಜಾಸ್ತಿಯಾಗುವುದಿಲ್ಲ ಎಷ್ಟು ನೀರು ಇರುತ್ತದೆಯೋ ಅಷ್ಟೇ ಇರುತ್ತದೆ. ಇರುವಂಥ ನೀರನ್ನೇ ಜಾಸ್ತಿ ಜನ ಉಪಯೋಗ ಮಾಡಬೇಕಾಗುತ್ತದೆ, ಇದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ ವರ್ಷ ವರ್ಷವೂ ಈ ಪರಿಸ್ಥಿತಿ ಉದ್ಭವವಾಗುತ್ತದೆ ಎನ್ನತಕ್ಕಂಥದ್ದು ಗೊತ್ತಿದ್ದರೂ ಕೂಡ ಇದಕ್ಕೆ ಪೂರ್ವಭಾವಿಯಾಗಿ ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲವೆಂದು ನನ್ನ ಭಾವನೆಯಾಗಿದೆ. ಇವತ್ತಿನ ದಿವಸ ಎಷ್ಟೋ ಬೋರ್‌ವೆಲ್‌ಗಳಲ್ಲಿ ನೀರಿಲ್ಲ, ಇದಕ್ಕಾಗಿ ಎಷ್ಟು ಬೋರ್‌ವೆಲ್‌ಗಳನ್ನು ತೆಗೆಯಬೇಕೆಂದು ತಾವು ಆದೇಶ ಕೊಟ್ಟಿದ್ದೀರಿ? ಹಾಗೆಯೆ ಈಗ ಇರತಕ್ಕಂಥ ಎಷ್ಟು ಬೋರ್‌ವೆಲ್‌ಗಳನ್ನು ಡೀಪನ್ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೀರಿ? ಇದಕ್ಕೋಸ್ಕರ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗೆ ಎಷ್ಟು ಹಣವನ್ನು ತಕ್ಷಣ ಬಿಡುಗಡೆ ಮಾಡಿದ್ದೀರಿ? ಇದರ ಬಗ್ಗೆ ಸರ್ಕಾರ ಜನ ಪ್ರತಿನಿಧಿಗಳಿಗೆ ಅಥವಾ ಜನರಿಗೆ ತಿಳಿಸುವಂಥ ಒಂದು ಪ್ರಯತ್ನವನ್ನು ಮಾಡಲಿಲ್ಲ. ಇವತ್ತು ನಾನು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಪೂರ್ಣವಾಗಿ ಎಲ್ಲ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಮ್ಮ ನಾಯಕರು ಎಲ್ಲಾ ವಿಚಾರಗಳನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇನ್ನು ವಿಶ್ವಬ್ಯಾಂಕ್ ಯೋಜನೆಗಳ ಬಗ್ಗೆ ಇವತ್ತಿನ

ದಿವಸ ಹೇಳುವವರಿಲ್ಲ ಕೇಳುವವರಿಲ್ಲ ಎನ್ನತಕ್ಕಂಥದ್ದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಆದರೂ ಕೂಡ ಇದರ ಬಗ್ಗೆ ಯಾವುದೇ ರೀತಿಯ ಒಂದು ಜಿಜ್ಞಾಸೆಗಳು ನಡೆಯುತ್ತಿಲ್ಲ. ಇದರ ಬಗ್ಗೆ ಒಂದು ಒಳ್ಳೆಯ ವ್ಯವಸ್ಥೆಯಾಗಲೇಬೇಕು. ವಿಶ್ವಬ್ಯಾಂಕ್ ಅಧಿಕಾರಿಗಳ ಜೊತೆ ನಾಳೆ ಮಾತನಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಫೆಬ್ರವರಿ 8ನೇ ತಾರೀಖಿನ ದಿವಸ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಛೇರ್ಮನ್: ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತುರ್ತು ಸಲಹೆಗಳು ಇದ್ದರೆ ಮಾತ್ರ ಈಗ ಪ್ರಸ್ತಾಪ ಮಾಡಿ. ಉಳಿದ ವಿಷಯಗಳನ್ನು ಬೇಡಿಕೆ ಬಗ್ಗೆ ಚರ್ಚೆ ಮಾಡುವಂಥ ಸಮಯದಲ್ಲಿ ಪ್ರಸ್ತಾಪ ಮಾಡಬಹುದು. ಏಕೆಂದರೆ, ಬೇರೆ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ವಿ.ಸದಾನಂದಗೌಡ: ನಾನು ಕೆಲವು ಸಲಹೆಗಳನ್ನು ಮಾತ್ರ ಕೊಡುತ್ತೇನೆ. ಇವತ್ತಿನ ದಿವಸ ಹ್ಯಾಂಡ್ ಪಂಪ್‌ಗಳು ಕೆಟ್ಟು ಹೋದಾಗ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಅಥವಾ ಗ್ರಾಮ ಪಂಚಾಯತ್ ಇವರಲ್ಲಿ ಯಾರು ರಿಪೇರಿ ಮಾಡಬೇಕು ಎಂಬುದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಸದನಕ್ಕೆ ಒಂದು ಸ್ಪಷ್ಟನೆಯನ್ನು ಕೊಡಬೇಕು. ಒಂದು ವೇಳೆ ಗ್ರಾಮ ಪಂಚಾಯತ್‌ನವರೆ ಇದನ್ನು ಮಾಡಬೇಕೆಂದು ತಾವು ಹೇಳಬಹುದು. ಆದರೆ ಗ್ರಾಮ ಪಂಚಾಯತ್‌ನಲ್ಲಿರತಕ್ಕಂಥ ಅನುದಾನದಲ್ಲಿ ಈ ಕೆಲಸವನ್ನು ಮಾಡಿಸುವುದಕ್ಕೆ ಆಗುತ್ತದೆಯೆ? ಜಿಲ್ಲಾ ಪಂಚಾಯತ್‌ರವರಿಗೆ ರಿಪೇರಿ ಮಾಡಿ ಎಂದು ಹೇಳಿದರೆ ಅವರು ತಾಲ್ಲೂಕು ಪಂಚಾಯಿತಿಯವರು ಮಾಡುತ್ತಾರೆಂದು ಅವರ ಕಡೆಗೆ ಕೈ ತೋರಿಸುತ್ತಾರೆ. ಹಾಗೆಯೇ ತಾಲ್ಲೂಕು ಪಂಚಾಯತಿಯವರಿಗೆ ಕೇಳಿದರೆ ಅವರು ಗ್ರಾಮ ಪಂಚಾಯತಿಯವರ ಕಡೆಗೆ ಕೈ ತೋರಿಸುತ್ತಾರೆ. ಈ ರೀತಿಯಾದ ಒಂದು ಗೊಂದಲ ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಸೃಷ್ಟಿಯಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಕೈಗೊಳ್ಳಬೇಕಾದ ನಿರ್ಧಾರ ಏನೆಂದರೆ, ಕೆಟ್ಟು ಹೋಗಿರುವ ಪಂಪ್‌ಗಳನ್ನು ತಕ್ಷಣ ಇಂಥವರೇ ರಿಪೇರಿ ಮಾಡಬೇಕೆಂದು ಮತ್ತು ಇದಕ್ಕೆ ಬೇಕಾದ ಹಣವನ್ನು ಯಾರು ರಿಲೀಸ್ ಮಾಡಬೇಕೆಂಬುದನ್ನು ಒಂದು ಸ್ಪಷ್ಟ ಸೂಚನೆಯ ಮೂಲಕ ಸರ್ಕಾರ ತಿಳಿಸಬೇಕು. ತಾಲ್ಲೂಕು ಪಂಚಾಯತ್‌ನವರು ಪಂಪ್‌ಗಳನ್ನು ರಿಪೇರಿ ಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ಆದ್ದರಿಂದಲೇ ತಕ್ಷಣ ಹಣವನ್ನು ರಿಲೀಸ್ ಮಾಡಿ ತಾಲ್ಲೂಕು ಪಂಚಾಯತ್‌ರವರಿಗೆ ಒಂದು ನಿರ್ದೇಶನ ಕೊಟ್ಟು ಎಲ್ಲಾ ಪಂಪ್‌ಗಳನ್ನು ತಾಲ್ಲೂಕು ಪಂಚಾಯತ್‌ನವರೇ ರಿಪೇರಿ ಮಾಡಿ ಗ್ರಾಮ ಪಂಚಾಯತಿಗಳ ನಿರ್ವಹಣೆಗೆ ಕೊಡತಕ್ಕಂಥ ಒಂದು ವ್ಯವಸ್ಥೆ ಆಗಬೇಕು. ಒಂದು ವೇಳೆ ತಾಲ್ಲೂಕು ಪಂಚಾಯತಿಯಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ನಿಮ್ಮ ಆಡಳಿತ ವ್ಯವಸ್ಥೆಯಲ್ಲಿ ಕಂಡುಬಂದರೆ, ಗ್ರಾಮ ಪಂಚಾಯತಿಗೆ ನೇರವಾಗಿ ಹಣವನ್ನು

ಕೊಟ್ಟು ಈ ಕಾರ್ಯವನ್ನು ಅವರಿಗೆ ವಹಿಸಿಕೊಡಿ. ತಕ್ಷಣ ಆಲ್ಟರ್‌ನೇಟಿವ್ ವ್ಯವಸ್ಥೆಯನ್ನು ತಾವು ತಕ್ಷಣ ಮಾಡಬೇಕು. ಇವತ್ತಿನದಿವಸ ಸಾವಿರಾರು ಪಂಪ್ ಸೆಟ್‌ಗಳು ಕೆಟ್ಟು ಹೋಗಿದ್ದು, ಇದನ್ನು ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಇಲ್ಲ ಮತ್ತು ಜವಾಬ್ದಾರಿಯಿಂದ ನುಣುಚಿಕೊಳ್ಳತಕ್ಕಂಥ ವ್ಯವಸ್ಥೆ ಇದೆ. ಆದ್ದರಿಂದ ಇಂಥವರೇ ಪಂಪ್‌ಸೆಟ್‌ಗಳನ್ನು ರಿಪೇರಿ ಮಾಡಬೇಕೆಂದು ಸರ್ಕಾರ ಸೂಚನೆ ಕೊಟ್ಟು ತಕ್ಷಣ ರಿಪೇರಿಯಾಗತಕ್ಕಂಥ ಕೆಲಸವನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎರಡು-ಮೂರು ದಿನಗಳಲ್ಲಿ ಇದನ್ನು ಮಾಡಿದರೆ ಪ್ರಾಯಶಃ ಜನರಿಗೆ ಈ ಸಮಸ್ಯೆ ಪರಿಹಾರವಾಗುವಂಥ ಎಲ್ಲಾ ವ್ಯವಸ್ಥೆಗಳು ಆಗಬಹುದು. ಆದ್ದರಿಂದ ಈ ಕೆಲಸವನ್ನು ಸರ್ಕಾರ ತುರ್ತಾಗಿ ಮಾಡಬೇಕು. ಇನ್ನು ಕೆಇಬಿ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ನೀರು ಇರತಕ್ಕಂಥ ಬೋರ್‌ವೆಲ್‌ಗೆ ಪಂಪ್‌ಸೆಟ್‌ಗಳನ್ನು ಹಾಕಿರುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 4 ಗಂಟೆಯಿಂದ 8 ಗಂಟೆಯವರೆಗೆ ಕರೆಂಟ್ ಇರುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಸಮಸ್ಯೆಯನ್ನು ಇವತ್ತು ಅಥವಾ ನಾಳೆ ದಿವಸಗಳಲ್ಲಿ ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ, ಕನಿಷ್ಟ ಕುಡಿಯುವ ನೀರಿನ ಪಂಪ್‌ಸೆಟ್‌ಗಳಿಗೆ ದಿನ ಪೂರ್ತಿ ಕರೆಂಟ್ ಕೊಡತಕ್ಕಂಥ ವ್ಯವಸ್ಥೆ ಇವತ್ತಿ ನದಿವಸ ಆಗಲೇ ಬೇಕು. ಏಕೆಂದರೆ ಕುಡಿಯುವ ನೀರಿನ ಪಂಪ್‌ಸೆಟ್‌ಗೆ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ನಿಂದ ಅಲ್ಲಿರತಕ್ಕಂಥ ಬೇರೆ ಕೃಷಿಕರ ಪಂಪ್‌ಸೆಟ್‌ಗಳಿಗೆ ಕನೆಕ್ಷನ್ ತೆಗೆದುಕೊಂಡಿರುವಂಥದ್ದು ಹಲವಾರು ಕಡೆ ಇದೆ, ಇದರಿಂದ ತೊಂದರೆ ಖಂಡಿತ ಆಗುತ್ತದೆ. ಈ ರೀತಿ ಇದ್ದರೂ ಕೂಡ ಕುಡಿಯುವ ನೀರಿನ ಸಮಸ್ಯೆ ಪರಿಹಾರ ಮಾಡುವುದಕ್ಕೋಸ್ಕರ ಈ ಪಂಪ್‌ಸೆಟ್‌ಗಳಿಗೆ ದಿನ ಪೂರ್ತಿ ಕರೆಂಟ್‌ನ್ನು ಒದಗಿಸುವಂಥ ಒಂದು ವ್ಯವಸ್ಥೆ ಆಗಲೇಬೇಕು. ಈಗಾಗಲೇ ಹಲವಾರು ಬೋರ್‌ವೆಲ್‌ಗಳಲ್ಲಿ ನೀರಿನ ಮಟ್ಟ ಕೆಳಕ್ಕೆ ಹೋಗಿರುವುದರಿಂದ ಮತ್ತೆ ಇದೇ ಬೋರ್‌ವೆಲ್‌ಗಳನ್ನು ಡೀಪನ್ ಮಾಡತಕ್ಕಂಥ ವ್ಯವಸ್ಥೆಯನ್ನು ತಕ್ಷಣ ಸರ್ಕಾರ ಮಾಡಿಸಬೇಕು. ಮೇಜರ್ ವಾಟರ್ ಸಪ್ಲೈ ಮತ್ತು ಕಿರುನೀರು ಸರಬರಾಜು ಯೋಜನೆಗಳಿಗೆ ಸಂಬಂಧಪಟ್ಟಂತೆ ನಾನು ಸರ್ಕಾರವನ್ನು ಅಭಿನಂದನೆ ಮಾಡುತ್ತೇನೆ. ಏಕೆಂದರೆ, ಕುಡಿಯುವ ನೀರಿನ ಯೋಜನೆಯಲ್ಲಿ ಯಾವುದೇ ಪಂಚಾಯತಿ ಕರೆಂಟ್ ಬಿಲ್‌ನ್ನು ಕಟ್ಟದೇ ಇದ್ದರೆ ಕರೆಂಟ್ ಸರಬರಾಜು ಮಾಡುವುದನ್ನು ನಿಲ್ಲಿಸಬಾರದೆಂದು ಈಗಾಗಲೇ ಸೂಚನೆ ಕೊಟ್ಟಿದ್ದಾರೆ. ಆದರೆ ಎಷ್ಟೋ ಕಡೆ ಕೆಇಬಿ ಯವರು ಕುಡಿಯುವ ನೀರಿನ ಯೋಜನೆಯಲ್ಲಿ ಕರೆಂಟ್ ಬಿಲ್‌ನ್ನು ಕಟ್ಟದೇ ಇದ್ದರೆ ಅಲ್ಲಿ ಕರೆಂಟ್‌ನ್ನು ನಿಲ್ಲಿಸತಕ್ಕಂಥ ಕೆಲಸವನ್ನು ಇವತ್ತೂ ಕೂಡ ಮಾಡುತ್ತಿದ್ದಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಮಳೆ ಬರುವವರೆಗೆ ಕುಡಿಯುವ ನೀರಿನ ಯೋಜನೆಯಲ್ಲಿ ಕರೆಂಟ್ ಬಿಲ್‌ನ್ನು ಕಟ್ಟದೇ ಇದ್ದರೂ ಸಹ ಕರೆಂಟ್ ಸರಬರಾಜನ್ನು ನಿಲ್ಲಿಸಬಾರದೆಂದು ಸರ್ಕಾರದಿಂದ ಕೆಇಬಿಯವರಿಗೆ ಒಂದು ಡೈರೆಕ್ಷನ್‌ನ್ನು ಕೊಡಬೇಕು. ಈಗ ಗ್ರಾಮಪಂಚಾಯತಿಗಳಿಗೆ ಜಾಸ್ತಿ ಹಣ ಕೊಡುತ್ತೇವೆಂದು ಈಗಾಗಲೇ ಸರ್ಕಾರ ಹೇಳಿದೆ,

ಆದ್ದರಿಂದ ಈ ಹಣದಿಂದ ಕೆಇಬಿಯವರಿಗೆ ಮುಂದಿನ ದಿನಗಳಲ್ಲಿ ಕರೆಂಟ್ ಬಿಲ್ ಪಾವತಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಹಲವಾರು ಕಡೆಗಳಲ್ಲಿ ಬೇರೆ ಬೇರೆ ತೊಂದರೆಗಳಿವೆ. ಕೆಲವು ಕಡೆ ನೀರು ಇದ್ದರೂ ಸಹ ಸರಿಯಾಗಿ ನೀರು ಸಿಗುತ್ತಿಲ್ಲ. ಏಕೆಂದರೆ ನೀರಿನ ಪಂಪ್‌ಗಳನ್ನು ಆಪರೇಟ್ ಮಾಡತಕ್ಕಂಥ ವ್ಯಕ್ತಿಗಳ ತೊಂದರೆಯಿಂದ ಈ ರೀತಾ ಆಗುತ್ತಿರುತ್ತದೆ. ಆದ್ದರಿಂದ ಇದನ್ನು ಹೇಗೆ ನಿಭಾಯಿಸಬೇಕೆಂಬುದರ ಕಡೆಯೂ ಸರ್ಕಾರ ಗಮನಹರಿಸ ಬೇಕಾಗಿದೆ. ಇವತ್ತಿನದಿವಸ ಈ ರೀತಿಯಾದ ತೊಂದರೆಗಳಿಂದ ಪಂಚಾಯತ್‌ನಲ್ಲಿ ಅವ್ಯವಸ್ಥೆಯಾಗಿರುವುದು ನಮ್ಮಗಳೆಲ್ಲರ ಗಮನಕ್ಕೆ ಬಂದಿದೆ. ಆದ್ದರಿಂದ, ಇಲ್ಲಿ ನೀರು ಬಿಡತಕ್ಕಂಥ ವ್ಯಕ್ತಿ ತೊಂದರೆ ಮಾಡಿದರೆ ಅದನ್ನು ನಿಭಾಯಿಸುವಂಥ ಜವಾಬ್ದಾರಿಯನ್ನು ಪಂಚಾಯತ್ ಕಾರ್ಯದರ್ಶಿಯವರು ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಒಂದು ವೇಳೆ ಏನಾದರೂ ಹೆಚ್ಚು ಕಡಿಮೆ ಆದರೆ ಈತನೇ ಅದಕ್ಕೆ ಜವಾಬ್ಧಾರನಾಗುತ್ತಾನೆ. ನೀರಿನ ಸರಬರಾಜಿನಲ್ಲಿ ಏನಾದರೂ ತೊಂದರೆಯಾದರೆ ತಕ್ಷಣ ಅವನ ಮೇಲೆ ಜವಾಬ್ದಾರಿ ಹೊರಿಸುವಂತೆ ಮಾಡಬೇಕೆಂದು ತಾಲ್ಲೂಕು ಪಂಚಾಯತಿಯ ಎಕ್ಸಿಕ್ಯುಟೀವ್ ಆಫೀಸರ್‌ಗೆ ನಿರ್ದೇಶನಗಳನ್ನು ಕೊಡಬೇಕು. ಇವತ್ತಿನ ದಿವಸ ಈ ರೀತಿಯಾದ ತೊಂದರೆಗಳು ತುಂಬಾ ಕಡೆ ಆಗುತ್ತಿದೆ. ಆದ್ದರಿಂದ ಪಂಚಾಯತಿಯ ಕಾರ್ಯದರ್ಶಿಯವರಿಗೆ ವಿಶೇಷವಾದಂಥ ಜವಾಬ್ದಾರಿಯನ್ನು ಕೊಟ್ಟು ಒಂದು ವೇಳೆ ಈ ಕಾರ್ಯದಲ್ಲಿ ಕಾರ್ಯದರ್ಶಿ ವೈಫಲ್ಯವಾದರೆ ಇದನ್ನು ಎಕ್ಸಿಕ್ಯುಟೀವ್ ಆಫೀಸರ್ ಸೂಪರ್‌ವೈಸ್ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಇನ್ನೊಂದು ಭಾರಿ ಸಂಗತಿ ಇದೆ, ಇದನ್ನು ಯಾವರೀತಿ ನಿಭಾಯಿಸಬೇಕೆಂಬುದು ಗೊತ್ತಾಗುತ್ತಿಲ್ಲ. ಅದೇನೆಂದರೆ, ಗ್ರಾಮಾಂತರ ಪ್ರದೇಶಗಳ ಗ್ರಾಮ ಪಂಚಾಯತಿ ವ್ಯವಸ್ಥೆಯಲ್ಲಿ ಇವತ್ತಿನ ದಿವಸ ಅಕ್ರಮ ನಲ್ಲಿ ಜೋಡಣೆಯಾಗಿದೆ. ಅಕ್ರಮ ನಲ್ಲಿ ಜೋಡಣೆ ಮಾಡಿಕೊಂಡು ಅವರ ತೋಟದಲ್ಲಿರತಕ್ಕಂಥ ತೆಂಗಿನ ಮರಗಳಿಗೆ ಮತ್ತು ಅಡಿಕೆ ಮರಗಳಿಗೆ ನೀರು ಬಿಟ್ಟುಕೊಳ್ಳುತ್ತಿದ್ದಾರೆ. ಬಹುಶಃ ಇವತ್ತಿನ ಎಲ್ಲಾ ಸಮಸ್ಯೆಗೆ ಇದೊಂದು ಮೂಲಕಾರಣ ಎಂಬುದು ನನ್ನ ಗಮನಕ್ಕೆ ಬಂದಿದೆ. ಉದಾಹರಣೆಗೆ ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಮಟ್ಟದಲ್ಲಿ ಅಕ್ರಮ ನಲ್ಲಿಗಳ ಜೋಡಣೆಯನ್ನು ತೆಗೆಯಬೇಕೆಂದು ಎಕ್ಸಿಕ್ಯುಟೀವ್ ಆಫೀಸರ್ ಮತ್ತು ಪೋಲೀಸ್ ಸಹಾಯದಿಂದ ತೆಗೆಯುವಂಥ ಕೆಲಸವನ್ನು ನಾವು ಮಾಡಿದ್ದೇವೆ. ನಾವು ಇವತ್ತು ತೆಗೆದು ಬಂದಾಗ ಮತ್ತೆ ಮರು ದಿವಸ ಜೋಡಣೆ ಮಾಡಿಕೊಂಡಿದ್ದಾರೆ. ಇವತ್ತಿನ ದಿವಸ ಯಾರು ರಾಜಕೀಯವಾಗಿ ಹೆಚ್ಚು ಬಲಾಢ್ಯರು ಇರುತ್ತಾರೆ ಮತ್ತು ಶಾಸಕರ ಬೆಂಬಲ ಮತ್ತು ಮಂತ್ರಿಗಳ ಬೆಂಬಲ ಇದ್ದವರು ಇದ್ದಾರೆ ಅವರೇ ಈ ರೀತಿಯಾದ ಅಕ್ರಮ ನಲ್ಲಿ ಜೋಡಣೆಗಳನ್ನು ಮಾಡಿಕೊಂಡು ತೊಂದರೆ ಮಾಡುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರು ಕುಡಿಯುವಂಥ ಈ ಒಂದು ನೀರಿನ ಯೋಜನೆಯಲ್ಲಿ ಅಕ್ರಮ ನಲ್ಲಿ ಜೊಡಣೆಯನ್ನು ತೆಗೆಸುವಂಥ ಒಂದು ಕೆಲಸವನ್ನು ಹೇಗೆ ಮಾಡಬೇಕೆಂಬುದನ್ನು

ಸರ್ಕಾರ ಆಲೋಚನೆ ಮಾಡಬೇಕು. ಇದನ್ನು ತಡೆಗಟ್ಟುವುದಕ್ಕೆ ಒಂದು ಸರಿಯಾದ ದಾರಿಯನ್ನು ಹಾಕದೇ ಇದ್ದರೆ ಬಹುಶಃ ಮುಂದಿನ ದಿನಗಳಲ್ಲಿ ಖಂಡಿತ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ 10 ಪಬ್ಲಿಕ್ ನಲ್ಲಿಗಳು ಇದ್ದರೆ ಸುಮಾರು 25 ರಿಂದ 30 ಜನರ ಮನೆಗಳಿಗೆ ಅಕ್ರಮ ನಲ್ಲಿ ಜೋಡಣೆ ಮಾಡಿಕೊಂಡು ಅಂಡರ್‌ಗ್ರೌಂಡ್ ಟ್ಯಾಂಕ್‌ಗಳಿಗೆ ಕನೆಕ್ಷನ್ ಮಾಡಿಕೊಂಡಿರುತ್ತಾರೆ. ಇದರಿಂದ ಪಂಚಾಯತ್‌ನಲ್ಲಿಯೂ ಕೂಡ ಕನಿಷ್ಟ ಒಬ್ಬ ವ್ಯಕ್ತಿಗೆ 25 ಲೀಟರ್ ಕುಡಿಯುವ ನೀರು ಸಿಗದಂಥ ಪರಿಸ್ಥಿತಿ ಉಂಟಾಗಿದೆ. ಹಾಗೆಯೇ ಇಳಿಜಾರು ಪ್ರದೇಶಗಳ ಹತ್ತಿರ ನೀರಿನ ಪೈಪ್‌ಗೆ ಗೇಟ್‌ವಾಲ್ವ್ ಹಾಕದೇ ಇರುವುದರಿಂದ ಇಳಿಜಾರು ಪ್ರದೇಶಗಳಿಗೆ ಹೆಚ್ಚು ನೀರು ಹೋಗತಕ್ಕಂಥ ಪರಿಸ್ಥಿತಿ ಇರುತ್ತದೆ ಮತ್ತು ಮೇಲಿನ ಪ್ರದೇಶಗಳಿಗೆ ನೀರು ಸಿಗದೇ ಇರತಕ್ಕಂಥ ಪರಿಸ್ಥಿತಿ ಬಹುತೇಕ ಕಡೆ ಇದೆ. ಆದ್ದರಿಂದ ಈ ರೀತಿಯ ತೊಂದರೆಗಳನ್ನು ತಕ್ಷಣ ನಿವಾರಣೆ ಮಾಡಬೇಕು. ಅಕ್ರಮ ನಲ್ಲಿಗಳನ್ನು ತೆಗೆಸುವುದಕ್ಕೆ ಎಕ್ಸಿಕ್ಯುಟೀವ್ ಆಫೀಸರ್‌ಗೆ ಅಧಿಕಾರ ಕೊಟ್ಟಿದ್ದೀರಿ, ಇದಕ್ಕೆ ನಮ್ಮ ಪೂರ್ತಿ ಬೆಂಬಲವನ್ನು ಕೊಡುತ್ತೇವೆ. ಇಂಥ ನಾಲ್ಕು ಜನರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡು ಕ್ರಿಮಿನಲ್ ಕೇಸ್‌ನ್ನು ದಾಖಲೆ ಮಾಡಿದರೆ ಮುಂದೆ ಈ ರೀತಿ ಯಾರು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಏನಾಗಿದೆ ಎಂದರೆ, ಒಬ್ಬರು ತೆಗೆದ ಕೂಡಲೇ ವಿರೋಧಪಕ್ಷದವರು ಬಂದು ಅಲ್ಲಿಯೇ ನಿಂತು ಮತ್ತೆ ಅಕ್ರಮ ನಲ್ಲಿಗಳ ಜೋಡಣೆಯನ್ನು ಮಾಡಿಸುವಂಥ ಕೆಲಸ ಇವತ್ತು ಅನೇಕ ಕಡೆ ನಡೆಯುತ್ತಿದೆ. ಬಹುಶಃ ಇದನ್ನೆಲ್ಲಾ ತೆಗೆಸಿದರೆ 50 ಪರ್ಸೆಂಟ್‌ನಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕೆ ದಾರಿಯಾಗುತ್ತದೆ. ಆದ್ದರಿಂದ ಇದನ್ನು ಸ್ಪಷ್ಟವಾಗಿ ಮಾಡಿಸುವಂಥ ಅವಶ್ಯಕತೆ ಇದೆ. ಇನ್ನು ಈಗ ಇರತಕ್ಕಂಥ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದರ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಗ್ರಾಮಾಂತರ ಮಟ್ಟದಲ್ಲಿರತಕ್ಕಂಥ ಓವರ್ ಹೆಡ್ ಟ್ಯಾಂಕ್‌ಗಳಲ್ಲಿ ನೀರು ಸೋರುತ್ತಿದೆ ಇದನ್ನು ಯಾರು ಸರಿ ಮಾಡುತ್ತಾರೆ?

ಇವತ್ತು ಹಲವಾರು ಓವರ್ ಹೆಡ್ ಟ್ಯಾಂಕ್‌ಗಳಲ್ಲಿ ಕಳಪೆ ಮಟ್ಟದ ಪೈಪ್‌ಗಳಿಂದ ನೀರು, ಲೀಕ್ ಆಗುತ್ತಿದೆ. ಎಲ್ಲೆಲ್ಲಿ ಈ ರೀತಿ ಇದೆ ಅದನ್ನು ಕೂಡಲೇ ಸರಿ ಮಾಡುವಂತಹ ವ್ಯವಸ್ಥೆಯನ್ನು ಮಾಡಬಹುದು, ಮಾಡುವುದಕ್ಕೆ ಸಾಧ್ಯವಿಲ್ಲವೆಂದಲ್ಲ. ಅಲ್ಲಿರುವಂತಹ ಅಧಿಕಾರಿಗಳ ಮೇಲೆ ನಿಮ್ಮ ಬಿಗಿ ಹಿಡಿತವಿರಬೇಕು. ಅದು ಆಗುವುದಿಲ್ಲ, ಹಾಗೆ ಮಾಡಿ ಹೀಗೆ ಮಾಡಿ ಎಂದು ಹೇಳುವುದಲ್ಲ. ಎಲ್ಲಾದರೂ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಹೆಚ್ಚು ಕಡಿಮೆಯಾದರೆ ಅದು ನಿಮ್ಮ ಜವಾಬ್ದಾರಿ ಎಂದು ಅವರಿಗೆ ಹೇಳಬೇಕು. ಈ ಒಂದು ಕೆಲಸವನ್ನು ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ತಾವು ಇದಕ್ಕೆ ತಕ್ಷಣ ಸ್ಪಂದನ ಮಾಡಬೇಕು. ಇಲ್ಲಿ ತಾವು ಏನು

ಉತ್ತರವನ್ನು ಹೇಳುತ್ತಿರೋ ಅದರಿಂದ ನಮ್ಮ ಮನಸ್ಸಿಗೆ ಶಾಂತಿಯಾಗಬಹುದು. ಆದರೆ ಜನರ ಮನಸ್ಸಿಗೆ ನೀರು ದೊರಕಿ ನೆಮ್ಮದಿಯಾಗಬೇಕು. ತಾವು ಇದು ಎರಡು ದಿವಸಗಳಲ್ಲಿ ಆಗುವ ಹಾಗೆ ಪ್ರಯತ್ನವನ್ನು ಮಾಡಬೇಕು, ತಾವು ಇವತ್ತಿನ ದಿವಸ ಈ ಪ್ರಯತ್ನ ಮಾಡಿದರೆ ಮಾತ್ರ ಈ ಚರ್ಚೆಗೆ ಒಳ್ಳೆಯ ಪ್ರತಿಫಲ ದೊರೆತ ಹಾಗೆ ಆಗುತ್ತದೆಂದು ಹೇಳುತ್ತಾ, ಈ ದಿಶೆಯಲ್ಲಿ ತಾವು ತಕ್ಷಣ ಕೆಲಸವನ್ನು ಮಾಡಿ ಎಂದು ಮತ್ತೊಮ್ಮೆ ಒತ್ತಾಯ ಮಾಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಛೇರ್ಮನ್‌ರವರೆ, ಈ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಜಾಸ್ತಿಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಒಂದು ರೀತಿಯ ಸಮಸ್ಯೆಯಾದರೆ ನಗರ ಪ್ರದೇಶಗಳಲ್ಲಿ ಮತ್ತೊಂದು ರೀತಿಯ ಸಮಸ್ಯೆ ಆಗಿದೆ. ಇವತ್ತು ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಉತ್ತಮವಾದಂತಹ ರೀತಿಯಲ್ಲಿ ಕೆಲಸ ಮಾಡಿರುವಂಥಾದ್ದು ನಮ್ಮ ಸರ್ಕಾರವೆಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ನಮ್ಮ ಜನತಾ ದಳ ಸರ್ಕಾರದ ಹೆಸರನ್ನು ಯಾರು ಅಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಂದರೆ ಸರ್ಕಾರದ ಇಚ್ಛಾಶಕ್ತಿಯ ಮೇಲೆ ಒಂದು ಪರಿಣಾಮಕಾರಿಯಾಗಿ ಮಾಡುವಂತಹ ಕೆಲಸ ಅವಲಂಬಿಸಿದೆ, ನಮ್ಮಲ್ಲಿ ದುಡ್ಡಿಗೆ ಬರವಿರುವುದಿಲ್ಲ. ನಮ್ಮ ಸರ್ಕಾರ ಹೋದ ವರ್ಷ ಬಜೆಟ್ ಮಂಡನೆ ಮಾಡುವಂತಹ ಸಂದರ್ಭದಲ್ಲಿ 550 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಇಟ್ಟಿದ್ದೆವೆಂದು ಹೇಳಿದ್ದೇವೆ. ಅದನ್ನು ಮಾರ್ಚ್ 2000 ಇಸವಿಯೊಳಗೆ ಅಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ಉದ್ದೇಶ ಇತ್ತು. ನಾನು ತಮ್ಮ ಹೇಳಿಕೆಯಲ್ಲಿ ನೋಡಿದೆ, 116 ಕೋಟಿ ರೂಪಾಯಿಗಳು ನಮ್ಮ ರಾಜ್ಯ ಸರ್ಕಾರದಿಂದ, ಸುಮಾರು 117 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಂದಿದೆ ಎಂದು ನಮಗೆ ಗೊತ್ತಿದೆ. ಕೇಂದ್ರ ಸರ್ಕಾರದಿಂದ ಕುಡಿಯುವ ನೀರಿಗೋಸ್ಕರ ಶೇ.50ರಷ್ಟು ರಾಜ್ಯ ಸರ್ಕಾರದಿಂದ ಶೇ.50ರಷ್ಟು ಹಣ ಕೊಡುವಂಥಾದ್ದು ಇದೆ. ಅದೇ ರೀತಿಯಲ್ಲಿ ರಾಜೀವ್‌ಗಾಂಧಿ ಸ್ಕೀಮ್‌ನಲ್ಲಿ ಕೇಂದ್ರ ಸರ್ಕಾರದ ಪಾಲು ಶೇ.75ರಷ್ಟು ಇದ್ದರೆ ರಾಜ್ಯದ ಪಾಲು ಶೇ.25ರಷ್ಟು ಇದೆ. ಕೇಂದ್ರ ಸರ್ಕಾರದಲ್ಲಿ ಬಹಳಷ್ಟು ದುಡ್ಡು ಇದೆ. ಇದರ ನಾರ್ಮ್ಸ್ ಏನೆಂದರೆ ಯಾವ ಹಳ್ಳಿಗಳಲ್ಲಿ ಉಪ್ಪು ನೀರು ಎಲ್ಲಿ ಇರುತ್ತದೋ ಅಂತಹ ಗ್ರಾಮಗಳನ್ನು ಗುರುತಿಸಿ ಅದಕ್ಕೆ ಒಂದು ಪ್ರತ್ಯೇಕವಾದ ಯೋಜನೆಯನ್ನು ತಯಾರು ಮಾಡಿ ಆ ಪ್ರಸ್ತಾವವನ್ನು ನೀವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಅಲ್ಲಿಂದ ಬಹಳ ಸುಲಭವಾಗಿ ದುಡ್ಡು ಬರುತ್ತದೆ. ಆದುದರಿಂದ ನಾನು ಈ ವಿಚಾರವಾಗಿ ಕೇಳುವಂಥಾದ್ದು ಏನೆಂದರೆ, ಈ ರೀತಿ ಎಷ್ಟು ಪ್ರಸ್ತಾವನೆಯನ್ನು ನೀವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ. ಇದಕ್ಕಾಗಿ ಕೇಂದ್ರಸರ್ಕಾರದವರು ಶೇ.75ರಷ್ಟು ಹಣವನ್ನು ಕೊಡುತ್ತಾರೆ. ಇನ್ನೊಂದು ವಿಚಾರವೇನೆಂದರೆ ಸಣ್ಣ ಸಣ್ಣ ಬೋರವೆಲ್‌ಗಳನ್ನು ತೆಗೆದುಕೊಂಡರೆ ಅದಕ್ಕೆ ಪಂಪ್

ಹಾಕಿಸುವಂಥಾದ್ದು, ಅದರ ರಿಪೇರಿ ಕೆಲಸ, ಈ ಕೆಲಸಗಳಿಗಿಂತ ಹೆಚ್ಚಾಗಿ ಇದಕ್ಕೆ ಶಾಶ್ವತವಾದಂತಹ ಪರಿಹಾರವನ್ನು ಕಂಡುಹಿಡಿಯುವಂಥಾದ್ದು ಅವಶ್ಯಕವಿದೆ. ತಾವು ಒಂದೊಂದು ಊರಿಗೆ ಒಂದೊಂದು ಬೋರ್‌ವೆಲ್‌ಗಳನ್ನು ಹಾಕಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಸರ್ಫೇಸ್ ವಾಟರ್ ಏನಿದೆ we must utilise the surface water to cater to the needs of more than two or three villages. ಒಂದು ವಿಲೇಜ್‌ಗೆ ಒಂದು ಸ್ಕೀಮ್‌ಗೆ ಐದೂವರೆ ಲಕ್ಷ ರೂಪಾಯಿಗಳಿಂದ ಆರು ಲಕ್ಷ ರೂಪಾಯಿಗಳು ಆಗುತ್ತದೆ. ಈ ಸ್ಕೀಮ್‌ನಲ್ಲಿ ಕಳಪೆ ಪೈಪ್‌ಗಳನ್ನು ಸಪ್ಲೈ ಮಾಡುತ್ತಾರೆ ಸರಿಯಾಗಿ ವಿದ್ಯುತ್ ಸರಬರಾಜು ಇರುವುದಿಲ್ಲ. ಹೀಗಾಗಿ ಈ ಸ್ಕೀಮ್ ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ. ಅದರ ಬದಲು ಎಲ್ಲೆಲ್ಲಿ ಕೆರೆ ಇದೆ ಅಂತಹ ಕಡೆಗಳಲ್ಲಿ ಅಕ್ಕಪಕ್ಕದಲ್ಲಿರುವಂತಹ ಸುಮಾರು ಎರಡು, ಮೂರು ಕಿ.ಮೀ ವ್ಯಾಪ್ತಿಯಲ್ಲಿರುವಂತಹ 3-4 ಹಳ್ಳಿಗಳನ್ನು ಸೇರಿಸಿಕೊಂಡು ಒಂದು ಯೋಜನೆಯನ್ನು ತಯಾರು ಮಾಡಿ ಅದಕ್ಕೆ ಸಮರ್ಪಕವಾಗಿ ನೀರು ಸರಬರಾಜು ಮಾಡುವಂತಹ ಯೋಜನೆಯನ್ನು ಮಾಡಬೇಕಾಗಿತ್ತು. ಇದನ್ನು ರಾಜ್ಯದಲ್ಲಿ ಎಷ್ಟು ಮಾಡಿದ್ದೀರೆಂದು ನನಗೆ ಗೊತ್ತಿಲ್ಲ. ಇನ್ನು ಪಿ.ಹೆಚ್.ಇ.ಇಲಾಖೆ ಎಂದು ಇದೆ ಅದರಿಂದ ಒಂದು ಸ್ಕೀಮ್ ಅಪ್ರೂವ್ ಮಾಡಿಸಿಕೊಳ್ಳಬೇಕೆಂದರೆ ಸುಮಾರು 2-3 ವರ್ಷಗಳು ಬೇಕಾಗುತ್ತದೆ. ಅದಕ್ಕೆ ಇನ್ನೊಂದು ರಿವೈಜ್ ಎಸ್ಟಿಮೇಟ್ ಮಾಡಿ ಎಂದು ಅದನ್ನು ಅವರು ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರಿಂಗ್ ಹೇಳುತ್ತಾರೆ. ಈ ರೀತಿಯಾಗಿ ಈ ಸ್ಕೀಮ್ 2-3ವರ್ಷಗಳಾದರೂ ಅಪ್ರೂವ್ ಮಾಡುವುದಿಲ್ಲ. ಈ ರೀತಿಯ ವಿಳಂಬವಾಗುವಂಥಾದ್ದನ್ನು ತಪ್ಪಿಸಬೇಕಾಗುತ್ತದೆ. ಇನ್ನು ವಿಶ್ವ ಬ್ಯಾಂಕಿನ ನೆರವಿನಡಿಯಲ್ಲಿ ಕೆಲವು ಯೋಜನೆಗಳು ಬಂದಿವೆ. ಇವತ್ತು ಎಲ್ಲಾ ಯೋಜನೆಗಳು ವಿಫಲವಾಗಿದೆ. ಅದಕ್ಕೆ ಬೇರೆ ಬೇರೆ ಕಾರಣಗಳು ಇವೆ. ಅಲ್ಲಿ ಟೆಂಡರ್ ಕೊಡುವಂತಹ ವಿಧಾನ, ಪಂಪ್‌ಗಳನ್ನು ತರುವಂತಹ ವಿಧಾನ, ಅದರಲ್ಲಿ ಪಂಚಾಯತ್‌ನವರಿಗೆ ಕೊಡುವಂಥಾದ್ದು, ಈ ರೀತಿಯಾಗಿ ಅದನ್ನು ಅವರು ಯಾವ ರೀತಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂಬ ಬಗ್ಗೆ ಒಂದು ದೊಡ್ಡ ಆರ್ಟಿಕಲ್ ಪತ್ರಿಕೆಯಲ್ಲಿ ಬಂದಿದೆ. ಈ ವಿಶ್ವ ಬ್ಯಾಂಕ್‌ನಿಂದ ಅನುಷ್ಠಾನಕ್ಕೆ ತಂದಿರುವಂತಹ ಯೋಜನೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಇದಕ್ಕೆ ನೀವು ಏನಾದರೂ ಒಂದು ಸರಿಯಾದಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದಕ್ಕೆ ತೇಪೆ ಹಾಕುವಂತಹ ಕೆಲಸ ವ್ಯವಸ್ಥಿತವಾಗಿ ಮಾಡಬಹುದು. ಇಡೀ ರಾಜ್ಯವನ್ನೇ ಸರ್ವೆ ಮಾಡಿಸಬೇಕು, ಅದು ಸಿಸ್ಟಮ್ಯಾಟಿಕ್ ಆಗಿ ಮಾಡಬೇಕು. ಇಲ್ಲಿ ನಿಮ್ಮ ಎಂ.ಎಲ್.ಎ.ಗಳು ಕೇಳುತ್ತಾರೆಂದು ಅವರಿಗೆ ಸ್ಯಾಂಕ್ಷನ್ ಮಾಡಿಕೊಡಿ ಎಂದು ಅಲ್ಲ. ನಮಗೆ ನಿಮ್ಮ ಮೇಲೆ ಗೌರವವಿದೆ, ನೀವು ಆ ರೀತಿಯಾಗಿ ಮಾಡುವವರಲ್ಲ. ಆದರೆ ಎಲ್ಲೆಲ್ಲಿ ನೀರು ಸಿಗುತ್ತದೆ, ಸರ್ಫೇಸ್ ವಾಟರ್ ಎಲ್ಲಿ ಸಿಗುತ್ತದೆ, ಉಪ್ಪುನೀರು ಯಾವ್ಯಾವ ಗ್ರಾಮಗಳಲ್ಲಿ ಸಿಗುತ್ತದೆಂಬ ಬಗ್ಗೆ ಸರ್ವೆ ಮಾಡಿಸಿ. ಅದಕ್ಕೆ ಒಂದು ವಿಶೇಷವಾದಂತಹ ಯೋಜನೆಯನ್ನು ತಯಾರು

ಮಾಡುವಂಥಾದ್ದು ಬಹಳ ಅವಶ್ಯಕವಿದೆ. ಇದಕ್ಕೆ ಕೇಂದ್ರ ಸರ್ಕಾರದಲ್ಲಿ ಬಹಳ ದುಡ್ಡು ಇದೆ. ನಾನು ಗ್ರಾಮೀಣ ಪ್ರದೇಶದ ಬಗ್ಗೆ ಇಷ್ಟನ್ನು ಹೇಳಿ, ಇನ್ನು ಮಾನ್ಯ ಚಿಮ್ಮನಕಟ್ಟಿಯವರ ಖಾತೆಗೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ. ಇದರ ಬಗ್ಗೆ ಹೇಳುವುದಾದರೆ ನಗರ ಪ್ರದೇಶಗಳಲ್ಲಿ ಶೇ.30-35ರಷ್ಟು ಜನರಿದ್ದಾರೆ. ಅದು ಕಾರ್ಪೊರೇಷನ್ ಇರಬಹುದು. ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಬರಬಹುದು. ಅಲ್ಲಿ ಒಳ ಹೊಕ್ಕು ನೋಡಿದಾಗ ಅದೊಂದು ದೊಡ್ಡ ಕರ್ಮಕಾಂಡವಿದ್ದಹಾಗೆ, ಅದು ಸರ್ಕಾರಕ್ಕೆ ಗೊತ್ತಾಗುವುದಿಲ್ಲ. ಆ ವಿಷಯ ಹೊರಗೆ ಬಂದಾಗ ಗೊತ್ತಾಗುತ್ತದೆ. ಇದರ ಬಗ್ಗೆ ನಾನು ಉದಾಹರಣೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ 1995ರಲ್ಲಿ ಒಂದು ಯೋಜನೆ ಮಂಜೂರಾತಿಯಾಗಿದ್ದು, ಅದು ಮಂಜೂರಾಗಿ ಐದು ವರ್ಷಗಳಾದರೂ ಇನ್ನೂ ಪ್ರಾರಂಭವಾಗಿಲ್ಲ. ಇದಕ್ಕೆ ಕಾರಣವೇನು? ಇದರ ಹಿನ್ನಲೆ ಏನು? ದುಡ್ಡಿಗೆ ಏನಾದರೂ ತೊಂದರೆ ಇದೆಯಾ? ಏಕೆ ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳನ್ನು ಕೇಳಿದರೆ ಆಗ ಏನೇನು ನಡೆಯುತ್ತಿದೆ ಎಂದು ವಿಷಯ ಬಯಲಿಗೆ ಬಂತು. ಈ ವಿಚಾರವಾಗಿ ಮೇಲ್ಮನೆಯಲ್ಲೂ ಚರ್ಚೆಯಾಗಿದೆ, ನಮ್ಮ ಬಿ.ಜೆ.ಪಿ.ಯ ಸದಸ್ಯರುಗಳು ನಡ ಈ ವಿಚಾರವನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ಈ ಸ್ಕೀಮ್‌ಗೆ ಮೊದಲು ಏನು ಎಸ್ಟಿಮೇಟ್ ಮಾಡಿರುತ್ತಾರೆ ಅಷ್ಟಕ್ಕೆ ಯಾವ ಯೋಜನೆಯನ್ನು ಅನುಷ್ಠಾನಕ್ಕೆ ತಂದಿಲ್ಲ. ನಾನು ಉದಾಹರಣೆಯನ್ನು ಹೇಳುವುದಾದರೆ ಮೈಸೂರಿಗೆ ಸಂಬಂಧಪಟ್ಟ ಹಾಗೆ ಮೊದಲು ಎಸ್ಟಿಮೇಟ್ ಆರು ಕೋಟಿ ರೂಪಾಯಿಗಳಿಗೆ ಇತ್ತು, ಅನಂತರ ಅದು ರಿವೈಜ್ ಆಗಿ ಹದಿನೇಳು ಕೋಟಿ ರೂಪಾಯಿಗಳು ಆಯಿತು. Work completed, but not satisfactorly commissioned. ಈ ಬಗ್ಗೆ ಮೈಸೂರಿನಿಂದ ಬಂದಿರುವಂತಹ ಸದಸ್ಯರುಗಳು ಹೇಳಬೇಕಾಗುತ್ತದೆ. ಹದಿನೇಳು ಕೋಟಿ ರೂಪಾಯಿಗಳ ರಿವೈಜ್ಡ್ ಎಸ್ಟಿಮೇಟ್ ಮಾಡಿದರೂ ಕೂಡ Satisfactorily it has not been commissioned. ಅದೇ ರೀತಿಯಲ್ಲಿ ಚಾಮರಾಜನಗರದ್ದು ಮೊದಲು ಆರು ಕೋಟಿ ಹದಿನೈದು ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇತ್ತು, ಇದು ರಿವೈಜ್ ಆಗಿ ಇಪ್ಪತ್ತು ಕೋಟಿ ರೂಪಾಯಿಗಳಾಯಿತು. ಆದರೂ ಈ ಕೆಲಸ ಇನ್ನೂ ಪೂರ್ಣವಾಗಿಲ್ಲ. ಅದೇ ರೀತಿಯಲ್ಲಿ ಮಂಡ್ಯ ತಾಲ್ಲೂಕಿನದು ತೆಗೆದುಕೊಂಡರೆ ಹದಿಮೂರು ಕೋಟಿ ರೂಪಾಯಿಗಳ ಎಸ್ಟಿಮೇಟ್ ಮೊದಲು ಆಗಿತ್ತು, 1994ರಲ್ಲಿ ಇಪ್ಪತ್ತಮೂರು ಕೋಟಿ ರೂಪಾಯಿಗಳಿಗೆ ಮಂಜೂರಾತಿ ಆಗಿತ್ತು, ಅದು ಇನ್ನು ಕಂಪ್ಲೀಟ್ ಆಗಿಲ್ಲ. ತುಮಕೂರಿಗೆ ಹನ್ನೆರಡು ಕೋಟಿ ಐವತ್ತಮೂರು ಲಕ್ಷರೂಪಾಯಿಗಳು. 1990ನೇ ಇಸವಿಯಲ್ಲಿ ಎಸ್ಟಿಮೇಟ್ ಆಗಿದ್ದು, ಈಗ ಇಪ್ಪತ್ತೈದು ಕೋಟಿ ರೂಪಾಯಿಗಳು ಖರ್ಚಾದರೂ ಇನ್ನೂ ಸರಿಯಾಗಿ ಅಲ್ಲಿ ಕೆಲಸವಾಗಿಲ್ಲವೆಂದು ಹೇಳುತ್ತಿದ್ದಾರೆ. ಇದೇ ರೀತಿಯಲ್ಲಿ ನಮ್ಮ ಮಳವಳ್ಳಿಗೆ ಎರಡೂವರೆ ಕೋಟಿ ರೂಪಾಯಿಗಳನ್ನು 1994ರಲ್ಲಿ ಮಂಜೂರಾತಿ ಮಾಡಲಾಗಿತ್ತು, ಈಗ ಆರು ಕೋಟಿ ರೂಪಾಯಿಗಳಾದರೂ ಇನ್ನೂ ಕೆಲಸವಾಗಿಲ್ಲ. ಈ ರೀತಿಯಾಗಿ ಅನೇಕ ಪಟ್ಟಣ

ಪ್ರದೇಶಗಳಿಗೆ ಎಪ್ಪತ್ತಾರು ಕೋಟಿ ರೂಪಾಯಿಗಳ ಎಸ್ಟಿಮೇಟ್ ಆಗಿ, ಇವತ್ತು ಒಟ್ಟು ನೂರ ತೊಂಭತ್ತು ಕೋಟಿ ರೂಪಾಯಿಗಳು ಆಗಿದೆ. ಈ ಹಣವನ್ನು ಯಾವ ರೀತಿಯಾಗಿ ತೆಗೆದುಕೊಳ್ಳುತ್ತೀರಿ.

6-00 ಪಿ.ಎಂ

ಇದಕ್ಕೆ ಮೂರ್ನಾಲ್ಕು ಕಡೆಯಿಂದ ನೀವು ಹಣವನ್ನು ತೆಗೆದುಕೊಳ್ಳುತ್ತೀರಿ. ಎಲ್.ಐ.ಸಿ. ಹುಡ್ಕೋ, ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಡಿಬೆಂಚರ್ಸ್‌ಗಳಿಂದ ಹಣವನ್ನು ಸಾಲವನ್ನಾಗಿ ತೆಗೆದುಕೊಳ್ಳುತ್ತೀರಿ. ಅದರಿಂದ ಏನೇನು ಯೋಜನೆಗಳನ್ನು ತಯಾರು ಮಾಡುತ್ತೇವೆಂದರೆ ಸುಮಾರು ಸಣ್ಣ ನಗರ ಪ್ರದೇಶಗಳಾದರೆ, 75,000 ಕಡಿಮೆ ಜನಸಂಖ್ಯೆ ಇದ್ದರೆ ಶೇಕಡ 50 ಪರ್ಸೆಂಟ್ ರಾಜ್ಯಸರ್ಕಾರದಿಂದ ಇನ್ನು 50 ಪರ್ಸೆಂಟ್ ಇನ್ಸಿಟಿಟ್ಯೂಷನ್‌ನಿಂದ ಲೋನ್ ತೆಗೆದುಕೊಳ್ಳಲಾಗುತ್ತದೆ. ಹಾಗೆ ಶೇಕಡ 75 ಸಾವಿರಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಇರುವ ಗ್ರಾಮಗಳಿಗೆ ಶೇಕಡ 50ರಷ್ಟು ಲೋನ್, ಶೇಕಡ 25ರಷ್ಟು ಸರ್ಕಾರದ ಲೋನ್ ಇನ್ನುಳಿದ 25 ಪರ್ಸೆಂಟ್ ಲೋಕಲ್ ಬಾಡಿಸ್‌ನಿಂದ ಕಾಂಟ್ರಿಬ್ಯೂಷನ್ ಕೊಡುವುದು. ಇದನ್ನು ನಾವು ಎಸ್ಟಿಮೇಟ್ ಮಾಡುವಾಗ ಶೇಕಡ ಆರರಷ್ಟು ಸೇರಿಸಿ ಮಾಡುತ್ತೇವೆ. ಆ ರೀತಿ ಮಾಡಿ ಸ್ಕೀಂ ಅನ್ನು ಮಂಜೂರಾತಿ ಮಾಡುತ್ತೇವೆ. 1999-2000ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 350 ಕೋಟಿ ರೂಪಾಯಿ ಹಣ ಬಜೆಟ್ ಪ್ರಾವಿಜನ್ ಕೊಟ್ಟಿದ್ದಾರೆ. ಅದರಲ್ಲಿ ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಿಂದ 10 ಕೋಟಿ ರೂಪಾಯಿ ಹಾಗೂ ನಮ್ಮ ರೆವಿನ್ಯೂ ಇಲಾಖೆಯಿಂದ 1.2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ದುಡ್ಡನ್ನು ಎಲ್ಲೆಲ್ಲಿ ಹರಿಜನ ಕಾಲೋನಿಗೆ ನೀರು ಕೊಡಬೇಕೋ ಅದನ್ನು ಅಲ್ಲಿಗೆ ಕೊಡಬೇಕು. ಹಣದ ಕೊರತೆ ಇದೆ ಎಂದು ನಾನು ತಿಳಿದುಕೊಂಡಿದ್ದೆ. ನಾವು ಹಣವನ್ನು ನಾಲ್ಕು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಡ್ರಾ ಮಾಡುತ್ತೇವೆ. ಒಂದೊಂದು ಯೋಜನೆಗೆ ಸಂಪೂರ್ಣವಾಗಿ ಲೋನ್ ತೆಗೆದುಕೊಂಡು ಡ್ರಾ ಮಾಡಿದ್ದೇವೆ. ಆದರೆ ಹಣ ಇನ್ನು ಸಂಪೂರ್ಣವಾಗಿ ಖರ್ಚಾಗಿಲ್ಲ. ಒಂದು ವರ್ಷದೊಳಗೆ ಸಣ್ಣ ನಗರಗಳಲ್ಲಿ ಈ ಯೋಜನೆ ಪೂರ್ತಿಯಾಗಬೇಕೆಂದು ನಮ್ಮ ಸಮಯ ನಿಗದಿ ಇತ್ತು. ಕೊನೇಪಕ್ಷ ಎರಡು ವರ್ಷಗಳ ಒಳಗಾಗಿ ಈ ಯೋಜನೆ ಸಂಪೂರ್ಣವಾಗಬೇಕು. ಅದರಲ್ಲಿ ಒಂದು ವೇಳೆ ಎರಡು ವರ್ಷದ ಒಳಗಡೆ ಮಾಡಬೇಕಾದರೆ ಹೈಜಾಕ್ ಮಾಡಿ ಆರು ಪರ್ಸೆಂಟ್ ಹೆಚ್ಚಿಗೆ ಮಾಡತಕ್ಕಂಥ ಅವಕಾಶ ಎಸ್ಟಿಮೇಟ್‌ನಲ್ಲಿ ಇರುತ್ತದೆ. ಅದನ್ನು ಸೇರಿಸಿದ್ದೇವೆ. ಇವತ್ತು ಕೇವಲ ಆರರಷ್ಟು ಅಲ್ಲ. 50ರಷ್ಟು ನೂರರಷ್ಟು ಹೆಚ್ಚಿಗೆ ಆಗಿದೆ. ಇದಕ್ಕೆ ಕಾರಣವೇನೆಂದರೆ ಯಾವುದೂ ಕೂಡ ಹಣದಿಂದ ವಿಳಂಬವಾಗಿಲ್ಲ. ಇವತ್ತು ಅಲ್ಲಿ ನಡೆಯತಕ್ಕಂಥ ಒಂದು ವಿಧಾನದಿಂದ, ಕಾರ್ಯರೂಪಕ್ಕೆ ತರತಕ್ಕಂಥ ವಿಧಿಯಿಂದ, ಕಂಟ್ರಾಕ್ಟರ್‌ಗಳಿಂದ ಬಹಳ ತೊಂದರೆಯಾಗಿದೆ ಎಂದು ನಾವು ಕೇಳಿದ್ದೇವೆ.

ಛೇರ್ಮನ್: ಸ್ವಲ್ಪ ಬ್ರೀಫ್ ಆಗಿ ಹೇಳಿ.

ಶ್ರೀ ಬಿ.ಸೋಮಶೇಖರ್: ನಾನು ಪ್ರಮುಖವಾದಂತಹ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ.

ಛೇರ್ಮನ್: ಡಿಮ್ಯಾಂಡ್ ಮೇಲೆ ಮಾತನಾಡುವಾಗ ಇದನ್ನಲ್ಲಿ ಹೇಳಿ.

ಶ್ರೀ ಬಿ.ಸೋಮಶೇಖರ್: ಡಿಮ್ಯಾಂಡ್ ಮೇಲೆ ಮಾತನಾಡುವಾಗ ಬೇರೆ, ಇದರಲ್ಲಿ ಮಾತನಾಡುವುದು ಇದೆ. ಇನ್ನು ಪ್ಯಾಕೇಜ್ ಸಿಸ್ಟಂ ಆಫ್ ಟೆಂಡರ್ ಎಂದು ನಾವು ಈಗ ಹೊಸದಾಗಿ ತಯಾರು ಮಾಡಿದ್ದೇವೆ. ಮೊದಲು ಕೆಲಸಗಳನ್ನು ಯಾವ ವಿಧಾನದಲ್ಲಿ ತೆಗೆದುಕೊಳ್ಳುತ್ತಿತ್ತು ಎಂದರೆ ಒಂದು ಹೆಡ್ ವರ್ಕ್ಸ್. ಅದು ಸಿವಿಲ್ ವರ್ಕ್ಸ್. ಇನ್ನೊಂದು ಪೈಪ್‌ಲೈನ್, ಇದರಲ್ಲಿ ಇನ್ನೊಂದು ಓವರ್ ಹೆಡ್ ಟ್ಯಾಂಕ್ ಕೆಲಸ. ಅದು ಸಿವಿಲ್ ಕೆಲಸ. ಪೈಪ್‌ಲೈನ್ ಮೆಕಾನಿಕಲ್ ಕೆಲಸ. ಟ್ರೀಟ್‌ಮೆಂಟ್ ಪ್ಲಾಂಟ್ ಅದು ಮೆಕಾನಿಕಲ್ ಮತ್ತು ಎಲೆಕ್ಟ್ರಿಕಲ್. ಪಂಪಿಂಗ್ ಮೆಷಿನ್ ಅದು ಎಲೆಕ್ಟ್ರಿಕಲ್ ವರ್ಕ್. ಈ ರೀತಿ ಐದು ಭಾಗಗಳಾಗಿ ವಿಂಗಡಣೆ ಮಾಡುತ್ತೇವೆ. ಈ ಐದು ಭಾಗಗಳಲ್ಲಿ ಯಾವ್ಯಾವ ಕೆಲಸಗಳಲ್ಲಿ ಪರಿಣಿತಿ ಪಡೆದಿರತಕ್ಕಂಥವರು ಇದ್ದಾರೆ ಅದೇ ವಿಷಯದಲ್ಲಿ ಕೆಲಸವನ್ನು ತೆಗೆದುಕೊಳ್ಳತಕ್ಕಂಥ ಕಂಟ್ರಾಕ್ಟರ್ ಇದ್ದರು ಅವರಿಗೆ ಪ್ರತ್ಯೇಕವಾದ ಟೆಂಡರ್ ಕರೆದು ಸೈಮಲ್‌ಟೇನಿಯಸ್ ಆಗಿ ಎಲೆಕ್ಟ್ರಿಕಲ್ ಕಂಟ್ರಾಕ್ಟ್ ಒಂದು ಕಡೆ ಕೆಲಸ ನಡೆಯುತ್ತಿದ್ದರೆ, ಇನ್ನೊಂದು ಕಡೆ ಸಿವಿಲ್ ಕೆಲಸ ಮಾಡುವುದು, ಈ ರೀತಿಯಾಗಿ ಕೆಲಸಗಳು ನಡೆಯುತ್ತಿತ್ತು. ಅದರಿಂದಾಗಿ ಅಷ್ಟು ಅವ್ಯವಹಾರಗಳು ಕಾಣಿಸುತ್ತಿರಲಿಲ್ಲ ಇವತ್ತು ಪ್ಯಾಕೇಜ್ ಸಿಸ್ಟಂ ಆಫ್ ಟೆಂಡರ್ ಎಂದು ಮಾಡಿ ಈ ಎಲ್ಲಾ ಐಟಮ್ಸ್ ಆಫ್ ವರ್ಕ್ಸ್ ಅನ್ನು ಒಬ್ಬ ಕ್ವಾಲಿಫೈಡ್ ಕಂಟ್ರಾಕ್ಟರ್‌ಗೆ ಕೊಟ್ಟು ಮಾಡಿಸುವುದು. ಕ್ವಾಲಿಫೈಡ್ ಕಂಟ್ರಾಕ್ಟ್ ಎಂದರೆ ಅವನು ಪೈಪ್‌ಲೈನ್ ಕೆಲಸದ ವಿಷಯದಲ್ಲಿ ಪರಿಣಿತಿ ಪಡೆದಿಲ್ಲ. ಯಾವುದೋ ಒಂದು ವಿಷಯದಲ್ಲ ಮಾತ್ರ ಪರಿಣಿತಿ ಪಡೆದಿದ್ದರೆ ಅವನಿಗೆ ಎಲ್ಲಾ ಕೆಲಸಗಳನ್ನು ಕೊಡುತ್ತಾರೆ. ಆಗ ಅವನು ಬೇರೆ ಕೆಲಸಗಳಿಗೆ ಯಾರ್‍ಯಾರು ಯಾವ್ಯಾವ ವಿಚಾರಗಳಲ್ಲ ಪರಿಣಿತಿ ಪಡೆದಿರುತ್ತಾರೋ ಅಂತಹವರ ಹತ್ತಿರ ಪ್ರತ್ಯೇಕವಾಗಿ ಪತ್ರಗಳನ್ನು ಪಡೆದು ನಾವು ಕೆಲಸ ಮಾಡುತ್ತೇವೆಂದು ಕೊಡುತ್ತಾರೆ. ಈ ಕೆಲಸವನ್ನು ತೆಗೆದುಕೊಂಡ ಮೇಲೆ ಅವನಿಗೂ ಲೈನ್ ಕಂಟ್ರಾಕ್ಟರ್‌ನಿಗೂ ಕಿತ್ತಾಟ ಬಂದರೆ ಆ ಕೆಲಸ ನಿಂತುಹೋಯಿತು. ಅಥವಾ ಇನ್ನಾವುದಾದರೂ ಪರ್ಸೆಂಟೇಜ್ ವಿಚಾರದಲ್ಲಿ, ಅಗ್ರಿಮೆಂಟ್ ವಿಚಾರದಲ್ಲಿ ವ್ಯತ್ಯಾಸ ಬಂದರೆ ಆ ಕೆಲಸ ನಿಂತು ಹೋಗುತ್ತದೆ. ಇನ್ನೊಂದು ವಿಚಾರವೇನೆಂದರೆ ಪ್ರೀ ಕ್ವಾಲಿಫೈಡ್ ಟೆಂಡರ್ ಎಂದು ಕರೆದಾಗ ದೊಡ್ಡ ದೊಡ್ಡ ಕಂಟ್ರಾಕ್ಟರ್ ಮಾತ್ರ ಬರುತ್ತಾರೆ.

ಛೇರ್ಮನ್: ಡೀಟೈಲ್ ಆಗಿ ಹೋಗುವುದು ಬೇಡ.

ಶ್ರೀ ಬಿ.ಸೋಮಶೇಖರ್: ಮಾನ್ಯ ಉಪಾಧ್ಯಕ್ಷರೆ, ಇದು ಏಕೆ ವಿಳಂಬ ಹಾಗೂ ಎಸ್ಕಲೇಷನ್ ಕಾಸ್ಟ್ ಆಗುತ್ತದೆ ಎಂದು ಹೇಳುತ್ತಿದ್ದೇನೆ. ನಾವು ಇದರಿಂದಾಗಿ ಸಾರ್ವಜನಿಕರಿಗೆ ಪಟ್ಟಣ ಪ್ರದೇಶಗಳಲ್ಲಿ ನೀರು ಕೊಡುವುದಕ್ಕೆ ಆಗುತ್ತಿಲ್ಲ. ಇವತ್ತು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲ. ಶೇಕಡ 35 ಪರ್ಸೆಂಟ್ ವಾಸ ಮಾಡತಕ್ಕಂಥ ನಗರ ಪ್ರದೇಶಗಳಲ್ಲಿ ಇವತ್ತು ಕುಡಿಯುವ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲ. ನಮಗೆ ದುಡ್ಡಿನ ತೊಂದರೆ ಇಲ್ಲ, ನೀರಿನ ತೊಂದರೆ ಇಲ್ಲ. ಆದರೂ ಮಾಡುವುದಕ್ಕೆ ಆಗುತ್ತಿಲ್ಲ. ಆಡಳಿತಾತ್ಮಕ ವೈಫಲ್ಯತೆ ಇದೆ. ಅದನ್ನು ಇವತ್ತು ಸರಪಡಿಸಬೇಕಾಗಿದೆ. ಇವತ್ತು ಏನು ಕಂಟ್ರಾಕ್ಟರ್‌ಗಳು ಎಲ್ಲಾ ಸೇರಿ 10 ಪರ್ಸೆಂಟ್ ಎಂದು ಅಡ್ವಾನ್ಸ್ ಅಮೌಂಟ್ ತೆಗೆದುಕೊಳ್ಳುತ್ತಾರೆ, ಅದು ಮೆಷಿನರಿ ಸೇರಿಸಿ ತೆಗೆದುಕೊಳ್ಳುತ್ತಾರೆ. ಆ 10 ಪರ್ಸೆಂಟ್ ತೆಗೆದುಕೊಂಡು ಇವತ್ತು ಕಂಟ್ರಾಕ್ಟ್‌ರ್‌ಗಳು ಬರದೆ ಇರತಕ್ಕಂಥ ಜನ ಬಹಳ ಇದ್ದಾರೆ. ಏಕೆಂದರೆ 80 ಪರ್ಸೆಂಟ್ ಮೆಷಿನರಿಗೆ ಇದ್ದಂತಹದ್ದು ಇನ್ನು 20 ಪರ್ಸೆಂಟ್ ಸಿವಿಲ್ ವರ್ಕ್ಸ್. ಎಲ್ಲಾ ಸೇರಿ ಕೇವಲ 10 ಪರ್ಸೆಂಟ್ ಮೆಷಿನರಿಗೆ ದುಡ್ಡು ಬಂತು. ಈ ದುಡ್ಡು ತೆಗೆದುಕೊಂಡು ಹೋಗಿ ಕೆಲಸ ನಿಂತಿರುವ ಸಂದರ್ಭ ಇವತ್ತು ನಡೆಯುತ್ತಿದೆ. ಇನ್ನು ಬೇರೆ ಬೇರೆ ರಾಜ್ಯಗಳಲ್ಲಿ ಬ್ಲಾಕ್ ಲಿಸ್ಟ್ ಆಗಿರುವವರನ್ನು ಕರೆದುಕೊಂಡು ಬಂದು ಇವತ್ತು ಕೆಲಸ ಕೊಟ್ಟಿದ್ದಾರೆ. ಅವರೂ ಸಹ ಬಿಟ್ಟು ಹೋಗಿದ್ದಾರೆ. ಈ ಎಲ್ಲಾ ಗೊಂದಲಗಳಾಗಿ ಇವತ್ತು ನೀರಿನ ತೊಂದರೆ ಆಗಿದೆ. ನಾನು ಹೇಳತಕ್ಕಂಥಾದ್ದು ಇಷ್ಟೆ. ಯಾವ ಕಾರಣಕ್ಕೆ ನಗರ ಪ್ರದೇಶಗಳಲ್ಲಿ ವಿಳಂಬವಾಗುತ್ತಿದೆ ಎಂದು ನೀವು ಪುನರ್ ಪರಿಶೀಲನೆ ಮಾಡಬೇಕು. ನಿಗದಿತ ವೇಳೆಯಲ್ಲಿ ಈ ಯೋಜನೆಗಳನ್ನು ಯಾವರೀತಿ ತಯಾರು ಮಾಡಬೇಕು. ಯಾರ್ಯಾರು ಕಾರಣಕರ್ತರಾಗಿದ್ದಾರೆ. ಇದನ್ನೆಲ್ಲಾ ಸರಿಯಾಗಿ ಅಧ್ಯಯನ ಮಾಡಿ ಇದರ ಪರಿಹಾರ ಮಾಡಬೇಕು. ಕುಡಿಯುವ ನೀರಿಗಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಸಹ ಏನು ಶೇಕಡ 75 ರಷ್ಟು ಹಣವನ್ನು ಲೋನ್ ಆಗಿ ಕೊಡುತ್ತಾರೆ ಅದಕ್ಕಾಗಿ ಒಂದು ಪ್ರಸ್ತಾವನೆಯನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿ. ಇಡೀ ರಾಜ್ಯದಲ್ಲಿ ಒಂದು ಸರ್ವೇ ಮಾಡಿಸಿ ಆದಷ್ಟು ಬೇಗ ಈ ಪ್ರಸ್ತಾವನೆಯನ್ನು ಕೇಂದ್ರಸರ್ಕಾರ್ರಕ್ಕೆ ಕಳಿಹಿಸಿಕೊಡಬೇಕೆಂದು ಹೇಳುತ್ತಾ, ಯಾವ್ಯಾವುದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ ಎಷ್ಟು ಹಣ ಕೊಟ್ಟಿದ್ದಾರೆ ಎಂದು ಹೇಳಬೇಕೆಂದು ಕೇಳುತ್ತೇನೆ.

ಛೇರ್ಮನ್: ಇನ್ನು ಯಾರು ಮಾತನಾಡಬೇಕಾದರೂ ಅಜೆಂಡಾದಲ್ಲಿ ಇರುವಂತಹ ವಿಷಯವನ್ನು ಓದಿಬಿಡಿ. ಈ ರಾಜ್ಯದಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡುವುದು. ಅದಕ್ಕೆ ಸೀಮಿತವಾಗಿ ಮಾತನಾಡಿದರೆ ಒಳ್ಳೆಯದು. ಆ ರೀತಿ ಮಾತನಾಡಿದರೆ ಎಲ್ಲರಿಗೂ ಅವಕಾಶ ಕೊಡಬಹುದು. ಈಗ ಮಾನ್ಯ ಹನುಮೇಗೌಡರನ್ನು ಕರೆಯುತ್ತೇನೆ.

ಶ್ರೀ ವಿ.ಪಾಪಣ್ಣ: ಮಾನ್ಯ ಉಪಾಧ್ಯಕ್ಷರೆ, ನಾನು ಸಮಸ್ಯೆ ಬಗ್ಗೆ ಮಾತ್ರ

ಮಾತನಾಡುತ್ತೇನೆ. ಭಾಷಣ ಮಾಡುವುದಿಲ್ಲ.

ಛೇರ್ಮನ್: ಮಾನ್ಯ ಹನುಮೇಗೌಡರನ್ನು ಕರೆದಿದ್ದೇನೆ. ನಿಮಗೆ ಮುಂದೆ ಅವಕಾಶ ಕೊಡುತ್ತೇನೆ. ನಿಮ್ಮ ಲೀಡರ್ ಎದ್ದು ನಿಂತಿರುವಾಗ ನೀವು ಹಾಗೆ ಎದ್ದು ನಿಂತುಕೊಳ್ಳಬಾರದು.

+ಶ್ರೀ ಕೆ.ಹಚ್. ಹನುಮೇಗೌಡ(ಹಾಸನ): ಮಾನ್ಯ ಉಪಾಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಬೇಸಿಗೆ ಬಂದರೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಎಷ್ಟು ಹೇಳಿದರೂ ಕೂಡ ಕಡಿಮೆ ಎಂದು ಹೇಳಬಹುದು. ಇದರಲ್ಲಿ ಎರಡು ವಿಧಾನಗಳಿವೆ. ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಹಳ್ಳಿಗಳಲ್ಲೂ ಕೂಡ ಬೋರ್ ಹಾಕಿದ್ದಾರೆ. ಕಡಿಮೆ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಲ್ಲಿ ಹ್ಯಾಂಡ್‌ಪಂಪ್ ಫಿಕ್ಸ್ ಮಾಡಿದ್ದಾರೆ. ಒಂದೆರಡು ಫೇಲ್ಯೂರ್ ಆಗಿದ್ದರೂ ಕೂಡ ನೀರು ಸಿಗುವಂತಹ ಬೋರ್ ಅಂತೂ ಸರ್ಕಾರದವರು ಕಂಡುಹಿಡಿದು ಹಾಕಿದ್ದಾರೆ. ಈಗ ಅಲ್ಲಿ ಸಮಸ್ಯೆ ಏನೆಂದರೆ ಕೆಟ್ಟು ಹೋದಂತಹ ಹ್ಯಾಂಡ್‌ಪಂಪ್‌ಗಳನ್ನು ರಿಪೇರಿ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಇದನ್ನು ಸ್ವಲ್ಪ ತಿಂಗಳುಗಳ ಕಾಲ ಜಿಲ್ಲಾ ಪರಿಷತ್ತು ಮಾಡುತ್ತಿತ್ತು, ಆಗ ಉತ್ತಮವಾಗಿತ್ತು ಎಂದು ಹಳ್ಳಿ ಜನ ಹೇಳುತ್ತಾರೆ. ಆನಂತರ ಅದನ್ನು ತೆಗೆದು ತಾಲ್ಲೂಕು ಬೋರ್ಡ್‌ಗೆ ಕೊಡಲಾಯಿತು. ಅಲ್ಲಿಗೆ ಕೊಟ್ಟ ತಕ್ಷಣ ಅಲ್ಲಿ ಹೆಚ್ಚು ಸಮಸ್ಯೆ ಪ್ರಾರಂಭವಾಯಿತು. ಜಿಲ್ಲಾಪರಿಷತ್ ಮತ್ತು ತಾಲ್ಲೂಕು ಬೋರ್ಡ್‌ಗಳಲ್ಲಿ ಇರತಕ್ಕಂಥ ಎಂಜಿನಿಯರುಗಳಿಗೆ ರಸ್ತೆ ರಿಪೇರಿಗೆ ಬಿಲ್ ಮಾಡುವುದಕ್ಕೆ ಸಮಯ ಇದೆ. ಹ್ಯಾಂಡಪಂಪ್ ರಿಪೇರಿ ಮಾಡುವುದಕ್ಕೆ ಅವರು ಹೆಚ್ಚು ಗಮನ ಕೊಡುತ್ತಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಅನುಮಾನವಾಗುತ್ತಿದೆ. ಅವರು ಸರಿಯಾಗಿ ಬೋರ್ ಅನ್ನು, ಹ್ಯಾಂಡ್‌ಪಂಪ್ ಅನ್ನು ರಿಪೇರಿ ಮಾಡಿದರೆ 90 ಪರ್ಸೆಂಟ್ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಇದರ ಬಗ್ಗೆ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಿನಿ ವಾಟರ್ ಸಪ್ಲೈ, ಮೇಜರ್ ವಾಟರ್ ಸಪ್ಲೈ ಸ್ಕೀಂ ಇಂಥಾದ್ದು ಏನಾದರೂ ಮೋಟಾರ್ ಕೆಟ್ಟರೆ ಬರ್ನ್ ಆದರೆ ಪುನಃ ಅದನ್ನು ಬಿಚ್ಚಿಕೊಂಡು ಹೋಗಿ ರಿಪೇರಿ ಮಾಡಿ ಅದನ್ನು ಹಾಕಬೇಕಾದರೆ ಕೆಲವು ಸಂದರ್ಭದಲ್ಲಿ ತಿಂಗಳುಗಟ್ಟಲೆ ಆಗುತ್ತದೆ. ಆಗ ಕುಡಿಯುವ ನೀರಿಗೆ ಗ್ರಾಮಾಂತರ ಪ್ರದೇಶದ ಜನಗಳ ಗತಿ ಏನು? ಇದು ದೊಡ್ಡ ಸಮಸ್ಯೆ. ಸರ್ಕಾರ ಹಣ ಖರ್ಚು ಮಾಡಿದೆ. ಪೈಪ್ ಲೈನ್ ಎಳೆದು ನಲ್ಲಿಯನ್ನು ಕೂಡ ಹಾಕಿದ್ದಾರೆ. ಆದರೆ ಒಂದು ಮೋಟಾರ್ ಒಂದು ಸಲ ಬರ್ನ್ ಆದರೆ ಅದನ್ನು ರಿಪೇರಿ ಮಾಡಿ ಫಿಕ್ಸ್ ಮಾಡುವುದಕ್ಕೆ 10 ದಿವಸಗಳಿಂದ 1 ತಿಂಗಳವರೆಗೆ ಸಮಯ ತೆಗೆದುಕೊಳ್ಳುತ್ತಿರುವುದರಿಂದ ಅಲ್ಲಿಯವರೆಗೆ ಆ ಗ್ರಾಮಾಂತರ ಪ್ರದೇಶದ ಜನ ಕುಡಿಯುವ ನೀರಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಪ್ರತಿ ತಾಲ್ಲೂಕು ಬೋರ್ಡಿನಲ್ಲಿ ಅಥವಾ ಜಿಲ್ಲಾ ಪರಿಷತ್ತಿನಲ್ಲಿ 5 ಹೆಚ್.ಪಿ., 7 ಹೆಚ್.ಪಿ.

ಅಥವಾ 10 ಹೆಚ್.ಪಿ. ಸ್ಪೇರ್ ಮೋಟರ್‌ಗಳನ್ನು ಇಟ್ಟುಕೊಂಡಿದ್ದರೆ, ಯಾವುದಾದರೂ ಊರಿನಲ್ಲಿ ಮೋಟರ್ ಸುಟ್ಟುಹೋಯಿತೆಂದರೆ ಆ ತಕ್ಷಣ ಆ ಮೋಟರನ್ನು ರೀಪ್ಲೇಸ್ ಮಾಡಿ ರಿವೈಂಡ್ ಮಾಡಿ ಅಲ್ಲಿ ಹಾಕಬೇಕಾಗುತ್ತದೆ. ಅಲ್ಲಿಯವರೆಗೆ ಸ್ಪೇರ್ ಮೋಟರ್‌ಗಳನ್ನು ಉಪಯೋಗಿಸಿದರೆ ಈ ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು ಎನ್ನುವ ಸಲಹೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತೇನೆ. ಸ್ಪೇರ್ ಪಂಪುಗಳನ್ನು ಇಟ್ಟುಕೊಳ್ಳುವುದಕ್ಕೆ ಬಹಳಷ್ಟು ಹಣ ಖರ್ಚಾಗುವುದಿಲ್ಲ. ಬಹುಶಃ 6-7 ಸಾವಿರ ರೂಪಾಯಿ ಬೆಲೆಯ 2-3 ಪಂಪುಗಳನ್ನು ಸ್ಟಾಕ್ ಇಟ್ಟುಕೊಂಡಿದ್ದರೆ ಇರತಕ್ಕಂಥ ನೀರನ್ನು ಪೂರೈಕೆ ಮಾಡುತ್ತಿಲ್ಲ ಎನ್ನುವ ದೊಡ್ಡ ದೊಡ್ಡ ಗಲಾಟೆಗಳನ್ನು ಕಡಿಮೆ ಮಾಡಬಹುದು ಮತ್ತು ಸರಿಯಾಗಿ ನೀರಿನ ಪೂರೈಕೆ ಮಾಡಬಹುದು. ಇನ್ನು ಪವರ್ ಸಪ್ಲೈ ಸರಿಯಾಗಿ ಆಗದಿರುವುದರಿಂದ ಕುಡಿಯುವ ನೀರಿಗೆ ಹೆಚ್ಚಿನ ತೊಂದರೆಯಾಗಿದೆ. ಒಂದೊಂದು ಸಲ ಅರ್ಧ ಗಂಟೆಯಿಂದ ಹಿಡಿದು 2-3 ದಿವಸಗಳ ಕಾಲ ಪವರ್ ಸಪ್ಲೈ ಇರುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ ಕುಡಿಯುವ ನೀರಿನ ಸರಬರಾಜಿಗೋಸ್ಕರವೇ 25 ಕೆ.ವಿ 63 ಕೆ.ವಿ. ಅಥವಾ 100 ಕೆ.ವಿ.ಯ ಒಂದು ಸೆಪರೇಟ್ ಟ್ರಾನ್ಸ್‌ಫಾರ್ಮರನ್ನು ಇಟ್ಟರೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು. ಕೆಲವು ಸಂದರ್ಭದಲ್ಲಿ ವೋಲ್ಟೇಜ್ ಕಡಿಮೆ ಇದ್ದಾಗ ಗೊತ್ತಿಲ್ಲದೆ ಮೋಟರನ್ನು ಸ್ಟಾರ್ಟ್ ಮಾಡಿಬಿಟ್ಟರೆ ಅದು ಬರ್ನ್ ಆಗುತ್ತದೆ. ಮೋಟರ್ ಬರ್ನ್ ಆದರೆ ಇನ್ನಿತರ ಸಮಸ್ಯೆಗಳು ಪ್ರಾರಂಭವಾಗುತ್ತವೆ. ಪ್ರತಿಯೊಂದು ಕುಡಿಯುವ ನೀರಿನ ಮೇಜರ್ ವಾಟರ್ ಸಪ್ಲೈ ಸ್ಕೀಂಗೆ ಒಂದೊಂದು ಪ್ರತ್ಯೇಕ ಟ್ರಾನ್ಸ್‌ಫಾರ್ಮರ್ ಹಾಕುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಹೇಳುತ್ತೇನೆ. ಬೋರ್‌ವೆಲ್ಸ್, ಮಿನಿ ವಾಟರ್ ಸಪ್ಲೈ ಮತ್ತು ಮೇಜರ್ ವಾಟರ್ ಸಪ್ಲೈ ಇವುಗಳನ್ನು ಸರ್ಕಾರ ಸರಿಯಾಗಿ ಮೈನ್‌ಟೈನ್ ಮಾಡಿಬಿಟ್ಟರೆ ಶೇಕಡ 90ರಷ್ಟು ಪ್ರಾಬ್ಲಮ್ಸ್ ಸಾಲ್ವ್ ಆಗುತ್ತವೆ. ತಾಲ್ಲೂಕು ಬೋರ್ಡ್, ಜಿಲ್ಲಾ ಪರಿಷತ್ ಇಂಜಿನಿಯರುಗಳಿಗೆ ಸರ್ಕಾರದಿಂದ ಎಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೀರೋ ಕೊಟ್ಟುಬಿಡಿ. ಅನಂತರ ಎಲ್ಲೆಲ್ಲಿ ಖರ್ಚಾಯಿತೆಂದು ಸುಳ್ಳು ಬಿಲ್ಲು ಮಾಡುವುದಕ್ಕೆ ಸಮಯ ಕೊಟ್ಟುಬಿಡಿ ಸಾಕು. ಅವರುಗಳು ಕೆಲಸವನ್ನು ಮಾಡುವವರಲ್ಲ, ನೋಡುವವರಲ್ಲ. ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಕುಡಿಯುವ ನೀರಿನ ಸಮಸ್ಯೆ ವಿಚಾರದಲ್ಲಿ ಅವರೇ ಮೊದಲನೆ ದ್ರೋಹಿಗಳೆಂದು ಹೇಳಿದರೆ ಖಂಡಿತಾ ತಪ್ಪಾಗಲಾರದು. ಪಂಪುಗಳು ಕೆಟ್ಟ ಹೋಗಿವೆ ಎಂದು ಯಾರ್‍ಯಾರು ದೂರುಗಳನ್ನು ಕೊಟ್ಟಿದ್ದಾರೆ, ಎಲ್ಲೆಲ್ಲಿ ರಿಪೇರಿ ಮಾಡಲಾಗಿದೆ, ಎಷ್ಟು ಸಮಯದಲ್ಲಿ ರಿಪೇರಿ ಮಾಡಲಾಗಿದೆ ಇತ್ಯಾದಿಗಳನ್ನು ಮೈನ್‌ಟೈನ್ ಮಾಡಲು ಅವರ ಹತ್ತಿರ ಒಂದು ರಿಜಿಸ್ಟರ್ ಇಡುವುದಕ್ಕೆ ಹೇಳಬೇಕು. ಹಾಗೆಯೇ ಯಾರಾದರೂ ರೈತರು, ಹಳ್ಳಿಯ ಜನರು ಬಂದು ಪಂಪು ಕೆಟ್ಟುಹೋಗಿದೆ ಎಂದು ಹೇಳಿದರೆ ಸ್ಥಳಕ್ಕೆ ಹೋಗಿ ಅದನ್ನು 24 ಗಂಟೆಯೊಳಗೆ ರಿಪೇರಿ ಮಾಡಿ ರಿಪೋರ್ಟ್ ಮಾಡಬೇಕು ಇಲ್ಲದಿದ್ದರೆ ನಿಮ್ಮನ್ನು

ಸಸ್ಪೆಂಡ್ ಮಾಡುತ್ತೇವೆ ಅಥವಾ ಸಂಬಳ ನಿಲ್ಲಿಸುತ್ತೇವೆ ಎನ್ನುವ ಒಂದು ಕ್ಲಿಯರ್ ಇನ್‌ಸ್ಟ್ರಕ್ಷನ್ಸ್‌ನ್ನು ಸರ್ಕಾರದಿಂದ ಕೊಟ್ಟರೆ ಈಗ ಬರತಕ್ಕಂಥ ಎಷ್ಟೋ ಪ್ರಾಬ್ಲಮ್ಸ್ ಸಾಲ್ವ್ ಆಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಲ್ಲಿಯ ಇಂಜಿನಿಯರುಗಳು ಕಂಟ್ರಾಕ್ಟರುಗಳನ್ನು ಕರೆದುಕೊಂಡು, ಜೊತೆಗೆ ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ತಿನ ಸದಸ್ಯರನ್ನು ಸೇರಿಸಿಕೊಂಡು ಎಲ್ಲಿ ಕೆಲಸ ಆಗಿದೆ ಎಂದು ತೋರಿಸಿ ಬಿಲ್ ಮಾಡೋಣ, ಯಾವ ಕಾಲದಲ್ಲಿ ಯಾರು ಸೇತುವೆ ಕಟ್ಟಿದ್ದಾರೆ ಈ ತರಹ ಹುಡುಕಿಕೊಂಡು ಊರೂರು ತಿರುಗುತ್ತಾರೆಯೇ ವಿನಃ ಈ ಕುಡಿಯುವ ನೀರಿಗೆ ಅವರು ಹೆಚ್ಚು ಗಮನ ಕೊಡುತ್ತಿಲ್ಲ. ನಾನು ಒಂದು ಸಣ್ಣ ಉದಾಹರಣೆ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ತಾಲ್ಲೂಕು ಪಂಚಾಯಿತಿ ಕಡೆಯಿಂದ ಕೆಲವು ಕೆಲಸಗಳನ್ನು ಮಾಡಿಸಿದ್ದರು. ಏನು ಮಾಡಿಸಿದ್ದಾರೆ ಅದನ್ನು ನೋಡೋಣ ಎಂದು ನಾನು ಹೋಗಿದ್ದೆ. ಒಂದು ರಸ್ತೆ ರಿಪೇರಿಗೆಂದು 10 ರಿಂದ 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದರು. ''ಏನ್ರೀ, ರಿಪೇರಿ ಮಾಡಿರುವುದು ಕಾಣುತ್ತಿಲ್ಲ, ಎಂದು ಕೇಳಿದೆ. ಗ್ರಾವೆಲ್ ಕೋಟಿಂಗ್ ಅಂದ್ರು. ಹಾಗಂದ್ರೆ ಏನ್ರೀ ಎಂದು ಕೇಳಿದೆ. ಗ್ರಾವೆಲ್ ಅದನ್ನು ಹಾಕಿದ್ದೇವೆಂದು ಹೇಳಿದರು. ಎಲ್ರೀ, ಏನೂ ಕಾಣುವುದಿಲ್ಲ ಎಂದು ಹೇಳಿದೆ. ಆ ಸಣ್ಣ ಸಣ್ಣ ಕಲ್ಲೆಲ್ಲ ಗಾಡಿ ಹೊಡೆದು ನುಚ್ಚು ಆಗಿ ಹೋಗಿಬಿಟ್ಟವು ಎಂದು ಹೇಳಿದರು. ಅಲ್ರೀ, ಅಲ್ಲಿ ಮಣ್ಣಾದರೂ ಕಾಣಬೇಡವೇ? ಎಂದು ಕೇಳಿದೆ. ಗಾಳಿ ಬೀಸಿಬಿಡ್ತು ಹೋಯಿತು ಎಂದು ಹೇಳಿದರು. ಇದು ನಿಜವಾದ ಮಾತು. ನಾನು ಸುಳ್ಳು ಹೇಳುತ್ತಿಲ್ಲ, ಉತ್ಪ್ರೇಕ್ಷೆ ಮಾಡಿಕೊಂಡು ಹೇಳುತ್ತಿಲ್ಲ. ತಾಲ್ಲೂಕು ಬೋರ್ಡಿನಿಂದ ನಡೆಯತಕ್ಕಂಥ ಕೆಲಸಗಳಲ್ಲಿ ಕಾಲು ಭಾಗ ಸುಳ್ಳು ಬಿಲ್ಲುಗಳನ್ನು ತಯಾರು ಮಾಡುತ್ತಾರೆ. 60 ರಿಂದ 70 ಭಾಗ ಲೋ-ಕ್ವಾಲಿಟಿ ಕೆಲಸ ಮಾಡುತ್ತಿದ್ದು ಅದು 15 ದಿವಸದಲ್ಲಿಯೇ ಹಾಳಾಗಿ ಹೋಗುತ್ತದೆ. ಎಲ್ಲೋ ಅಪರೂಪಕ್ಕೆ ಒಂದೊಂದು ಕೆಲಸ ಚೆನ್ನಾಗಿ ಆಗಿರಬಹುದೇ ವಿನಃ ಖಂಡಿತವಾಗಿ ಸರ್ಕಾರ ತಿಳಿದುಕೊಂಡಿರುವ ಹಾಗೆ ಗ್ರಾಮಾಂತರ ಪ್ರದೇಶದಲ್ಲಿ ಕ್ರಾಂತಿ ಆಗುತ್ತಿಲ್ಲ. ಹಿಂದಿನ ಸರ್ಕಾರ ಇದ್ದಾಗ ಕುಡಿಯುವ ನೀರಿಗೋಸ್ಕರ ಬೇಕಾದಷ್ಟು ಖರ್ಚು ಮಾಡಿಸಿದ್ದೇವೆಂದು ಹೇಳಿದರು. ಒಂದು ಕೆಲಸ ಮಾಡಬೇಕು. ಅದೇನೆಂದರೆ ''ಗ್ರಾಮಾಂತರ ಪ್ರದೇಶದಲ್ಲಿ ಅಧಿಕಾರ ವಿಕೇಂದ್ರೀಕರಣ ಆದಮೇಲೆ ಆರ್ಥಿಕವಾಗಿ, ಸಾಮಾಜಿಕವಾಗಿ, ಭೌತಿಕವಾಗಿ ಮತ್ತು ನೈತಿಕವಾಗಿ ಏನು ಪರಿಣಾಮ ಆಗಿದೆ, ಗ್ರಾಮಾಂತರ ಪ್ರದೇಶದ ರೈತರಿಗೆ ಏನು ಅನುಕೂಲವಾಗಿದೆ'' ಇತ್ಯಾದಿಗಳನ್ನು ಹಿಂದಿನ ಸರ್ಕಾರ ನಡೆಸಿದಂಥ 5 ವರ್ಷಗಳು ಮತ್ತು ಈಗಿನ ಸರ್ಕಾರದ 6 ತಿಂಗಳ ಕಾಲದಿಂದ ಏನೇನಾಗಿದೆ ಎಂಬುದನ್ನು ಪರಿಷ್ಕೈ ಮಾಡುವುದಕ್ಕೆ ಒಂದು ಕಮೀಷನ್‌ನ್ನು ನೇಮಕ ಮಾಡಿ. ಆಗ ನಿಜ ಏನು ಎನ್ನುವುದು ಗೊತ್ತಾಗುತ್ತದೆ. ನಿಮ್ಮ ಸರ್ಕಾರದ 6 ತಿಂಗಳ ಆಡಳಿತವನ್ನು ನೋಡಿದಾಗ ಹಿಂದಿನ ಸರ್ಕಾರದ ಧಾಟಿಯಲ್ಲೇ ಹೋಗುತ್ತಿದ್ದೀರಿ. ಏನೂ ಬದಲಾವಣೆ ಆಗಿಲ್ಲ. ಬಹಳ ಅನ್ಯಾಯ ಆಗಿದೆ. ನನ್ನ ಕ್ಷೇತ್ರದಲ್ಲಿ ಏನಾಗಿದೆ ಎಂಬುದನ್ನು ಒಂದು ಉದಾಹರಣೆ

ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಮಲೆನಾಡು ಡೆವಲಪ್‌ಮೆಂಟ್ ಬೋರ್ಡಿನಿಂದ ರಸ್ತೆ ನಿರ್ಮಾಣಕ್ಕೆಂದು ನಾಲ್ಕೂವರೆ ಕೋಟಿ ರೂಪಾಯಿಗಳು ಖರ್ಚಾಗಿದೆ. ಎಲ್ಲಾ ಅಪ್ರೋಚ್ ರೋಡ್ಸ್ ರಿಪೇರಿಗೆಂದು ಖರ್ಚು ಮಾಡಿದ್ದಾರೆ. ಸರ್ಕಾರಕ್ಕೆ ನಾನು ಚಾಲೆಂಜ್ ಮಾಡಿ ಕೇಳುತ್ತೇನೆ. ನಡೀರಿ, ಅಲ್ಲಿ ಕೆಲಸ ನಡೆದಿದ್ದರೆ ನನಗೆ ತೋರಿಸಿ. ಆ ಊರಿನ ಯಾವುದೇ ರಸ್ತೆಗಳಿಗೆ ಜಲ್ಲಿ ಹಾಕಿಸಿಲ್ಲ, ಯಾವುದೇ ರಸ್ತೆಗೆ ಹೊಸದಾಗಿ ಸೇತುವೆಯನ್ನು ಕಟ್ಟಿಲ್ಲ, ಯಾವುದೇ ರಸ್ತೆಗೆ ಟಾರ್ ಹಾಕಿಲ್ಲ ಅಂತೂ ದುಡ್ಡು ಖರ್ಚಾಗಿ ಹೋಗಿದೆ. ನೀವು ಈ ಕೆಲಸವನ್ನು ಮಾಡುವುದಕ್ಕೆ ಇಂಜಿನಿಯರುಗಳಿಗೆ ಅವಕಾಶ ಕೊಟ್ಟಿರುವುದರಿಂದ ಅವರು ಕುಡಿಯುವ ನೀರಿನ ಕಡೆಗೆ ಗಮನ ಕೊಡುತ್ತಿಲ್ಲ. ಈ ದೇಶದಿಂದ ಬಡವರಿಗೋಸ್ಕರ ತಂದಂಥ ಹಣ ಖರ್ಚು ಆಗಿದೆ. ಸರ್ಕಾರದವರು ಖರ್ಚು ಮಾಡಿ ಆದಷ್ಟು ವ್ಯವಸ್ಥೆಗಳನ್ನು ಮಾಡುತ್ತಿದ್ದರೂ ಕೂಡ ದೋಖಾ, ಮೋಸ, ವಂಚನೆ, ಜನತಾ ದ್ರೋಹ ಆಗಿದೆ. ಅಲ್ಲಿರತಕ್ಕಂಥ ಇಂಜಿನಿಯರುಗಳು ಮತ್ತು ಅವರ ಜೊತೆ ಸೇರಿಕೊಂಡಿರತಕ್ಕಂತ ಕೆಲವು ರಾಜಕಾರಣಿಗಳು ಒಟ್ಟಾಗಿ ಈ ರೀತಿ ಮೋಸ ಮಾಡಿ ಜನರಿಗೆ ತೊಂದರೆ ಮಾಡುತ್ತಿದ್ದಾರೆಯೇ ವಿನಃ ಬೇರೆ ಏನೂ ಇಲ್ಲ. ನೀವು ಮತ್ತು ನಿಮ್ಮ ಅಧಿಕಾರಿಗಳು ಸರ್‌ಪ್ರೈಸ್ ವಿಸಿಟ್ ಮಾಡಿ ಇಂಜಿನಿಯರುಗಳ ಟಿ.ಎ. ಡಿ.ಎ. ಬಿಲ್ಸ್ ತೆಗೆದುಕೊಂಡು ಎಲ್ಲೆಲ್ಲಿ ಕೆಲಸ ಮಾಡಿಸಿದ್ದೀರಿ ನೋಡೋಣ ಎಂದು ಎರಡು ಕಡೆಯಾದರೂ ಮಾಡಿಸಿರುವ ಕೆಲಸವನ್ನು ಚೆಕ್ ಮಾಡಿ. ಆಗ ನಿಜಾಂಶ ತಿಳಿಯುತ್ತದೆ ಮತ್ತು ಅವರಿಗೂ ಸಹ ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ಭಯ ಕೂಡ ಇರುತ್ತದೆ. ಒಂದು ದಿಣ್ಣೆಯಲ್ಲಿ 25 ಮನೆ ಇರತಕ್ಕಂಥ ಒಂದು ಹರಿಜನ ಕಾಲೋನಿಗೆ ಹೋದೆ. ಅಲ್ಲಿ 3 ಅಡಿ ಅಗಲ ಮತ್ತು 3 ಅಡಿ ಉದ್ದದ ಡ್ರೈನೇಜನ್ನು ತೆಗೆದಿದ್ದರು. ಅಲ್ಲಿ ವಯಸ್ಸಾದವರೆಲ್ಲ ನನ್ನನ್ನು ಅಡ್ಡ ಹಾಕಿ ನ್ಯಾಯವಾಗಿ ಇದನ್ನು ಮುಚ್ಚಿಕೊಟ್ಟು ಹೋಗುತ್ತೀರೋ ಇಲ್ಲವೋ ಎಂದು ಕೇಳಿದರು. ನನಗೇನಪ್ಪಾ ಗೊತ್ತು, ನಾನು ಮಾಡಿದ್ದೇನೆಯೇ ಎಂದು ಕೇಳಿದೆ. ಯಾರು ಮಾಡಿದರೋ ನಮಗೆ ಗೊತ್ತಿಲ್ಲ, ಮಕ್ಕಳು ಅದರೊಳಗೆ ಬೀಳುತ್ತವೆಂದು ಪ್ರತೀ ದಿವಸ ಒಬ್ಬರು ಕಾಯುತ್ತಾ ಕುಳಿತುಕೊಳ್ಳಬೇಕಾಗುತ್ತದೆ ಎಂದು ಹೇಳಿದರು. 25 ಮನೆ ಇರುವಂಥ ಒಂದು ಹರಿಜನ ಕಾಲೋನಿಗೆ ಕೊಟ್ಟಂಥ ದುಡ್ಡನ್ನು ಬಾಚಿದವನು ಅಲ್ಲಿಗೆ 3 ಅಡಿ ಅಗಲ 3 ಅಡಿ ಉದ್ದ ಹಳ್ಳವನ್ನು ತೋಡಿ ಹೋಗಿದ್ದಾನೆ. ಇದನ್ನು ಯಾವ ಪುರುಷಾರ್ಥಕ್ಕೆ ಯಾರಿಗೋಸ್ಕರ ಮಾಡಿದ್ದು ಎಂಬುದನ್ನು ದಯವಿಟ್ಟು ಲೆಕ್ಕಹಾಕಿ. ಹೀಗೆ ನಡೆಯುತ್ತಲೇ ಇವೆ. ವಿಕೇಂದ್ರೀಕರಣ ವರವಾಗುತ್ತದೆ ಎಂದು ಹೇಳಿ ತಂದಿದ್ದಾರೆ. ಇಂಥ ದುರ್ವ್ಯವಹಾರಗಳನ್ನು ಸರಿಪಡಿಸದೆ ಹೋದರೆ, ಇದೇ ಪರಿಸ್ಥಿತಿ ಕಂಟಿನ್ಯೂ ಆದರೆ ಗ್ರಾಮಾಂತರ ಪ್ರದೇಶಗಳಿಗೆ ವಿಕೇಂದ್ರೀಕರಣ ದೊಡ್ಡ ಶಾಪವಾಗಿ ಪರಿಣಮಿಸುತ್ತದೆ. ವಿಕೇಂದ್ರೀಕರಣದ ತತ್ವ, ನೀತಿ, ನಿಯಮ ಚೆನ್ನಾಗಿದೆ ಆದರೆ ಅದು ಆಚರಣೆಯಲ್ಲಿ ಬರುತ್ತಿಲ್ಲ. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬ ಮೆಂಬರ್ ಎಲೆಕ್ಟ್

ಆಗಿ ಬಂದ. ಒಂದು ಊರಿನಲ್ಲಿ 125 ಮನೆ ಒಂದು ಕಡೆ ಇದೆ ಇನ್ನೊಂದು ಕಡೆಗೆ 2(ರಿಂದ 30 ಮನೆಗಳ ಒಂದು ಕಾಲೋನಿ ಇದೆ. ಇವುಗಳ ಮಧ್ಯೆ ಒಂದೂವ(ಕಿ.ಮಿ.ಗಳ ಅಂತರವಿದೆ. ಜಿಲ್ಲಾಪರಿಷತ್ತಿನಿಂದ ಈ ಕ್ಷೇತ್ರಕ್ಕೆ ಕೊಟ್ಟಿರುವ ಹಣ ಏನೇನಾಯಿತು ಎಂದರೆ ಈ ಊರಿನಿಂದ ಆ ಕೊಪ್ಪಲಿಗೆ ಡ್ರೈನೇಜ್ ಮಾಡಿಸಲಾಯಿತ ಎಂದು ಬಿಲ್ ಮಾಡಿ ಹಣ ತೆಗೆದುಕೊಂಡ. ಮುಂದಿನ ವರ್ಷ ಆ ಕೊಪ್ಪಳದಿಂದ ಈ ಊರಿಗೆ ಅದೇ ಕೆಲಸವನ್ನು ಮಾಡಿಸಿದೆ ಎಂದು ಬಿಲ್ ಮಾಡಿ ಹಣ ಪಡೆದ. ಮೂರನೆ ವರ್ಷಕ್ಕೆ ಮಧ್ಯದಿಂದ ಈ ಕಡೆಗೆ ಅರ್ಧ ಆ ಕಡೆಗೆ ಅರ್ಧ ಆ ಕೆಲಸ ಮಾಡಿಸಿದೆ ಎಂದು ಬಿಲ್ ಮಾಡಿ ಹಣ ಪಡೆದ. 4ನೇ ವರ್ಷ ಈ ಕೊನೆಯಿಂದ ಆ ಕೊನೆಯವರೆಗೆ ರಿಪೇ(ಮಾಡಿಸಿದೆ ಎಂದು ಹೇಳಿ ಬಿಲ್ ಮಾಡಿ ಹಣ ಪಡೆದುಕೊಂಡ. ಆದರೆ ಯಾವ ವರ್ಷವೂ ಏನೂ ಕೆಲಸ ಮಾಡಿಸದೆಯೇ ಬಿಲ್ ಮಾಡಿ ಹಣ ಪಡೆದುಕೊಂಡ. ಇದು ನಡೆಯುತ್ತಿರುವ ಪರಿಸ್ಥಿತಿ. ಇಂಜಿನಿಯರುಗಳು, ಕಂಟ್ರಾಕ್ಟರುಗಳು ಸೇರಿಕೊಂಡು ಹೋಗಿ ಸುಳ್ಳು ಬಿಲ್ ಮಾಡಿ ಹಣ ಪಡೆದು ಮೋಸ ಮಾಡುತ್ತಿದ್ದಾರೆ. ಇದನ್ನು ಟ್ರೈಟ ಮಾಡಬೇಕು. ಇದನ್ನು ಸರಿಮಾಡಿದರೆ ಕುಡಿಯುವ ನೀರಿನ ಕೆಲಸದ ಬಗ್ಗೆ ಇವರು ಗಮನಹರಿಸುತ್ತಾರೆ. ಸುಳ್ಳು ಬಿಲ್ ರೆಡಿ ಮಾಡಿ ಹಣ ಪಡೆಯುವಂಥ ಕಂಟ್ರಾಕ್ಟರುಗಳು ಮತ್ತು ಇಂಜಿನಿಯರುಗಳನ್ನು ಸರಿ ಮಾಡದೇ ಹೋದರೆ, ಸರ್ಕಾರದಿಂದ ಕುಡಿಯುವ ನೀರಿಗೋಸ್ಕರ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಹ ಪ್ರಯೋಜನವಾಗುವುದಿಲ್ಲ. ಮತ್ತು ಅವರನ್ನು ಟ್ರೈಟ್ ಮಾಡಿ ಗ್ರಾಮಾಂತರ ಪ್ರದೇಶದ ಸಮಸ್ಯೆಯನ್ನು ಬಗೆಹರಿಸಿದ್ದೇ ಆದರೆ ಬಹುಶಃ ದೇವರು ನಿಮ್ಮನ್ನು ಮೆಚ್ಚುತ್ತಾನೆ ಎನ್ನುವ ಮಾತನ್ನು ಹೇಳುತ್ತೇನೆ. ನೀವು ಶುದ್ಧ ಹಸ್ತರು,. ನೀವು ಜನಗಳ ಬಗ್ಗೆ ಅನುಕಂಪ ಇಟ್ಟಿದ್ದೀರಿ, ಕ್ರಾಂತಿ ತರಬೇಕೆಂದು ಹೊರಟಿದ್ದೀರಿ, ಆದರೆ ಈಗಿರತಕ್ಕಂಥ ಕೆಟ್ಟ ವ್ಯವಸ್ಥೆಯಲ್ಲಿ ಭ್ರಷ್ಟ ಇಂಜಿನಿಯರುಗಳ ಕಾರಣದಿಂದ ನಿಮ್ಮ ಯಾವ ಕನಸು ಕೂಡ ನನಸಾಗುವುದಿಲ್ಲ. ಇದನ್ನು ಮೊದಲು ಸರಿಪಡಿಸಬೇಕು ನಂತರ ಕುಡಿಯುವ ನೀರಿಗೆ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಪ್ರತಿ ವರ್ಷ ಕೇಂದ್ರ ಸರ್ಕಾರದಿಂದ ನೇರವಾಗಿ ಮತ್ತು ರಾಜ್ಯ ಸರ್ಕಾರದಿಂದ ನೇರವಾಗಿ ಜಿಲ್ಲಾಪರಿಷತ್ತಿಗೆ ಹಣ ಬರುತ್ತದೆ. ಆ ಹಣ ಯಾವ ರೀತಿ ಖರ್ಚು ಆಗುತ್ತಿದೆ? ಎನ್ನುವ ಬಗ್ಗೆ ಚೆಕ್ ಮಾಡಿದ್ದೀರಾ? ಯಾರನ್ನಾದರೂ ಕೇಳಿದ್ದೀರಾ? ಉದಾಹರಣೆಗೆ ಹೇಳುವುದಾದರೆ ನಾನು ಒಂದು ಹಳ್ಳಿಗೆ ಹೋಗಿದ್ದೆ. ಪಾಪ, ಅಲ್ಲಿ ಒಬ್ಬಳು ಹೆಣ್ಣುಮಗಳು ಅವಳಿಗೆ ಏನೂ ಗೊತ್ತಿಲ್ಲ. 'ಚೆನ್ನಾಗಿದ್ದಿಯೇನಮ್ಮ ಎಂದು ನಾನು ಕೇಳಿದೆ. ಅಯ್ಯೋ, ಏನು ಚೆನ್ನಾಗಿರುವುದು ಸ್ವಾಮಿ, ನಮ್ಮಂಥ ಹೆಂಗಸರಿಗೆ ಯಾರು ದುಡ್ಡು ಕೊಡುತ್ತಾರೆ? ನಿಮ್ಮಂಥವರು ಆದರೆ ಸಾವಿರ ಸಾವಿರ ಗಟ್ಟಲೆ ಹೊಡಕೊಂಡು ಹೋಗುತ್ತೀರಿ. ಕೈತುಂಬಾ ನಿಮಗೆ ದುಡ್ಡು ಕೊಡುತ್ತಾರೆ ನಮಗೆ ಏನೋ 5-10 ರೂಪಾಯಿಗಳನ್ನು ಕೊಡುವುದಕ್ಕೆ ಬರುತ್ತಾರೆ' ಎಂದು ಹೇಳಿದರು. ಈ ಅಧಿಕಾರ ವಿಕೇಂದ್ರಿಕರಣದ ಫಲ ಗ್ರಾಮಾಂತರ ಪ್ರದೇಶದಲ್ಲಿ ಈ ರೀತಿ ಕೊಡುತ್ತಿದೆ. ಇನ್ನೊಬ್ಬ ಹೇಳಿದ-ಸ್ವಾಮಿ, ಎರಡು

ಮಕ್ಕಳಿವೆ, ಒಂದು ಎಮ್ಮೆ ಇತ್ತು ಅದನ್ನು ಮಾರಿದೆ, ಎರಡು ಜೊತೆ ಎತ್ತು ಇವೆ. ಅವಳು ಬೆಳಿಗ್ಗೆ 8 ಗಂಟೆಗೆ ಪೌಡರ್ ಹಾಕಿಕೊಂಡು, ಬ್ಯಾಗ್ ಹಾಕಿಕೊಂಡು ಹೋದರೆ ರಾತ್ರಿ ಬರುತ್ತಾಳೆ ಏನು ಮಾಡಲಿ ಎಂದು ಹೇಳಿದ. ಇವೆಲ್ಲವನ್ನು ನೈತಿಕವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿ ಸೆಟ್‌ರೈಟ್ ಮಾಡಿ ಆಮೇಲೆ ಹೇಳಿ. ನೀವು ತಿಳಿದುಕೊಂಡಿರುವ ಹಾಗೆ ಯಾವ ವಿಧವಾದ ಕ್ರಾಂತಿ ಆಗುತ್ತಿಲ್ಲ. ಹಳ್ಳಿಹಳ್ಳಿಯಲ್ಲಿ, ಮನೆಮನೆಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸುಳ್ಳು ಬಿಲ್ ಕೊಟ್ಟು ಹಣ ಪಡೆಯುವುದಕ್ಕೆ ಪ್ರಾರಂಭವಾಯಿತು. ಜಾತಿಜಾತಿಯ ಮೇಲೆ ವೈರತ್ವ ಬೆಳೆಯಿತು. ಗ್ರಾಮಾಂತರ ಪ್ರದೇಶದಲ್ಲಿ ನೆಮ್ಮದಿ ಎನ್ನುವ ಮಾತೇ ಇಲ್ಲ. ನೀವು ಮಿನಿಸ್ಟರ್ ಎಂದು ಹೇಳಿ ಹಳ್ಳಿಗೆ ಹೋಗಬೇಡಿ, ಹಾಗೆಯೇ ಪೇಟ ಸುತ್ತಿಕೊಂಡು ಹಳ್ಳಿಯವರ ರೀತಿಯಲ್ಲಿ ಹೋಗಿ ಕೇಳಿ ನೋಡಿ, ಅಲ್ಲಿ ಏನಾಗಿದೆ, ಯಾವ ಪರಿಸ್ಥಿತಿಗೆ ತಲುಪಿದ್ದಾರೆ ಎನ್ನುವುದನ್ನು ಹೇಳುತ್ತಾರೆ. ಇದನ್ನೆಲ್ಲಾ ಸರಿಪಡಿಸಿದರೆ ತನ್ನಿಂದ ತಾನೆ ಎಲ್ಲವೂ ಸರಿಹೋಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಿ.ಪಾಪಣ್ಣ(ಹುಣಸೂರು): ಮಾನ್ಯ ಚೇರ್‌ಮನ್‌ರವರೆ, ಹುಣಸೂರಿನ ಪುರಸಭೆಯವರು ಲಕ್ಷ್ಮಣ ತೀರ್ಥ ನದಿಯಿಂದ ಆ ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಲಕ್ಷ್ಮಣತೀರ್ಥ ನದಿಯ ನೀರು ಕುಡಿಯುವುದಕ್ಕೆ ಯೋಗ್ಯವಾಗಿಲ್ಲವೆಂದು ಸರ್ಕಾರದಿಂದ ವರದಿ ಆಗಿದೆ. ಆ ನೀರು ಕುಡಿಯುವುದಕ್ಕೆ ಯೋಗ್ಯವಾಗಿಲ್ಲದ ಕಾರಣ ಆ ಪಟ್ಟಣಕ್ಕೆ ಬದಲಿ ವ್ಯವಸ್ಥೆ ಏನು ಮಾಡುತ್ತಿದ್ದೀರಿ ಎಂದು ಸಂಬಂಧಪಟ್ಟ ಮಾನ್ಯ ಮಂತ್ರಿಯವರನ್ನು ಕೇಳಿದಾಗ, ಕಾವೇರಿ ನೀರನ್ನು ಅಲ್ಲಿಗೆ ತರುವಂಥ ಹಂತದಲ್ಲಿ ಪುರಸಭೆಯವರು ಒಪ್ಪಿಗೆ ಕೊಟ್ಟಿಲ್ಲ ಅದಕ್ಕೋಸ್ಕರ ಬದಲಿ ವ್ಯವಸ್ಥೆಯನ್ನು ಮಾಡಲಿಕ್ಕೆ ಆಗಿಲ್ಲವೆಂದು ಸರ್ಕಾರದಿಂದ ಉತ್ತರವನ್ನು ಕೊಟ್ಟರು. ಹುಣಸೂರು ಪಟ್ಟಣದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಆ ಪಟ್ಟಣಕ್ಕೆ ತಕ್ಷಣದಲ್ಲಿಯೇ ಬೋರ್‌ವೆಲ್‌ಗಳನ್ನು ಹಾಕಿಸಬೇಕು. ಡಿ.ಸಿಯವರನ್ನು ಕೇಳಿದರೆ ಸರ್ಕಾರದಿಂದ ಹಣ ಬರಲಿಲ್ಲ ಎಂದು ಹೇಳುತ್ತಾರೆ. ಮುನ್ಸಿಪಾಲಿಟಿಯವರನ್ನು ಬೋರ್‌ವೆಲ್ ತೆಗೆಸುವುದಕ್ಕೆ ಹಣ ಕೊಡಿ ಎಂದು ಕೇಳಿದರೆ ಸಂಬಳ ಕೊಡುವುದಕ್ಕೆ ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಬೋರ್‌ವೆಲ್ ತೆಗೆಸಿ ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ದಯಮಾಡಿ ಹೇಳಬೇಕು. ಈಗ ನಮ್ಮ ಜಿಲ್ಲೆಯಲ್ಲಿ ಪೈಲೆಟ್ ಪ್ರೋಗ್ರಾಂ ಬಂದಿದೆ. ಆ ಕೆಲಸಕ್ಕೆ ಸುಮಾರು 11 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಕ್ಕೆ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆ ಕೆಲಸ ಆಗಬೇಕಾದರೆ ಸುಮಾರು 6 ತಿಂಗಳು ಆಗುತ್ತದೆ. ಅಲ್ಲಿಯವರೆಗೆ ಬೆಳೆದಂಥ ಊರುಗಳಿಗೆ ಬೋರ್‌ವೆಲ್ ಇಲ್ಲದೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶಕ್ಕೆ ಮತ್ತು

ಪಟ್ಟಣ ಪ್ರದೇಶಕ್ಕೆ ಹೀಗೆ ಎರಡೂ ಕಡೆಗೆ ಬೋರ್‌ವೆಲ್‌ಗಳನ್ನು ಹಾಕಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

+ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಚೇರ್‌ಮನ್‌ರವರೆ, ಶುದ್ಧ ಕುಡಿಯುವ ನೀರನ್ನು ಕೊಡತಕ್ಕಂಥದ್ದು ನಾಗರಿಕ ಸರ್ಕಾರದ ಕರ್ತವ್ಯ. ಅದನ್ನು ಮಾಡುವುದರಲ್ಲಿ ಎಡವಿದೆ ಎಂದು ಈ ನಿಯಮಾವಳಿ ಪ್ರಕಾರ ಚರ್ಚೆಗೆ ಅವಕಾಶ ಕೋರಿದ್ದೇವೆ. ಪ್ರತೀ ವರ್ಷ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸದನ ನಡೆದಾಗ ಈ ಚರ್ಚೆ ಇದ್ದೇ ಇದೆ ಎನ್ನುವುದಕ್ಕೆ ಹಿಂದಿನ ನಡವಳಿಕೆ ದಾಖಲಾತಿಗಳನ್ನು ನೋಡಿದರೆ ಗೊತ್ತಾಗುತ್ತದೆ. ಇದಕ್ಕೆ ಶಾಶ್ವತವಾದಂಥ ಪರಿಹಾರವನ್ನು ಹುಡುಕುವುದರಲ್ಲಿ ನಮ್ಮ ಸರ್ಕಾರಗಳು ವಿಫಲವಾಗಿವೆ. ಮಂತ್ರಿಗಳನ್ನು ಕೇಳಿದರೆ ಹಣಕ್ಕೇನೂ ಕೊರತೆ ಇಲ್ಲ ಎಂದು ಹೇಳಿಕೆ ಕೊಡುತ್ತಾರೆ. ಹಳ್ಳಿಗೆ ಹೋದರೆ ಬೋರ್‌ವೆಲ್ ಹಾಕುವುದಕ್ಕೆ ದುಡ್ಡು ಇಲ್ಲವೆಂದು ಅಲ್ಲಿರತಕ್ಕಂಥ ಇಂಜಿನಿಯರ್, ಜಿಲ್ಲಾಪರಿಷತ್ತಿನ ಕಾರ್ಯದರ್ಶಿಯವರು ಹೇಳುತ್ತಾರೆ. ಹಾಗಾದರೆ ದುಡ್ಡು ಎಲ್ಲಿ ಹೋಗುತ್ತದೆ? ಮಂತ್ರಿಗಳು ಹೇಳುವಂಥ, ಕೊಟ್ಟಿರುವಂಥ ದುಡ್ಡು ಜಿಲ್ಲಾಪರಿಷತ್ತಿಗೆ ಏಕೆ ಹೋಗುವುದಿಲ್ಲ? ಜಿಲ್ಲಾಪರಿಷತ್ತಿನಲ್ಲಿ ಇರುವಂಥ ಹಣ ತಾಲ್ಲೂಕಿಗೆ ಏಕೆ ಹೋಗುವುದಿಲ್ಲ? ಬೋರ್‌ವೆಲ್‌ಗಳನ್ನು ಏಕೆ ಹಾಕಿಸುವುದಿಲ್ಲ ಇದು ನಮಗೆ ಅರ್ಥವಾಗುತ್ತಿಲ್ಲ. ಹಣ ಬಿಡುಗಡೆ ಆಗಿರತಕ್ಕಂಥ ಪಟ್ಟಿಯನ್ನು ಸರ್ಕಾರದವರು ಕೊಟ್ಟಿದ್ದಾರೆ. ಇದರಲ್ಲಿ ತಾರತಮ್ಯ ಆಗಿದೆ. ಯಾವ ಯಾವ ಹಳ್ಳಿಗಳಲ್ಲಿ ನೀರು ಇದೆ, ನಿಜವಾಗಿ ನೀರಿನ ಕೊರತೆ ಎಲೆಲ್ಲಿ ಆಗಿದೆ ಎನ್ನುವ ಪ್ರಾಮಾಣಿಕವಾದ ಸರ್ವೆ ಸರ್ಕಾರದ ಹತ್ತಿರ ಇಲ್ಲ. ಖಂಡಿತವಾಗಿ ಸರ್ಕಾರದಿಂದ ಸರ್ವೆ ಮಾಡಿಸಿಲ್ಲ. ಉದಾಹರಣೆಗೆ: ಮಾನ್ಯ ಮಂತ್ರಿಗಳು ರಾಯಚೂರು ಜಿಲ್ಲೆಯ ನನ್ನ ಕ್ಷೇತ್ರದಲ್ಲಿ ಎಲ್ಲಾ ಚೆನ್ನಾಗಿದೆ ಎಂದು ಹೇಳಿದರು. 488 ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ಇದೆಯೆಂದು ಜಿಲ್ಲೆಯ ಜಿಲ್ಲಾಧಿಕಾರಿಗಳು ವರದಿ ನೀಡಿದ್ದಾರೆ. ಆ ವರದಿಯ ನಕಲು ಪ್ರತಿ ನಮ್ಮ ಹತ್ತಿರ ಇದೆ. 696 ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವವಿದೆಯೆಂದು ರಾಯಚೂರು ಜಿಲ್ಲಾ ಪರಿಷತ್ತು ನಿರ್ಣಯ ಮಾಡಿ ಕಳುಹಿಸಿದೆ. ಆದರೆ ಅಲ್ಲಿಯ ಶಾಸಕರು - ನಮ್ಮಲ್ಲಿ ಏನೂ ತೊಂದರೆ ಇಲ್ಲವೆಂದು ಹೇಳುತ್ತಾರೆ. ಇಲ್ಲಿ ಮಾಧ್ಯಮದ ಮಿತ್ರರು ಇದ್ದಾರೆ. ನಿಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಕೊರತೆ ಇಲ್ಲವೆಂದು ನೇರವಾಗಿ ಹೇಳಿ. ಆ ಮೇಲೆ ನೀವು ಆ ಕ್ಷೇತ್ರಕ್ಕೆ ಹೋಗಿ, ನೋಡೋಣ. ಆಗ ನಿಜಾಂಶ ಗೊತ್ತಾಗುತ್ತದೆ. ಜನ ಎತ್ತಿನ ಗಾಡಿಯ ಮೂಲಕ ನೀರು ಸಾಗಿಸುತ್ತಿದ್ದಾರೆ, ಎಷ್ಟೆಷ್ಟೋ ಆಳದ ಭಾವಿಗಳಿಗೆ ಇಳಿದು ಹತ್ತುತ್ತಿದ್ದಾರೆ ಎಂದು ಪತ್ರಿಕೆಗಳಲ್ಲಿ ಫೋಟೋಗಳನ್ನು ತೆಗೆದುಕಳುಹಿಸುತ್ತಿದ್ದಾರೆ. ಇಷ್ಟೆಲ್ಲಾ ಇದ್ದರೂ ಸಂಬಂಧಪಟ್ಟ ಶಾಸಕರು ಇಲ್ಲಿ ಒಪ್ಪುವುದಿಲ್ಲವೆಂದು ಹೇಳಿದರೆ ಕುಡಿಯುವ ನೀರು ಎಷ್ಟು ಹಳ್ಳಿಗಳಲ್ಲಿ ಇದೆ, ಇದರಲ್ಲಿ ಪ್ರತಿಷ್ಠೆ ಏನಿದೆ? ಎಲ್ಲಿ ಇಲ್ಲ ಎಂದು ಇಲ್ಲಿ ದಯವಿಟ್ಟು ಪ್ರಾಮಾಣಿಕವಾಗಿ ಚರ್ಚೆ ಆಗಬೇಕು. 'ನಮ್ಮಲ್ಲಿ ನೀರಿನ

ಅಭಾವ ತಲೆದೋರಿದೆ, ಕೇಂದ್ರಸರ್ಕಾರದಿಂದ ನಮಗೆ ಹಣ ಕೊಡಿ ಎಂದು' ಬೇರೆ ಬೇರೆ ರಾಜ್ಯಗಳು ಸಾಕಷ್ಟು ಮಾಧ್ಯಮಗಳ ಮೂಲಕ ಬೊಬ್ಬೆ ಹಾಕುತ್ತಿದ್ದಾರೆ. ಇಲ್ಲಿ ಎಲ್ಲಾ ಸುಭಿಕ್ಷೆಯಿಂದ ಇದೆಯೆಂದು ಬಹುಶಃ ನಮ್ಮ ಸರ್ಕಾರ ಆರಾಮವಾಗಿ ಇದೆ. ಏಕೆಂದರೆ ನೀವು ಕೇಂದ್ರ ಸಕಾರ್ರಕ್ಕೆ ಏನಾದರೂ ವರದಿ ಕಳುಹಿಸಿದ್ದೀರಾ ಎನ್ನುವುದಕ್ಕೆ ಯಾವುದೇ ಮಾಹಿತಿ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಚೇರ್‌ಮನ್‌ರವರೆ, 'ಮಾನ್ಯ ಮುಖ್ಯಮಂತ್ರಿಗಳು ಡಿಸೆಂಬರ್ ತಿಂಗಳಿನಲ್ಲಿ ಶ್ರೀ ವಾಜಪೇಯಿ ಅವರಿಗೆ ಬರೆದಂಥ ಪತ್ರ ಮತ್ತು ಇಷ್ಟು ಹಣ ಕೊಡಿ ಎಂದು ಹೇಳಿ ಮನವರಿಕೆ ಮಾಡಿಕೊಟ್ಟಿರುವುದನ್ನು ಈಗ ತಾನೆ ಶ್ರೀ ಸದಾನಂದಗೌಡರು ಓದಿ ಹೇಳಿದರು. ಪುನಃ ಆರಾಮವಾಗಿ ಕುಳಿತಿದ್ದೀರಿ ಎಂದು ಹೇಳಿದರೆ ಏನರ್ಥ? ಇನ್ನೂ ಕೂಡ ಅದಕ್ಕೆ ಸರಿಯಾಗಿ ಹಣ ಬರಲಿಲ್ಲ. ದಯವಿಟ್ಟು ತಾವು ಇನ್‌ಫ್ಲೂಯೆನ್ಸ್ ಯೂಸ್ ಮಾಡಿ ನಾವು ಏನು 400 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ ಅದರಲ್ಲಿ ಅರ್ಧದಷ್ಟನ್ನಾದರೂ ಕೊಡಿಸತಕ್ಕಂಥ ಪ್ರಯತ್ನವನ್ನು ಮಾಡಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಚೇರ್‌ಮನ್‌ರವರೆ, ಹಣಕ್ಕೆ ಏನೂ ಕೊರತೆ ಇಲ್ಲವೆಂದು ಮಾನ್ಯ ಗ್ರಾಮಿಣ ಅಭಿವೃದ್ಧಿ ಸಚಿವರು ಹೇಳಿದರು. ಪುನಃ ಏಕೆ ಕೇಂದ್ರಕ್ಕೆ ಕೇಳುವುದಕ್ಕೆ ಹೋಗುತ್ತೀರಿ? ರಾಜ್ಯಸರ್ಕಾರದಿಂದಲೇ ಹಣವನ್ನು ಕೊಡಿ. ನಿಜವಾಗಿ ರಾಜ್ಯ ಸರ್ಕಾರದಲ್ಲಿ ಹಣ ಇಲ್ಲವೆಂದಾದರೆ ಸರಿಯಾಗಿ ಸರ್ವೆ ಮಾಡಿ, ಪಟ್ಟಿ ಮಾಡಿ, ಹಿಂದಿನ ಸಲ ನೆರೆಹಾವಳಿಯಿಂದ ತೊಂದರೆಯಾದಾಗ ಪಟ್ಟಿ ಮಾಡಿ ಯಾವ ರೀತಿ ಸಬ್‌ಮಿಟ್ ಮಾಡಿದೆವು ಅದೇ ರೀತಿಯಾಗಿರತಕ್ಕಂಥ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಒತ್ತಡ ಹಾಕಿ, ರಾಜ್ಯದಿಂದ ನಿಯೋಗವನ್ನು ಕರೆದುಕೊಂಡು ಹೋಗಿ, ಬೇರೆ ಬೇರೆ ರಾಜ್ಯಗಳವರು ಸಾಕಷ್ಟು ಪರಿಹಾರ ಹಣವನ್ನು ಕೇಂದ್ರದಿಂದ ಪಡೆಯುವಾಗ ನಮ್ಮ ರಾಜ್ಯದವರು ಏಕೆ ಸುಮ್ಮನಿರಬೇಕು? ನಮ್ಮ ಹಳ್ಳಿಗಳ ಜನರು ಸುಖವಾಗಿ ಇದ್ದಾರೇನು? ನಮ್ಮ ಮಲೆನಾಡು ಹಳ್ಳಿಗಳಲ್ಲಿ ವಾಟರ್ ಟೇಬಲ್ ಅತ್ಯಂತ ಕೆಳಗಡೆ ಹೋಗಿದೆ. ನಮ್ಮಲ್ಲಿ 250 ರಿಂದ 300 ಅಡಿ ಆಳಕ್ಕೆ ಹೋದರೂ ಬೋರ್‌ವೆಲ್ ಸಕ್ಸಸ್ ಆಗುತ್ತಿಲ್ಲ. ಆ ಸಾಯಿಲ್ ಸಿಸ್ಟಮ್ ಹಾಗೆ ಇದೆ. ಒಂದೆರಡು ವರ್ಷಗಳ ಹಿಂದೆ 50-60 ಅಡಿ ಆಳಕ್ಕೆ ಹೋಗಿರತಕ್ಕಂಥ ಬಾವಿಗಳಲ್ಲಿ 10-15 ಅಡಿ ನೀರು ಇರುತ್ತಿತ್ತು. ಈಗ ಅಲ್ಲಿ ನೀರಿಲ್ಲದೆ ಎಲ್ಲಾ ಆರಿ ಹೋಗಿದೆ. ಇಂಥ ಅಂತರ್‌ಜಲ ಮಟ್ಟವನ್ನು ಹೆಚ್ಚಿಸುವುದಕ್ಕೋಸ್ಕರ ಶಾಶ್ವತವಾದಂಥ ಯೋಜನೆಗಳನ್ನು ಹಳ್ಳಿಹಳ್ಳಿಯಲ್ಲಿ ಗ್ರಾಮ ಮತ್ತು ತಾಲ್ಲೂಕು ಪಂಚಾಯತಿ ಮೂಲಕ ಹಾಕಿಕೊಳ್ಳಲಿಕ್ಕೆ ಒಂದಷ್ಟು ಹಣವನ್ನು ನಿಗದಿ ಮಾಡಬೇಕು. ಬೋರ್‌ವೆಲ್‌ಗಳು ಕೆಟ್ಟುಹೋದರೆ ಅದರ ದುರಸ್ತಿ ಮಾಡುವ ಬಗ್ಗೆ ನಾವು, ಶ್ರೀ ಕಾಗೋಡು ತಿಮ್ಮಪ್ಪ ಮುಂತಾದವರು ಮಾತನಾಡಿದೆವು. ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಗಮನಿಸಬೇಕು. ಇಡೀ ರಾಜ್ಯದಲ್ಲಿ ಯಾವುದಾದರೂ

ಪಂಚಾಯತಿಗಳೇ ಬೋರ್‌ವೆಲ್‌ಗಳನ್ನು ರಿಪೇರಿ ಮಾಡತಕ್ಕಂಥ ತಾಲ್ಲೂಕು ಇದ್ದರೆ ಅದು ತೀರ್ಥಹಳ್ಳಿ. ಕಳೆದ ವರ್ಷದಿಂದ ನಮಗೆ ಇನ್‌ಸೆಂಟೀವ್ ಕೊಡಿ ಎಂದು ಕೇಳಿದೆ. ತಾಲ್ಲೂಕು ಮಟ್ಟದ ಒಬ್ಬ ಇಂಜಿನಿಯರ್, ಒಂದು ವ್ಯಾನ್, ಒಬ್ಬ ಮೆಕ್ಯಾನಿಕ್, ಯಾವುದೋ 30-40 ಕಿ.ಮೀ. ಮೂಲೆಯಲ್ಲಿ ಇರತಕ್ಕಂಥ ಹಳ್ಳಿಗೆ ಹೋಗಿ ಬೋರ್‌ವೆಲ್ ರಿಪೇರಿ ಮಾಡುವುದು, ಆ ಹಳ್ಳಿಯಲ್ಲಿ ಕೆಟ್ಟಂಥ ಬೋರ್‌ವೆಲ್ ಕೆಟ್ಟುಹೋಗಿದೆ ಎಂದು ಹೇಳುವುದಕ್ಕೆ ಬರಲು 20 ರೂಪಾಯಿ ಬಸ್‌ಚಾರ್ಜು, ಆಳು ಸಂಬಳ, ಇವೆಲ್ಲ ಸೇರಿದರೆ ಎಷ್ಟು ಆಗುತ್ತದೆ? ತಾವೇ ಹೇಳಿ. ಅಧಿಕಾರದ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಜವಾಬ್ದಾರಿಯನ್ನು ಕೂಡ ಅವರಿಗೆ ಕೊಡಬೇಕು. ಬೋರ್‌ವೆಲ್ ಕೆಟ್ಟಿದೆ ಎಂದು ಶಾಸಕರ ಹತ್ತಿರ, ಮಂತ್ರಿಗಳ ಹತ್ತಿರ ಅರ್ಜಿಯನ್ನು ತಂದುಕೊಡುವುದಾದರೆ ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆಗೆ ಏನು ಬೆಲೆ ಬರುತ್ತದೆ? ಎಂದು ನಾನು ಕೇಳುತ್ತೇನೆ. ಪಂಚಾಯಿತಿಗಳಿಗೆ ನೇರವಾಗಿ ಹೊಣೆ ಹೊರಿಸಬೇಕು. ಟ್ರೈಬಲ್ ಸ್ಕೀಂನಲ್ಲಿ ಬೋರ್‌ವೆಲ್ ಮೆಕ್ಯಾನಿಕ್‌ಗಳನ್ನು ತಯಾರು ಮಾಡಬೇಕು. ಅವರಿಗೆ ಟೂಲ್ಸ್ ಕಿಟ್‌ಗಳನ್ನು ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಆ ಪ್ರಯೋಗವನ್ನು ಮಾಡಿದೆವು. ನಮ್ಮಲ್ಲಿ 2 ಪಂಚಾಯತಿಗಳಿದ್ದು ಒಂದೊಂದು ಪಂಚಾಯತಿಗೆ ಒಬ್ಬೊಬ್ಬ ಮೆಕ್ಯಾನಿಕ್ ಹಳ್ಳಿಯಲ್ಲಿ ಇದ್ದಾನೆ. ಅವನು ಜಮೀನು ಬೇಸಾಯ ಮಾಡಿಕೊಂಡು ಈ ಮೆಕ್ಯಾನಿಕ್ ಕೆಲಸವನ್ನು ಪಾರ್ಟ್‌ಟೈಮ್ ಕೆಲಸವಾಗಿ ಮಾಡಿಕೊಂಡು ತಿಂಗಳಿಗೆ 500 ರಿಂದ 600 ರೂಪಾಯಿವರೆಗೆ ದುಡಿಮೆಯನ್ನು ಮಾಡುತ್ತಿದ್ದಾನೆ. ಈ ರೀತಿಯಲ್ಲಿ ಒಂದು ವ್ಯವಸ್ಥಿತವಾದಂಥ ಪ್ರಯತ್ನವನ್ನು ನಾವು ಮಾಡಿದಾಗ ಮಾತ್ರ ಬೋರ್‌ವೆಲ್‌ಗಳ ದುರಸ್ತಿ ಕಾರ್ಯ ಸಹ ಆಗುತ್ತದೆ. ಇವತ್ತು ಮಿನಿವಾಟರ್ ಸಪ್ಲೈ ಸ್ಕೀಂನಲ್ಲಿ ಕಳಪೆ ದರ್ಜೆಯ ಮೋಟರುಗಳನ್ನು ಹಾಕಿದ್ದಾರೆ. ಅವುಗಳನ್ನು ಆನ್ ಮಾಡುವುದರೊಳಗೆ ಸುಟ್ಟುಹೋಗುತ್ತವೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ಸಹ ಸಾಧ್ಯವಾಗುವುದಿಲ್ಲ.

6-30 ಪಿ.ಎಂ

ಇದರ ಮೇಲೆ ಸರಿಯಾದ ಬಿಗಿ ನಿಯಂತ್ರಣ ಹಾಕಿ ಆ ಪಂಪ್‌ಗಳನ್ನು ಯಾವಾಗ ಖರೀದಿ ಮಾಡಿದ್ದಾರೆ? ಎಷ್ಟು ದಿವಸಕ್ಕೆ ಖರೀದಿ ಮಾಡಿದ್ದಾರೆ? ಗ್ಯಾರಂಟಿ ಎಷ್ಟು ದಿವಸ? ಇದನ್ನು ಚೆಕ್ ಮಾಡಿ ಒಬ್ಬಿಬ್ಬರು ಅಧಿಕಾರಿಗಳನ್ನು ತೆಗೆದು ಹಾಕಿದರೆ ಮಾತ್ರ ಇದು ಸರಿಹೋಗುತ್ತದೆ. ಇಲ್ಲದಿದ್ದರೆ ಪ್ರಾಮಾಣಿಕತೆ ಎಂಬುದೇ ಇರುವುದಿಲ್ಲ. ಈಗಾಗಲೇ ಹಾಸನದವರು ಹೇಳಿದ ಹಾಗೆ ಅದೇ ಪರಿಸ್ಥಿತಿ ನಿರ್ಮಾಣವಾಗುತ್ತದೆಯೇ ಹೊರತು ಬೇರೆ ಏನೂ ಆಗುವುದಿಲ್ಲ. 1992ರಿಂದ ವಿಶ್ವ ಬ್ಯಾಂಕಿನಿಂದ ಸಾಲ ತಂದು ಆರಂಭಿಸಿರುವ ಸ್ಕೀಮ್ ಇವತ್ತಿಗೂ ಮುಗಿದಿಲ್ಲವೆಂದರೆ ನಾವು ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತದೆ. ಇದಕ್ಕೆ ನೀವು ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತೀರಿ? ಹಿಂದೆ ಇವರ ಸರ್ಕಾರ ಇದ್ದಾಗ ಆಂಧ್ರದಿಂದ ಕಂಟ್ರಾಕ್ಟರ್‌ನ್ನು ತಂದು ಅವರಿಗೆ ಈ ಕೆಲಸ ಕೊಟ್ಟರು, ಅವರು ಕೆಲಸ ಮಾಡಲಿಲ್ಲವಾದ್ದರಿಂದ ಕೋರ್ಟಿಗೆ ಹೋದರು.

ತುಂಗಾನದಿಯ ದಡದಲ್ಲಿದ್ದೇವೆ ಒಂದು ಜಾಕ್‌ವೆಲ್ ಹಾಕಿ ಎಂದು ಹೇಳಿದರೆ ಇದಕ್ಕೆ ನಾರ್ಮ್ಸ್‌ನಲ್ಲಿ ಬರುವುದಿಲ್ಲವೆಂದು ಜಿಲ್ಲಾ ಪಂಚಾಯಿತಿಯವರು ಹೇಳುತ್ತಾರೆ. ಜಾಕ್‌ವೆಲ್ ಹಾಕುವುದಕ್ಕೆ ಬರುವುದಿಲ್ಲ ಬೇಕಾದರೆ ಬೋರ್‌ವೆಲ್ ಹಾಕಬಹುದು ಎಂದು ಹೇಳುತ್ತಾನೆ, ನಮ್ಮಲ್ಲಿ ಅಷ್ಟಾಗಿ ಬೋರ್‌ವಲ್‌ಗಳು ಯಶಸ್ವಿಯಾಗುವುದಿಲ್ಲ. ಈ ರೀತಿ ಜಿಜ್ಞಾಸೆಯಲ್ಲಿ ಒಂದೊಂದು ಸಣ್ಣ ಸಣ್ಣ ಮಿನಿವಾಟರ್ ಸಪ್ಲೈನ 25 ಲಕ್ಷ-30 ಲಕ್ಷದ ಅಂದಾಜು ವೆಚ್ಚದ ಯೋಜನೆಗಳು 8-10 ವರ್ಷ ಸಮಯ ತೆಗೆದುಕೊಳ್ಳುವುದಾದರೆ, ನೀವು ದೊಡ್ಡ ದೊಡ್ಡ ಯೋಜನೆಗಳನ್ನು ಹೇಗೆ ಕಾರ್ಯಗತ ಮಾಡುತ್ತೀರಿ? ಆದ್ದರಿಂದ, ದಯಮಾಡಿ ಈ ಬಗ್ಗೆ ವಿಶೇಷವಾದ ಆದ್ಯತೆಯನ್ನು ತಾವು ನೀಡಬೇಕು. ಕೇಂದ್ರಕ್ಕೆ ತಾವು ಯಾವ ರೀತಿಯಲ್ಲಿ ಎಷ್ಟು ಹಣ ಕೇಳಿದ್ದೀರಿ? ಈಗಾಗಲೇ ಬಿಡುಗಡೆ ಮಾಡಿರುವ ಹಣ ಎಷ್ಟು? ಎಂಬುದನ್ನು ತಿಳಿಸಬೇಕು. ಜಿಲ್ಲೆಯಲ್ಲಿ ಒಬ್ಬ ಮಂತ್ರಿ ಇದ್ದರೆ ಆ ಜಿಲ್ಲೆಗೆ ಒಂದು ಕೋಟಿ ರೂಪಾಯಿ, ನಮ್ಮ ಜಿಲ್ಲೆಯಲ್ಲಿ ಯಾರು ಇಲ್ಲದೇ ಇರುವುದರಿಂದ ನಮಗೆ ಏನೂ ಇಲ್ಲ. ಏಕೆಂದರೆ, ಮಾನ್ಯ ತಿಮ್ಮಪ್ಪನವರು ಬಹಳ ಸಭ್ಯಸ್ಥರು ಇರುವುದರಿಂದ ಅವರೇನು ಕೇಳುವುದಿಲ್ಲ. ಈ ರೀತಿ ತಾರತಮ್ಯಗಳಾಗುವುದಾದರೆ ಇದಕ್ಕೆ ಅರ್ಥವೇ ಇಲ್ಲ. ಆದ್ದರಿಂದ ಎಲ್ಲಾ ಕಡೆ ಸರಿಯಾದ ರೀತಿಯಲ್ಲಿ ಸರ್ವೆ ಮಾಡಬೇಕು, ಎಲ್ಲೆಲ್ಲಿ ಅತ್ಯಂತ ಹೆಚ್ಚು ತೊಂದರೆ ಇದೆ ಅಲ್ಲಿಗೆ ಸರಿಯಾಗಿ ಹಣ ಹೋಗಬೇಕು. ತುರ್ತಾಗಿ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಅಂದರೆ ಅವರಿಗೆ ಎಷ್ಟು ರಿಗ್‌ಗಳು ಬೇಕು, ಏನು ಬೇಕು, ಎಂಬುದರ ಕಡೆ ಗಮನ ಕೊಡಬೇಕು. ಈ ಬಗ್ಗೆ ಆನಂದರಾವ್ ಸರ್ಕಲ್‌ನಲ್ಲಿರುವ ಪಿ.ಹೆಚ್.ಇ. ಆಫೀಸ್‌ನಲ್ಲಿರುವವರನ್ನು ಎಚ್ಚರಿಸಬೇಕು. 'ಏಕೆಂದರೆ ಅವರು ಆರಾಮವಾಗಿ ಕುಳಿತಿರುತ್ತಾರೆ. ಈ ರೀತಿ ನೀವು ಅವರನ್ನು ಚುರುಕು ಮಾಡದೇ ಹೋದರೆ ಸಾರ್ವಜನಿಕರಿಗೆ ನೀರು ಕೊಡುವುದಕ್ಕಾಗುವುದಿಲ್ಲ. ಜನರಿಂದ ನಿಮ್ಮ ಸರ್ಕಾರಕ್ಕೆ ಇದೇ ಒಂದು ದೊಡ್ಡ ಶಾಪವಾಗಿ ಪರಿಣಮಿಸುತ್ತದೆ. ಆದ್ದರಿಂದ, ತಾವು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.'

ಶ್ರೀ ಬಿ.ಎನ್.ಬಚ್ಚೇಗೌಡ (ಹೊಸಕೋಟೆ): ಮಾನ್ಯ ಛೇರ್ಮನ್‌ರವರೆ, ಕುಡಿಯುವ ನೀರಿನ ಭೀಕರ ಪರಿಸ್ಥಿತಿಯನ್ನು ಮಾನ್ಯ ಅನೇಕ ಸದಸ್ಯರು ಈಗಾಗಲೇ ಇಲ್ಲಿ ಪ್ರಸ್ತಾಪಿಸಿದ್ದಾರೆ. ನಾವು ವಿಶೇಷವಾಗಿ ಬಯಲು ಪ್ರದೇಶದಿಂದ ಬಂದಿರತಕ್ಕಂಥವರು ಕೋಲಾರ, ಬೆಂಗಳೂರು (ಗ್ರಾಮಾಂತರ) ತುಮಕೂರು, ಬಳ್ಳಾರಿ, ಚಿತ್ರದುರ್ಗ, ಮಂಡ್ಯ ಹಾಗೂ ಮೈಸೂರಿನ ಅನೇಕ ಭಾಗಗಳು ಹಾಗೂ ಉತ್ತರ ಕರ್ನಾಟಕದ ಗುಲ್ಬರ್ಗಾ, ರಾಯಚೂರು, ಬೀದರ್ ಅನೇಕ ಭಾಗಗಳು ನೀರಿನ ಅಭಾವ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಇತ್ತೀಚೆಗೆ ಕೋಲಾರದಲ್ಲಿ ನಾವು ತೆಗೆದುಕೊಂಡಿರುವ ಸರ್ವೆ ಪ್ರಕಾರ ಸುಮಾರು 500 ಅಡಿಗಳಿಂದ ನೀರನ್ನು ಎತ್ತತಕ್ಕಂಥ ಪರಿಸ್ಥಿತಿ ಇದೆ. ಅದರಲ್ಲಿ ಇತ್ತೀಚೆಗೆ ಹಾಕಿರುವ ಸುಮಾರು 10 ಬೋರ್‌ವೆಲ್‌ಗಳಲ್ಲಿ ಮೂರುನಾಲ್ಕು

ಬೋರ್‌ವೆಲ್‌ಗಳು ಡ್ರೈ ಆಗುತ್ತಿವೆ. ಮಾನ್ಯ ಮುನಿಯಪ್ಪನವರು ಇಲ್ಲಿಯೇ ಇದ್ದಾರೆ. ಬಹುಶಃ ಅವರಿಗೆ ಕೋಲಾರ ಜಿಲ್ಲೆಯಲ್ಲಿರುವ ಪರಿಸ್ಥಿತಿ ಗೊತ್ತಿದೆ. ಮಾನ್ಯ ಸಚಿವರು ಕೂಡ ಈ ಬಗ್ಗೆ ಬೆಳಕು ಚೆಲ್ಲಬೇಕಾಗುತ್ತದೆ. ನಾವು ಮೊನ್ನೆ ರಿವ್ಯೂ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹಾಗೂ ಮಾನ್ಯ ಶಿವಕುಮಾರ್‌ರವರು ಕೂಡ ಇದ್ದರು. ನಮ್ಮ ಜಿಲ್ಲೆಯಲ್ಲಿ 50-60 ಬೋರ್‌ವೆಲ್‌ಗಳು ತುರ್ತಾಗಿ ಈಗ ಹಾಕಬೇಕಾಗಿದೆ. ಇವತ್ತು ಈ ರಾಜ್ಯದಲ್ಲಿ ಸುಮಾರು 27 ಸಾವಿರ ಕಂದಾಯ ಗ್ರಾಮಗಳು, 28 ಸಾವಿರ ತಾಂಡಗಳು, ಜನತಾ ಕಾಲೋನಿಗಳು ಇವೆ. ಸುಮಾರು 50-60 ಸಾವಿರ ಗ್ರಾಮಗಳಲ್ಲಿ ಹ್ಯಾಂಡ್ ಪಂಪ್ ಬೋರ್, ಮಿನಿ ವಾಟರ್ ಸ್ಕೀಮ್, ಓವರ್ ಹೆಡ್ ಸ್ಕೀಮ್, ಈ ಮೂರು ಸ್ಕೀಮ್‌ಗಳಲ್ಲಿ ಸೇರಿ ನಾವು ಹಾಕಿರುವ ಬೋರ್‌ವೆಲ್ ಸಂಖ್ಯೆ ಸುಮಾರು ಎರಡು ಲಕ್ಷ ಇದ್ದು ಇವುಗಳು ಈಗ ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ ಸುಮಾರು 25 ಪರ್ಸೆಂಟ್ ಡ್ರೈ ಆಗಿ ಹೋಗಿದೆ. ಯಾವುದೋ ಕಾಲದಲ್ಲಿ 200:300 ಅಡಿಗೆ ಹಾಕಿರುವಂಥ ಬೋರ್‌ವೆಲ್‌ಗಳು ಇವತ್ತು ಡ್ರೈ ಆಗಿವೆ. ತಮಗೆ ಗೊತ್ತಿರುವಂತೆ ಪ್ರತಿ ವರ್ಷ 10 ರಿಂದ 20 ಪರ್ಸೆಂಟ್ ಡ್ರೈ ಜೋನ್‌ಗಿಂತ ಕೆಳಗೆ ಹೋಗುತ್ತದೆ. ಹೀಗಾಗಿ ಆ ಪ್ರದೇಶ ಡ್ರೈ ಆಗುತ್ತಿದೆ. ಪುನ: ಮಳೆಗಾಲ ಬಂದಾಗ ಇವುಗಳು ಪುನಃ ರಿಚಾರ್ಜ್ ಆಗಿ ಸ್ವಲ್ಪ ದಿವಸ ನೀರು ಸಿಗುತ್ತದೆ. ನೀರು ಮಾತ್ರ ಯಥೇಚ್ಛ ಸಿಕ್ಕುವುದಿಲ್ಲ. ನಾನು ಕೂಡ ಹಿಂದೆ ನಗರಾಭಿವೃದ್ಧಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಸುಮಾರು ಒಂದು ಕೋಟಿ ಹತ್ತು ಲಕ್ಷ ಜನ ಪಟ್ಟಣಗಳಲ್ಲಿ ವಾಸ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ 210 ಪಟ್ಟಣಗಳಿವೆ, ಮಾನ್ಯ ಕಂದಾಯ ಸಚಿವರು ಇಲ್ಲಿಯೇ ಇದ್ದಾರೆ. ಈ ಸಾರಿ ಯಾವ ಪಟ್ಟಣಗಳಿಗೂ ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ಈ ಬಗ್ಗೆ ಬೆಳಿಗ್ಗೆ ನಾನು ಮಾನ್ಯ ನಗರಾಭಿವೃದ್ಧಿ ಸಚಿವರ ಹತ್ತಿರ ಈ ವಿಷಯ ಪ್ರಸ್ತಾಪಿಸಿದೆ. ಈ ಬಗ್ಗೆ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ, ಎರಡು, ಮೂರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ನಮಗೆ ಸುಮಾರು 5-10 ಬೋರ್‌ವೆಲ್‌ಗಳನ್ನಾದರೂ ಅಲ್ಲಲ್ಲಿ ಹ್ಯಾಂಡ್ ಪಂಪ್‌ನ್ನು ಹಾಕಿಕೊಡಿ, ಏಕೆಂದರೆ, ಪವರ್ ಹೋಗುತ್ತಿರುವ ವಿಚಾರದ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಇಲ್ಲಿ ಮಾತನಾಡಿದರು. ಪವರ್ ಇಲ್ಲದೇ ಇರುವಾಗ ಹ್ಯಾಂಡ್ ಪಂಪ್‌ನ್ನು ಯೂಸ್ ಮಾಡಿಕೊಂಡು ಸ್ವಲ್ಪ ನೀರನ್ನು ನಾವು ತೆಗೆದುಕೊಳ್ಳಬಹುದೆಂದು ನಾನು ಹೇಳಿದರೆ ಅದಕ್ಕೆ ಅವರು ನೀವು ಮಂತ್ರಿಗಳಾಗಿದ್ದಾಗ ಯಾವುದಕ್ಕಾದರೂ ಕೊಟ್ಟಿದ್ದೀರಾ ಎಂದು ಕೇಳಿದರು. ನಾನು ಸಚಿವನಾಗಿದ್ದಾಗ ಮಾನ್ಯ ದೇವೇಗೌಡರವರು ಇದ್ದಾಗ ಸುಮಾರು 2-3 ಕೋಟಿ ರೂಪಾಯಿಗಳನ್ನು ಮಂಜೂರ್ಮಾಡಿ ವಿಶೇಷವಾಗಿ ಪಟ್ಟಣಗಳಿಗೆ 5-10 ಬೋರ್‌ವೆಲ್ ಹಾಕಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೆವು. ಇದೇ ವಿಚಾರವಾಗಿ ಮಾನ್ಯ ಭೈರೇಗೌಡರವರು ಕೋಲಾರದ ಬಗ್ಗೆ ಮಾತನಾಡುತ್ತೇನೆಂದು ಹೇಳಿದರು. ಕೋಲಾರದಲ್ಲಿ ಒಂದೂವರೆ ಲಕ್ಷ ಜನರು ಇದ್ದಾರೆ, ಅಲ್ಲಿ ಇರುವಂಥ ಎಲ್ಲಾ ಕೆರೆಗಳು ಬತ್ತಿ ಹೋಗಿವೆ. ಈ ವಿಷಯ ಮಾನ್ಯ ಉಸ್ತುವಾರಿ ಸಚಿವರಾದ ಶ್ರೀ

ಮುನಿಯಪ್ಪನವರಿಗೆ ಗೊತ್ತಿದೆ. ಕೋಲಾರದಲ್ಲಿ ವಾರಕ್ಕೊಮ್ಮೆ ನೀರು ಕೊಡುತ್ತಿದ್ದಾರೆ. ಅನೇಕ ಪಟ್ಟಣಗಳಲ್ಲಿ 10 ದಿವಸಕ್ಕೊಂದರಂತೆ ನೀರು ಕೊಡುತ್ತಿದ್ದಾರೆ. ಇದು ಇವತ್ತು ನಿಜವಾಗಲೂ ಇರತಕ್ಕಂಥ ಪರಿಸ್ಥಿತಿ. ಇದನ್ನು ನಾವು ಏನು ಅತಿಶಯವಾಗಿ ಹೇಳುತ್ತಿಲ್ಲ. ಇರುವ ಪರಿಸ್ಥಿತಿಯನ್ನೇ ಹೇಳುತ್ತಿದ್ದೇವೆ. ಏಕೆಂದರೆ, ಮೇ-ಜೂನ್‌ವರೆಗೆ ಮಳೆ ಬಾರದೇ ಇರುವುದರಿಂದ ಅನೇಕ ಬೋರ್‌ವೆಲ್‌ಗಳು ಡ್ರೈ ಆಗುತ್ತವೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಇವತ್ತು ಸದನದಲ್ಲಿ ಇದ್ದಾರೆ. ಈ ಬಗ್ಗೆ ಆ ಕಡೆ ಇರುವ ಸದಸ್ಯರು ಹಾಗೂ ಈ ಕಡೆ ಇರುವ ಸದಸ್ಯರನೇಕರ ಒತ್ತಾಸೆ ಇದೇ ಆಗಿದೆ. ಬಹುಶಃ ಆ ಭಾಗದಲ್ಲಿರುವ ಸದಸ್ಯರು ಮಾತನಾಡದಿರಬಹುದು, ಈ ಕಡೆ ಇರುವ ಸದಸ್ಯರು ಮಾತ್ರ ಮಾತನಾಡುತ್ತಾರೆಂದು ಭಾವಿಸಬಾರದು. ಒಟ್ಟಾರೆ ಸದನವನ್ನು ತಾವು ಪರಿಗಣಿಸಬೇಕಾಗುತ್ತದೆ. ಇವತ್ತು ನಾವು ತೆಗೆದುಕೊಳ್ಳುವ ಸರ್ಫೇಸ್ ವಾಟರ್ 32 ರಿಂದ 40 ಪರ್ಸೆಂಟ್ ಇದೆ. ಇವತ್ತು ಇದು ಕೂಡ ಸಿಗುತ್ತಿಲ್ಲ. ಉಪಗ್ರಹದಿಂದ ನೀರಿನ ಸಂಪನ್ಮೂಲ ಗುರುತಿಸಿ ಬೋರ್‌ವೆಲ್ಸ್ ಹಾಕಿದ್ದರೂ ಇವು ಕೂಡ ಇವತ್ತು ವಿಫಲವಾಗಿವೆ ಎಂದು ಶ್ರೀಮತಿ ಭಾಗೀರತಿ ಮರುಳಸಿದ್ಧನಗೌಡರವರು ಹೇಳಿದ್ದರು. ಕಳೆದ ವರ್ಷ ನಾವು ಅವುಗಳನ್ನು ಚಾರ್ಜ ಮಾಡಲು ಕೇಳಿದಾಗ ಅವರು ನಾವು ತುಂಗಾಭದ್ರ ನದಿಯಿಂದ ಹಿನ್ನೀರನ್ನು ತರಬೇಕು, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಮೂರು ಕೋಟಿ ರೂಪಾಯಿ ಯೋಜನೆ ಮಾಡಿಸಿಕೊಂಡು ಕೂಡ್ಲಿಗಿ, ಕೊಟ್ಟೂರು, ಹರಪನಳ್ಳಿಗೆ ನೀರನ್ನು ಒದಗಿಸಬೇಕಾಗಿದೆ ಎಂದು ಅವರು ಹೇಳಿದರು. ಇವತ್ತು ಎಲ್ಲಾ ಕಡೆ ಇದೇ ಪರಿಸ್ಥಿತಿ ಇರುವುದರಿಂದ, ದಯಮಾಡಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮಳೆಗಾಲದಲ್ಲಿ ಈ ಕಾರ್ಯಕ್ರಮ ತೆಗೆದುಕೊಳ್ಳುವುದು ಬೇಡ, ಈ ಹಂತದಲ್ಲಿ ಅಂದರೆ ಇನ್ನು 40 ದಿವಸಗಳಲ್ಲಿ, ಮಾನ್ಯ ಹನುಮೇಗೌಡರವರು ತಿಳಿಸಿದ ರೀತಿಯಲ್ಲಿ ಒಂದು ಸಮಸ್ತ ಕಾರ್ಯಕ್ರಮವನ್ನು ಹಾಕಿಕೊಂಡು, ಬೋರ್‌ವೆಲ್‌ಗಳನ್ನು ಆಳಕ್ಕೆ ಕೊರೆಯುವುದು, ಕ್ಲೀನ್ ಮಾಡುವುದು, ಪಂಪ್ಸ್‌ನ್ನು ಅಳವಡಿಸುವುದು, ಇಂಥ ಕಾರ್ಯಕ್ರಮಗಳನ್ನು ತಾವು ಯುದ್ಧೋಪಾದಿಯಲ್ಲಿ ತೆಗೆದುಕೊಳ್ಳಬೇಕು. ಮಾನ್ಯ ನಗರಾಭಿವೃದ್ಧಿ ಸಚಿವರಾದ ಮಾನ್ಯ ಚಿಮ್ಮನಕಟ್ಟಿಯವರು ಈ ಬಗ್ಗೆ ಗಮನಹರಿಸಬೇಕು. ಸಭಾ ನಾಯಕರಾಗಿರುವ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಯೆಸ್ ಎಂದು ಹೇಳಿದರೆ ಗ್ರಾಮೀಣಾಭಿವೃದ್ಧಿ ಸಚಿವರು ಕೂಡ ಯೆಸ್ ಎಂದು ಹೇಳುತ್ತಾರೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು): ಅಧ್ಯಕ್ಷರೆ, ತಾವು ಬಹಳ ಚೆನ್ನಾಗಿ ಮಾತನಾಡಿದಿರಿ, ಕೋಲಾರ ಜಿಲ್ಲೆಗೆ ಅತಿ ಹೆಚ್ಚು ಹಣವನ್ನು ನೀಡಿದ್ದೇವೆ, ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ನೀಡಿದ್ದೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಹಣವನ್ನು ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಈ ಸಾರಿ ನೀರಾವರಿ, ವಿದ್ಯುತ್, ಗ್ರಾಮೀಣಾಭಿವೃದ್ಧಿ, ಇಂಥವುಗಳಿಗೆ ಹೆಚ್ಚು ಹಣವನ್ನು

ಬಜೆಟ್‌ನಲ್ಲಿ ತೋರಿಸಿದ್ದಾರೆ. ಆದ್ದರಿಂದ, ಈ ಕ್ಷಾಮದ ಪರಿಸ್ಥಿತಿ ನೋಡಿ ಕುಡಿಯುವ ನೀರಿಗೆ ಹೆಚ್ಚು ಹಣ ಕೊಡುವುದಕ್ಕೆ ಮುಂದಾಗಬೇಕು. ಗ್ರಾಮಾಂತರ ಪ್ರದೇಶದಲ್ಲಿ ಅತಿ ತುರ್ತಾಗಿ ಸುಮಾರು 15 ಸಾವಿರ ಬೋರ್‌ವೆಲ್‌ಗಳನ್ನು ನಮ್ಮ 175 ತಾಲ್ಲೂಕುಗಳಲ್ಲಿ ಹಾಕಬೇಕಾಗಿದೆ. ಆದ್ದರಿಂದ, ವಿಶೇಷವಾದ ಕಾರ್ಯಕ್ರಮ ಹಾಕಿಕೊಂಡು, ಹಣವನ್ನು ಕೊಟ್ಟು ಭೀಕರವಾದ ಕುಡಿಯುವ ನೀರಿನ ಅಭಾವವನ್ನು ನಿಭಾಯಿಸುವಂಥ ಕೆಲಸ ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟ ಸಚಿವರುಗಳಿಗೆ ತಿಳಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಬಿ.ಶಿವಪ್ಪ(ಸಕಲೇಶಪುರ): ಸನ್ಮಾನ್ಯ ಛೇರ್ಮನ್‌ರವರೆ, ಈ ಸದನದಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗುತ್ತಿದೆ. ಇಲ್ಲಿ ಕುಡಿಯುವ ನೀರು ಅತ್ಯಾವಶ್ಯಕ, ಇದರ ಬಗ್ಗೆ ಚರ್ಚೆಯೂ ಕೂಡ ಅತ್ಯಾವಶ್ಯಕವೆಂದು ನಾಲ್ಕು ದಿವಸಗಳ ನಂತರ ನಾವು ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ನಾನು ಇದರ ಬಗ್ಗೆ ಪ್ರಸ್ತಾಪ ಮಾಡಲು ಹೆಚ್ಚಿಗೆ ಸಮಯಾವಕಾಶವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ಸನ್ಮಾನ್ಯ ಕಂದಾಯಮಂತ್ರಿಗಳು ಸಕಲೇಶಪುರದಲ್ಲಿ ಕುಡಿಯುವ ನೀರಿನ ಸಮಸ್ಯೆಯಿಲ್ಲವೆಂದು ಹೇಳುತ್ತಿದ್ದಾರೆ. ನನ್ನ ಪ್ರಾಬ್ಲಮ್ ಬೇರೆಯ ರೀತಿಯದಾಗಿದೆ, ಇಲ್ಲಿಯವರೆಗೆ ನಡೆದಂತಹ ಚರ್ಚೆಯೇ ಬೇರೆ, ನನ್ನ ಚರ್ಚೆಯೇ ಬೇರೆಯದಾಗಿದೆ. ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು, ಈ ಬಗ್ಗೆ ಸರ್ಕಾರವು ಕ್ರಮ ತೆಗೆದುಕೊಂಡಿದೆ ಸಂತೋಷ. ಒಂದು ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಎಷ್ಟು ವರ್ಷದಲ್ಲಿ ಆಗಬೇಕು. ಮೊನ್ನೆದಿನ ಗ್ರಾಮೀಣಾಭಿವೃದ್ಧಿ ಸಚಿವರು ಹಾಸನಕ್ಕೆ ಬಂದಿದ್ದರು, ನಮ್ಮೆಲ್ಲರನ್ನು ಕರೆಸಿ ಈ ಕುಡಿಯುವ ನೀರಿನ ಬಗ್ಗೆ ಮಾತನಾಡಿದರು. ಈಗ ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಇರುವ ಸಮಸ್ಯೆಯನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಒಂದು ಹಳ್ಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಂಜೂರಾದರೆ ಎಷ್ಟು ವರ್ಷಗಳಲ್ಲಿ ಅದನ್ನು ಮುಗಿಸಬಹುದು. ನಾನು ಇದರ ಬಗ್ಗೆ ಒಂದು ಪಟ್ಟಿಯನ್ನು ಮಾನ್ಯ ಮಂತ್ರಿಗಳ ಕೈಗೆ ಕೊಟ್ಟಿದ್ದೇನೆ. ಸುಮಾರು 5 ರಿಂದ 10 ವರ್ಷ ಕುಡಿಯುವ ನೀರಿನ ವ್ಯವಸ್ಥೆಯು ಅರ್ಧಕ್ಕೆ ನಿಂತಿದೆ, ನನ್ನ ಪತ್ರಕ್ಕೆ ಅವರು ಉತ್ತರವನ್ನು ಬರೆದಿದ್ದಾರೆ, ಅದು ಯಾವಯಾವ ಊರೆಂದು ಓದುವುದಕ್ಕೆ ನನಗೆ ಸಮಯವಿಲ್ಲ, ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಕುಡಿಯುವ ನೀರಿನ ವ್ಯವಸ್ಥೆಯು 10 ವರ್ಷದವರೆಗೆ ಆಗಲಿಲ್ಲವೆಂದರೆ, ಮತ್ತೆ ಹೊಸದಾಗಿಯೇ ಮಾಡಿಕೊಂಡು ಹೋಗವುದಾ? ಇದರಲ್ಲಿ ಏನಾಗಬೇಕೆಂದರೆ, ಅಕೌಂಟಬಿಲಿಟಿಯು ಫಿಕ್ಸ್ ಆಗಬೇಕು, ಈ ವ್ಯವಸ್ಥೆಗೆ ಯಾರು ಜವಾಬ್ದಾರರು ಯಾರೂ ಸಹ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಸನ್ಮಾನ್ಯ ಹನುಮೇಗೌಡರು ಬೋರ್‌ವೆಲ್‌ಗಳ ರಿಪೇರಿಯ ವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದರು, ಇದರ ಬಗ್ಗೆ ನಾನು ಮೊದಲಿನಿಂದರೂ ಪ್ರಸ್ತಾಪ ಮಾಡುತ್ತಿದ್ದೇನೆ. ಇದು ಸಂಪೂರ್ಣವಾಗಿ

ಅವ್ಯವಸ್ಥೆಯಾಗಿದೆ. ಫೈರ್‌ಬ್ರಿಗೇಡ್, ಇದ್ದಹಾಗೆ ಇದಕ್ಕೊಂದು ವ್ಯವಸ್ಥೆ ನಮ್ಮ ಪ್ರತಿಯೊಂದು ಜಿಲ್ಲೆ ಹಾಗೂ ತಾಲ್ಲೂಕುಮಟ್ಟದಲ್ಲಿ ಇರಬೇಕು. ಬೋರ್‌ವೆಲ್‌ಗಳು ಕೆಟ್ಟುಹೋದರೆ ಅದು ಮಾರನೇ ದಿವಸ ರಿಪೇರಿಯಾಗತಕ್ಕಂತಹ ವ್ಯವಸ್ಥೆ, ಅದಕ್ಕೆ ಬೇಕಾಂತಹ ಎಲ್ಲಾ ಸಾಮಾನುಗಳು ಅವರ ಹತ್ತಿರವೇ ಇರಬೇಕು. ಇವತ್ತು ಬೋರ್‌ವೆಲ್‌ಗಳ ರಿಪೇರಿಗೆ ಮೇಟೀರಿಯಲ್ಸ್ ಬೇಕು ಎಂದರೆ, ರಿಪೇರಿಗೆ ಹೋದ ವ್ಯಕ್ತಿಯ ಹತ್ತಿರ ಅದರ ಸಾಮಾನುಗಳು ಇರುವುದಿಲ್ಲ. ಬೋರ್‌ವೆಲ್‌ನಲ್ಲಿ ಬರತಕ್ಕಂತಹ ಸಮಸ್ಯೆ ಏನೆಂದರೆ ಪೈಪ್‌ನ್ನು ಮೇಲಕ್ಕೆತ್ತಿದಾಗ ಅಡಿಯಲ್ಲಿ ಯಾವುದೋ ಒಂದು ಪೈಪ್ 15-20 ಅಡಿ ಕೆಳಗೆ ತೂತು ಬಿದ್ದಿದ್ದರೆ ಅದನ್ನು ತೆಗೆದು ಅಲ್ಲಿಯೇ ಇಳಿಸಿ ಬರುತ್ತಾನೆ. ಕಾರಣವೇನೆಂದರೆ, ಅವರ ಹತ್ತಿರ ಬೇರೆ ಪೈಪ್ ಇರುವುದಿಲ್ಲ. ಪೈಪ್ ಅವರ ಹತ್ತಿರ ಏಕೆ ಇರುವುದಿಲ್ಲವೆಂದರೆ, ಜಿಲ್ಲಾ ಪಂಚಾಯಿತಿಯಿಂದ ಅವರಿಗೆ ಪೈಪ್ ಸಪ್ಲೈ ಆಗಬೇಕು, ಆದರೆ ಅದನ್ನು ಪರ್ಚೇಸ್ ಮಾಡುವುದಕ್ಕೆ ಇವರ ಹತ್ತಿರ ಹಣವಿರುವುದಿಲ್ಲ. ಇವೆಲ್ಲಾ ಅವ್ಯವಸ್ಥೆಗಳು ಅಲ್ಲಿವೆ. ಅಲ್ಲಿ ಹಾಕತಕ್ಕಂತಹ ಪೈಪ್‌ಗಳ ಗೇಜ್‌ಗಳು ಸರಿಯಾಗಿರುವುದಿಲ್ಲ, ಯಾವುದೋ ಗೇಜ್‌ಗೆ ಯಾವುದೋ ಹಾಕುತ್ತಾರೆ. ಇವತ್ತು ಬೋರ್‌ವೆಲ್ ಇಲಾಖೆಗೆ ಮಂಜೂರಾದರೆ, ಇದರ ಬಗ್ಗೆ ಮಾನ್ಯ ಸೋಮಶೇಖರ್‌ರವರು ಇದು ಎಷ್ಟು ಇಲಾಖೆಯೊಳಗೆ ಬರುತ್ತದೆಂದು ಹೇಳಿದರು. ಇವತ್ತು ನಮ್ಮಲ್ಲಿ ಕೆಲವು ಭಾವಿಗಳನ್ನು ನೀರಿನ ವ್ಯವಸ್ಥೆಗಾಗಿ ಮಾಡಿದ್ದಾರೆ, ಟ್ಯಾಂಕ್‌ನ್ನು ಕಟ್ಟಿ ಅಲ್ಲಿ 6 ವರ್ಷವಾಗಿದೆ, ಇವತ್ತಿನವರೆಗೆ ಆ ಟ್ಯಾಂಕಿಗೆ ನೀರು ಬರಲಿಲ್ಲ. ಈಗ ನೀರು ಎಲ್ಲಿ ಸಿಗುತ್ತದೆಂದು ಹುಡುಕುತ್ತಿದ್ದಾರೆ. ಅಲ್ಲಿ ಟ್ಯಾಂಕನ್ನು ಕಟ್ಟಿ ಡಿಸ್ಟ್ರಿಬ್ಯೂಷನ್ ಪೈಪ್ ಹಾಕಿದ್ದಾರೆ ಅಲ್ಲಿ ಬೋರ್‌ವೆಲ್ ಫೇಲಾಗಿದೆ ಎಂದು ಹೇಳುತ್ತಾರೆ. ಈ ರೀತಿ 5-10 ವರ್ಷದವರೆಗೆ ಅನೇಕ ಹಳ್ಳಿಗಳಲ್ಲಿ ನಾನು ಈಗ ತಂದಿರಕ್ಕಂತಹ ಪಟ್ಟಿಯಲ್ಲಿ 22 ಹಳ್ಳಿಗಳನ್ನು ಮೊನ್ನೆ ದಿನ ಮಂತ್ರಿಗಳು ಬಂದಾಗ ಆ ಪಟ್ಟಿಯನ್ನು ಕೊಟ್ಟಿದ್ದೇನೆ. ಈ ರೀತಿಯಾಗಿ ರಾಂಗ್‌ಮೆಥೆಡ್‌ನಲ್ಲಿ ಒಂದು ಹಳ್ಳಿಗೆ ನೀರನ್ನು ಅವರು ಸರಬರಾಜು ಮಾಡಿದ್ದಾರೆ, 3 ಕಿ.ಮೀ. ದೂರದಲ್ಲಿ ನೀರನ್ನು ಕಂಡಿದ್ದಾರೆ, ಅದನ್ನು ತೆಗದುಕೊಂಡು ಹೋಗಿ ಒಂದು ಗುಡ್ಡದ ಮೇಲೆ ಟ್ಯಾಂಕನ್ನು ಕಟ್ಟಿದ್ದಾರೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಇದನ್ನು ಗಮನಕ್ಕೆ ತರುತ್ತಿದ್ದೇನೆ. ಟ್ಯಾಂಕಿನಿಂದ ನೀರನ್ನು ಸುಮಾರು 4 ಕಿ.ಮೀ.ರವರೆಗೆ ತೆಗೆದುಕೊಂಡು ಹೋಗುತ್ತಾರೆ. ಆ 4 ಕಿ.ಮೀ. ಇರತಕ್ಕಂತಹ ಹಳ್ಳಿಗಳಿಗೆ ಈ ಟ್ಯಾಂಕಿನಿಂದ ನೀರನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಇವತ್ತಿನ ಈ ಒಂದು ಪವರ್‌ನ ತೊಂದರೆಯಲ್ಲಿ ಆ ಟ್ಯಾಂಕ್ ಭರ್ತಿಯಾಗುವುದರೊಳಗೆ ಇಲ್ಲಿ ಕರೆಂಟ್ ಹೋಗುತ್ತದೆ. ಯಾವುದೋ ಒಂದು ದಿವಸ ಕೂಡ ಟ್ಯಾಂಕನ್ನು ಭರ್ತಿ ಮಾಡುವುದಕ್ಕೆ ಆಗುವುದಿಲ್ಲ. ಅಂದರೆ ಆ ನೀರು ಆ ಊರಿಗೆ ಹೋಗುವುದಿಲ್ಲ. ಇಷ್ಟು ಹಣವನ್ನು ಖರ್ಚು ಮಾಡುವುದರ ಬದಲು ಆ ಊರಿಗೆ ಬೇರೆ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ಕಳೆದ ಮಾರ್ಚಿನಲ್ಲಿ ಕೊಟ್ಟಂತಹ ಬೋರ್‌ವೆಲ್‌ಗಳನ್ನು ಇವತ್ತಿನವರೆಗೆ ತೆಗೆಯಲಿಲ್ಲ. ಕಾರಣವೆಂದರೆ ಬೋರ್‌ವೆಲ್‌ನ್ನು ಕಂಟ್ರಾಕ್ಟ್‌ದಾರನಿಗೆ

ಕೊಡುತ್ತಾರೆ, ಆ ಕಂಟ್ರಾಕ್ಟ್‌ದಾರನೇ ಬಂದು ಬೋರ್‌ವೆಲ್‌ನ್ನು ತೆಗೆಯಬೇಕು, ಇದನ್ನು ಬೇರೆಯವರು ತೆಗೆಯುವ ಹಾಗಿಲ್ಲ, ಅವನು ಬಂದು ಬೋರನ್ನು ತೆಗೆಯುವ ಹಾಗಿಲ್ಲ. ಒಂದು ಸೀಸನ್ ಕಳೆದು ಎರಡನೇ ಸೀಸನ್ ಬಂದರೂ ಕೂಡ ಬೋರ್‌ವೆಲ್‌ಗಳನ್ನು ಇವತ್ತಿನವರೆಗೆ ತೆಗೆಯಲಿಲ್ಲ. ಇನ್ನು ಪಾಯಿಂಟ್‌ನ್ನು ಗುರುತು ಮಾಡುವಂತಹ ವ್ಯವಸ್ಥೆ, ಅದು ಒಂದು ಇಲಾಖೆಗೆ ಬರುತ್ತದೆ. ಯಾರು ಬೇಕಾದರೂ ಕೂಡ ಪ್ರವಾಸ ಮಾಡಬಹುದು, ನ್ಯಾಷನಲ್ ಹೈವೇ, ಸ್ಟೇಟ್‌ಹೈವೇ, ಬದಿಯಲ್ಲಿ ಬೋರ್‌ವೆಲ್ ಇದ್ದು, ಒಂದು ಅರ್ಧ ಕಿ.ಮಿ. ಊರೊಳಗೆ ಆ ಬೋರ್‌ನವರು ಹೋಗುವುದಕ್ಕೆ ಅನುಕೂಲವಿರಬೇಕು ಆದರೆ ರಸ್ತೆಯ ಪಕ್ಕದಲ್ಲಿಯೇ ಲಾರಿ ನಿಲ್ಲಿಸಿ ಬೋರನ್ನು ತೆಗೆಯುತ್ತಾರೆ. ಪ್ರತಿಯೊಂದು ಬೋರ್‌ವೆಲ್‌ಗಳು ಇವತ್ತು ಮೈನ್‌ರೋಡ್ ಪಕ್ಕದಲ್ಲಿದೆಯೇ ಹೊರತು ಗ್ರಾಮಾಂತರ ಪ್ರದೇಶಕ್ಕೆ ಹೋಗಲಿಲ್ಲ. ಒಂದು ಗ್ರಾಮಕ್ಕೆ ನೀರನ್ನು ಕೊಡಬೇಕೆಂದರೆ, ಮೈನ್‌ರೋಡ್‌ನಿಂದ 3 ಕಿ.ಮಿ. ದೂರಕ್ಕೆ ನೀರು ಹೋಗಬೇಕು. ಪಾಯಿಂಟ್ ಗುರುತು ಮಾಡುವಂತವರು ಯಾರು ತೋರಿಸುತ್ತಾರೋ ಆ ಜಾಗವನ್ನು ಪಾಯಿಂಟ್ ಮಾಡಿ ಬರುತ್ತಾರೆ. ಅಲ್ಲಿ ನೀರು ಬರಲಿಲ್ಲವೆಂದರೆ ಅದಕ್ಕೇನು ಮಾಡುವ ಹಾಗಿಲ್ಲ. ಇನ್ನೊಂದು ಕಡೆ ಪಾಯಿಂಟ್ ಮಾಡಿ ತೆಗೆಯಿರಿ ಎಂದು ಹೇಳುತ್ತಾರೆ. ಒಂದು ಹಳ್ಳಿಯಲ್ಲಿ 23 ಮನೆಗಳಿವೆ. 18 ಬೋರ್‌ವೆಲ್‌ಗಳನ್ನು ತೆಗೆದಿದ್ದಾರೆ, ಇದುವರೆಗೂ ಅಲ್ಲಿ ನೀರು ಬಂದಿರುವುದಿಲ್ಲ. ಆದರೆ ಎರಡು-ಮೂರು ಬೋರ್‌ವೆಲ್‌ಗಳು ಫೈಲಾದಾಗ ಇದರ ಬಗ್ಗೆ ಬದಲಿ ವ್ಯವಸ್ಥೆಯನ್ನು ಮಾಡಬೇಕಲ್ಲವೇ? ಪುನಃ ಮತ್ತೊಂದು ಬೋರ್‌ನ್ನು ತೆಗೆಯಿರಿ, ಹೀಗೆ 18 ಬೋರ್‌ವೆಲ್‌ಗಳನ್ನು ತೆಗೆದಿರುವುದಕ್ಕೆ ಹಣವನ್ನು ಕೊಡುವವರು ಯಾರು? ಈ ರೀತಿಯ ಅವ್ಯವಸ್ಥೆಗಳಿಗೆ ಎಲ್ಲದಕ್ಕೂ ಜವಾಬ್ದಾರಿ ಫಿಕ್ಸ್ ಆಗಬೇಕು, ಈ ತಪ್ಪಿಗೆ ಶಿಕ್ಷೆಯನ್ನು ನಾವು ಮಾಡಿದ್ದೇ ಆದರೆ ಈ ವ್ಯವಸ್ಥೆ ಮತ್ತೆ ಆಗುವುದಿಲ್ಲ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಲ್ಲಿ ನನ್ನದೊಂದು ಅರಿಕೆ, ತಾವು ಹಾಸನಕ್ಕೆ ಬಂದಾಗ ಸುಮಾರು 22 ಹಳ್ಳಿಗಳಲ್ಲಿ 5 ರಿಂದ 10 ವರ್ಷಗಳವರೆಗೆ ನೀರಿನ ಕೆಲಸ ಮಾಡಿ ಸಂಪೂರ್ಣವಾಗಿ ಆಗಲಿಲ್ಲ, ಅಲ್ಲಿ ಟ್ಯಾಂಕನ್ನು ಕಟ್ಟಿದ್ದಾರೆ, ಅಲ್ಲಿ ಪೈಪ್ ಇಲ್ಲ, ವಾಟರ್‌ಸೋರ್ಸ್ ಇಲ್ಲ, ವಾಟರ್‌ಸೋರ್ಸ್ ಸಿಕ್ಕಿದರೆ ಟ್ಯಾಂಕಿಲ್ಲ, ಟ್ಯಾಂಕ್ ಇದ್ದರೆ ಪೈಪಿಲ್ಲ, ಈ ಅವ್ಯವಸ್ಥೆಯನ್ನು ತಮ್ಮ ಗಮನಕ್ಕೆ ತಂದು ಪಟ್ಟಿಯನ್ನು ಕೊಟ್ಟಿದ್ದೆ ಅದರ ಬಗ್ಗೆ ಏನಾಯಿತೋ ಗೊತ್ತಿಲ್ಲ. ದಯಮಾಡಿ ಇದರ ಬಗ್ಗೆ ಗಮನ ಹರಿಸಿ, ಕೇವಲ ಕುಡಿಯುವ ನೀರು ಎಂದು ಹೇಳಿದರೆ ಆಗುವುದಿಲ್ಲ, ಈ ಅವ್ಯವಸ್ಥೆಯನ್ನು ಸರಿಪಡಿಸಿ, ಯಾರಾದರೊಬ್ಬರಿಗೆ ಜವಾಬ್ದಾರಿಯನ್ನು ಫಿಕ್ಸ್ ಮಾಡಿದರೆ ಬಹುಶಃ ಇದು ಆಗಬಹುದು. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

+ ಶ್ರೀ ರೇವುನಾಯಕ್ ಬೆಳಮಗಿ(ಕಮಲಾಪುರ): ಮಾನ್ಯ ಛೇರ್ಮನ್‌ರವರೆ, ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮೀಸಲು ಕ್ಷೇತ್ರದ ನೀರಿನ ಸಮಸ್ಯೆ ಬಗ್ಗೆ ಸಾಕಷ್ಟು ಸಾರಿ ನಾನು ಈ ಸದನದಲ್ಲಿ ಕೂಡ ಪ್ರಸ್ತಾಪ ಮಾಡಿದ್ದೇನೆ. ನನ್ನ ಕೇಂದ್ರಸ್ಥಾನವು

ಕಮಲಾಪುರ ಆಗಿದೆ, ಸುಮಾರು 35 ರಿಂದ 40 ಸಾವಿರ ಜನಸಂಖ್ಯೆ ಇದೆ, ಅಲ್ಲಿ ಕೂಡ ನೀರಿನ ಸಮಸ್ಯೆ ಬಹಳವಿದೆ. ವಿ.ಕೆ.ಸಲಗರದಲ್ಲಿ ನನಗೆ ಉಗಾದಿ ಹಬ್ಬವೆಂದರೆ ಖರ್ಗೆಯವರಿಗೆ ನಮ್ಮ ಹಿರಿಯ ನಾಯಕರಿಗೆ ಅದು ಗೊತ್ತಿದೆ. ಅವರು ಹಬ್ಬದ ದಿವಸ ಮೀಟಿಂಗ್‌ನ್ನು ಮಾಡೋಣವೆಂದು ನನ್ನನ್ನು ಕರೆದರು. ನಮ್ಮ ಕಡೆ ಬಹಳ ಬಿಸಿಲು ಇತ್ತು, 2 ಗಂಟೆ ಎಂದು ಸಮಯವನ್ನು ನಿಗದಿಮಾಡಿದರು. ನಾನು ಬಹಳ ಉತ್ಸಾಹದಿಂದ ಅಲ್ಲಿಗೆ ಹೋದಾಗ ಅಲ್ಲಿ ಸುಮಾರು 2. ಕಿ.ಮೀ.ನಿಂದ ಜನರು ನೀರನ್ನು ತರುತ್ತಿದ್ದರು, ಆ ನೀರು ತರುತ್ತಿದ್ದವರ ಜಾಗವನ್ನು ತೋರಿಸಿ ಅಲ್ಲಿ ಮೀಟಿಂಗ್ ಎಂದು ನನಗೆ ಅವರು ತೋರಿಸಿದರು ಅವರು ಒಂದು ಜಾಗದಲ್ಲಿ ನನ್ನನ್ನು ಕುಳಿತುಕ್ಕೊಲು ಹೇಳಿ ನಮಗೆ ನೀವು ನೀರು ಕುಡಿಸಿ ಹೋಗಬೇಕು. ನೀವು ಎರಡನೆಯ ಬಾರಿ ಎಂಎಲ್‌ಎ ಆಗಿದ್ದೀಯಾ, ನಾವು ಸಾಕಷ್ಟು ಸಾರಿ ಮನವಿ ಪತ್ರವನ್ನು ಕೊಟ್ಟಿದ್ದೇವೆ. ನೀರಿನ ಹಾಹಾಕಾರ ನಿಮಗೆ ಗೊತ್ತಿದೆ, ನೀರು ಹೇಗೆ ಕೊಡುತ್ತೀರಿ? ನೀರನ್ನು ಜನರಿಗೆ ಹೇಗೆ ಕುಡಿಸುತ್ತೀರಿ? ಟ್ಯಾಂಕ್‌ರ್, ಟಿಪ್ಪರ್ ಮೂಲಕ ನೀರನ್ನು ಕುಡಿಸುವಂತಾಗಬೇಕೆಂದು ನನಗೆ 2 ತಾಸುಗಳ ಕಾಲ ಅವರೆಲ್ಲ ಘೇರಾವು ಹಾಕಿ ಕೂರಿಸಿದ್ದರು. ನಾನು ಅವರಿಗೆ ಬಹಳ ಮುಗ್ಧ ಮನಸ್ಸಿನಿಂದ ಹೇಳಿದೆ, ನೀರಿನ ತೊಂದರೆಯನ್ನು ನೀಗಿಸುವ ಸಲುವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಗುಲ್ಬರ್ಗಕ್ಕೆ ಬಂದಿದ್ದರು, ಆಗ ನಾನು ಅವರ ಮುಂದೆ ಈ ಸಮಸ್ಯೆಯನ್ನು ಹೇಳಿದ್ದೇನೆ. ಅವರು ಹಣವನ್ನು ಬಿಡುಗಡೆ ಮಾಡಿದರೆ, ನೀರಿನ ಸಮಸ್ಯೆಯು ಪರಿಹಾರವಾಗುತ್ತದೆ ಎಂದು ನಾನು ಅವರಿಗೆ ಆಗ ಮನವೊಲಿಸಿ ಬಂದಿದ್ದೇನೆ. ಈ ಬಗ್ಗೆ ನಾನು ಸದನದಲ್ಲಿ 8 ದಿವಸಗಳ ಹಿಂದೆ ಪ್ರಸ್ತಾಪ ಮಾಡಿದ್ದೇನೆ, ಇದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ಸಮಸ್ಯೆಯನ್ನು ನಾನು ಪರಹರಿಸುತ್ತೇನೆ ಎಂದು ಹೇಳಿದರು. ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ, ಕಿಣಿಸುಲ್ತಾನ್ ಗ್ರಾಮ್, ತೂಗಾ, ಮಡಕೆತಾಂಡಾ ಇನ್ನೂ ಅನೇಕ ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಬಹಳ ಇದೆ. ಮೀಸಲು ಕ್ಷೇತ್ರವೆಂದರೆ, ದಲಿತರು, ಸೂಳಕಾರ ಜನ ಹೆಚ್ಚಿಗೆ ಇದ್ದಾರೆ. ಅವರು ಬಹಳ ಸಮಸ್ಯೆಗೆ ಈಡಾಗಿದ್ದಾರೆ, ನಮ್ಮ ಕ್ಷೇತ್ರದ ಸಮಸ್ಯೆಯನ್ನು ಯಾವಾಗ ಪರಿಹಾರ ಮಾಡುತ್ತೀರಾ?ಎಂದು ತಮ್ಮ ಉತ್ತರದಲ್ಲಿ ಇದರ ಬಗ್ಗೆ ಹೇಳಬೇಕು. ಬರೀ ಉತ್ತರವಷ್ಟೇ ಅಲ್ಲ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಆ ಗ್ರಾಮೀಣ ಪ್ರದೇಶದ ಜನರಿಗೆ ನೀರನ್ನು ಒದಗಿಸಬೇಕೆಂದು ನಾನು ಸರ್ಕಾರದಲ್ಲಿ ಕಳಕಳಿಯಿಂದ ಒತ್ತಾಯ ಮಾಡುತ್ತೇನೆ. ಎಷ್ಟು ದಿವಸದಲ್ಲಿ ನನ್ನ ಕ್ಷೇತ್ರದ ಈ ಸಮಸ್ಯೆಯನ್ನು ತಾವು ಪರಿಹರಿಸುತ್ತೀರೆಂದು ಸರ್ಕಾರ್ರದಿಂದ ಉತ್ತರವನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿಯನ್ನು ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಸಿ.ಬಸವರಾಜ್(ಪಿರಿಯಾಪಟ್ಟಣ): ಸನ್ಮಾನ್ಯ ಛೇರ್ಮನ್‌ರವರೆ, ಈ ಸದನದಲ್ಲಿ ರಾಜ್ಯದಲ್ಲಿನ ಕುಡಿಯುವ ನೀರಿನ ಅಭಾವದ ಬಗ್ಗೆ ಕೂಲಂಕಷವಾಗಿ ಚರ್ಚೆ

ಮಾಡುತ್ತಿರುವುದು ಸಂತೋಷದ ವಿಚಾರವಾಗಿದೆ. ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು ಅರೆ ಮಲೆನಾಡು ಆದರೂ ಕೂಡ ಅಲ್ಲಿ ಕುಡಿಯುವ ನೀರಿನ ತೀವ್ರತೆ ಎಷ್ಟು ಇದೆಯೆಂದರೆ, ನಾನು ಶಾಸಕರಾಗಿ ಅಲ್ಲಿಗೆ ಹೋದಾಗ ಪ್ರತಿ ಹಳ್ಳಿಗಳಲ್ಲೂ ಕೂಡ ನೀರು ಬತ್ತಿಹೋಗಿದೆ. ಕುಡಿಯುವ ನೀರಿಗೆ ಬಹಳ ತೊಂದರೆ ಇದೆ ಎಂದು ಹೇಳಿ ಬಹಳಷ್ಟು ದೂರುಗಳು ಬಂದಿದೆ. ಸರ್ಕಾರ ಅಧಿಕಾರಕ್ಕೆ ಬಂದ ಕಳೆದ 6 ತಿಂಗಳಲ್ಲಿ ನನ್ನ ಕ್ಷೇತ್ರದಲ್ಲಿ ಯೋಜನೆಗಳಿಗೆ ಹೊರತುಪಡಿಸಿ, ಕುಡಿಯುವ ನೀರಿಗೆ ಕೈಪಂಪು ಅಳವಡಿಸುವಂತಹ ಒಂದು ಬಾವಿಯನ್ನು ಕೂಡ ತೋಡಿಲ್ಲ. 2 ತಿಂಗಳಿಗೆ ಒಂದು ಸಾರಿ ಪಟ್ಟಿಯನ್ನು ಕಳುಹಿಸಿಕೊಡಿ ಎಂದು ಕೇಳುತ್ತಾರೆ, ನಾನು ಈಗಾಗಲೇ 3 ಬಾರಿ ಲಿಸ್ಟ್‌ನ್ನು ಕಳುಹಿಸಿ ಕೊಟ್ಟಿದ್ದೇನೆ. ಒಂದು ಬಾವಿಯನ್ನು ಕೂಡ ಅಲ್ಲಿ ತೋಡಿರುವುದಿಲ್ಲ, ಈ ಬಗ್ಗೆ ನನಗೆ ಬಹಳ ಸಂಕಟವಾಗುತ್ತಿದೆ. ಬೇರೆ ಕ್ಷೇತ್ರದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಸರ್ಕಾರ ಕುಡಿಯುವ ನೀರಿನ ಬಗ್ಗೆ ಏಕೆ ಇಷ್ಟು ತಾರತಮ್ಯ ತೋರಿಸುತ್ತಿದೆ. ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬಹಳ ಮುತ್ಸದ್ಧಿ ರಾಜಕಾರಣಿಗಳು ಈ ಒಂದು ಇಲಾಖೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸತಕ್ಕಂಥವರು, ಅಧಿಕಾರದ ವಿಕೇಂದ್ರೀಕರಣದ ಬಗ್ಗೆಯೂ ಸಹ ಕಾಳಜಿಯನ್ನು ವಹಿಸಿದಂತವರು ಆಗಿದ್ದಾರೆ. ಆದರೆ ಇವತ್ತು ಅಧಿಕಾರ ವಿಕೇಂದ್ರೀಕರಣದಲ್ಲಿ ಏನಾಗಿದೆ ಎಂದರೆ, ಇವತ್ತು ಪಂಚಾಯತ್ ಲೆವಲ್‌ನಲ್ಲಿರತಕ್ಕಂತಹ ಕೊಳವೆ ಬಾವಿಗಳ ಗತಿ ಏನಾಗಿದೆ. ಒಂದು ಕೊಳವೆ ಬಾವಿ ಕೆಟ್ಟುಹೋದರೆ ಒಂದು ವಾರವಾದರೂ ಅದನ್ನು ದುರಸ್ತಿ ಮಾಡುವುದಕ್ಕೆ ಆಗುತ್ತಿಲ್ಲ. ಆಗ ಪಂಚಾಯಿತಿ ಕಾರ್ಯದರ್ಶಿಯವರನ್ನು ಕೇಳಿದರೆ ಇ.ಓ.ಗೆ ಹೇಳಿ ಎಂದು ಹೇಳುತ್ತಾರೆ. ಇ.ಓ.ಗೆ ಒಂದು ವ್ಯಾನ್‌ನ್ನು ಮಾಡಿ ಕಳುಹಿಸಿದರೆ, ಒಂದು ವ್ಯಾನ್ ಒಂದು ತಾಲ್ಲೂಕಿನಲ್ಲಿ ಒಂದು ರೌಂಡ್ ಎಲ್ಲ 225 ಹಳ್ಳಿಗಳಿರುವ ಸ್ಥಳಕ್ಕೆ ಹೋಗಿ ಬರಬೇಕಾದರೆ 15 ದಿವಸಗಳು ಬೇಕಾಗುತ್ತದೆ. ಈಗ ಬಿಸಿಲಿನ ಧಗೆ ಜಾಸ್ತಿಯಾಗಿ ಕುಡಿಯುವ ನೀರಿಗೆ ಅಭಾವವಾಗಿದೆ. ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಹತ್ತಾರು ವರ್ಷಗಳಿಂದ ಏನು ಕೊಳವೆ ಬಾವಿಗಳನ್ನು ತೋಡಿಸಿದ್ದಾರೆ, ಆವತ್ತು ನಮ್ಮ ಕ್ಷೇತ್ರದಲ್ಲಿ 150 ರಿಂದ 200 ಅಡಿ ಕೊಳವೆ ಭಾವಿಯನ್ನು ತೋಡಿದರೆ ಬೇಕಾದಷ್ಟು ನೀರು ಬರುತ್ತಿತ್ತು. ಆಗ ಕೊಳವೆ ಬಾವಿಯನ್ನು ತೋಡಿಸಿದರು. ಈಗ ಏನಾಗಿದೆ ಎಂದರೆ, 100ಕ್ಕೆ 75 ಭಾಗ ಕೊಳವೆ ಬಾವಿಗಳು ಒಣಗಿ ಹೋಗಿವೆ. ಇವತ್ತು ನೀರಿಲ್ಲದೆ ಬಿಸಿಲು ಜಾಸ್ತಿಯಾಗಿದೆ, ನೀರಿಲ್ಲದ ಕಾರಣ ಕೊಳವೆ ಭಾವಿಗಳು ದುರಸ್ತಿಯಾಗಿರುವುದಿಲ್ಲ, ನೀರು ಸಹ ಇರುವುದಿಲ್ಲ, ಹೊಸ ಕೊಳವೆ ಬಾವಿಗಳನ್ನು ಸಹ ತೋಡುತ್ತಿಲ್ಲ. ಹೀಗಾದರೆ ಜನಸಾಮಾನ್ಯರ ಕಷ್ಟಕಾರ್ಪಣ್ಯಗಳನ್ನು ಕೇಳುವವರು ಯಾರು? ಇದನ್ನು ಯಾವ ರೀತಿ ಸರಿಪಡಿಸಬೇಕು? ಇನ್ನು ಎರಡನೆಯದಾಗಿ ಕೆಟ್ಟುಹೊದಂತಹ ಬಾವಿಗಳು, ಎನ್‌ಆರ್‌ಡಬ್ಲ್ಯೂ, ಎಆರ್‌ಡಬ್ಲ್ಯೂ ಸ್ಕೀಂ, ಮಿನಿ ವಾಟರ್ ಸಪ್ಲೈ, ಪಂಪುಗಳು ಕೆಟ್ಟು ಹೋಗಿದೆ, ಅದು ಕೆಟ್ಟು ಹೋಗಿ 15 ದಿಸವಗಳಾದರೂ ದುರಸ್ತಿಯಾಗುವುದಿಲ್ಲ. ಏಕೆ ದುರಸ್ತಿಯಾಗಿಲ್ಲ ಎಂದು ನಾವು

ಕೇಳಿದರೆ ಆ ಪಂಚಾಯಿತಿ ಕಾರ್ಯದರ್ಶಿಯವರು ನಾನು ರಿಪೇರಿಗೆ ಕೊಟ್ಟಿದ್ದೇನೆ, ಅದು ಯಾವ ಕಂಟ್ರಾಕ್ಟದಾರನಿಗೆ ಕೊಟ್ಟಿದ್ದಾರೋ ಆ ಪರ್ಟಿಕ್ಯುಲರ್ ಕಂಟ್ರಾಕ್ಟ್‌ದಾರರೇ ಆಗಬೇಕು, ಅವರು ಬೇಕಾಗಿರುವಂತಹವರಿಗೆ ಅದನ್ನು ಕೊಡಬೇಕು. ಅವನು ರಿಪೇರಿ ಮಾಡಿ ಕೊಡಬೇಕಾದರೆ 8 ದಿವಸಗಳಾಯಿತು, ಅದು ಆದರೆ ಕಾರ್ಯದರ್ಶಿಯವರು ನಾಪತ್ತೆಯಾಗುತ್ತಾರೆ. ಇಲ್ಲ ಎರಡೆರಡು ಪಂಚಾಯಿತಿಯಿಂದ ಒಬ್ಬೊಬ್ಬ ಕಾರ್ಯದರ್ಶಿ ಇರುತ್ತಾರೆ. ಅಲ್ಲಿ ಯಾವ ರೀತಿಯಾಗಿ ಇವರು ಕೆಲಸವನ್ನು ಮಾಡುತ್ತಾರೆ. ಜನರಿಗೆ ಯಾವ ರೀತಿಯಾಗಿ ಕುಡಿಯುವ ನೀರನ್ನು ಒದಗಿಸಬೇಕು, ಆ ಸಮಸ್ಯೆಯನ್ನು ನಾವು ಇವತ್ತು ಬಗೆಹರಿಸಿಕೊಳ್ಳಬೇಕಾಗಿದೆ. ರಾವಂದೂರು ಎಂಬ ಹೋಬಳಿಯ ಹೆಡ್‌ಕ್ವಾರ್ಟರ್ಸ್‌ನಲ್ಲಿ 6 ದಿವಸಗಳಿಂದ ವಿದ್ಯುಚ್ಛಕ್ತಿ ಇರುವುದಿಲ್ಲ, ಇದರಿಂದಾಗಿ ಸುತ್ತ ಮುತ್ತಲಿನ 25 ಗ್ರಾಮಗಳಲ್ಲಿ ಕುಡಿಯುವ ನೀರಿಲ್ಲ, ಇವತ್ತು ಅಲ್ಲಿ ಹೆಣ್ಣು ಮಕ್ಕಳು ಮೈಲಿಗಟ್ಟಲೆ ಹೋಗಿ ಕುಡಿಯುವ ನೀರನ್ನು ತರುವುದಕ್ಕೆ ಬೋರ್‌ವೆಲ್‌ಗೆ ಹೋಗಬೇಕಾದ ಸಮಸ್ಯೆ ಬಂದಿದೆ. ಇದು ಬಹಳ ತೀವ್ರವಾದಂತಹ ಸಮಸ್ಯೆಯಾಗಿದೆ, ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಸೆಳೆಯಬೇಕು. ಈ ಅಂತರ್‌ಜಲವು ಕಡಿಮೆಯಾಗಿರುವಂತಹ ದೃಷ್ಟಿಯಲ್ಲಿ ಹೆಚ್ಚಿನ ರೀತಿಯಲ್ಲಿ ಕೆರೆಗಳಲ್ಲಿ ಹೂಳೆತ್ತುವಂತಹ ಕೆಲಸವನ್ನು ಮಾಡಿ ಈ ಅಂತರ್‌ಜಲವನ್ನು ಹೆಚ್ಚಿಸಲಿಕ್ಕೆ ಸರ್ಕಾರವು ಹೆಚ್ಚಿನ ಹಣ ಕೊಟ್ಟು ಅದರ ಬಗ್ಗೆ ಚಿಂತನೆಯನ್ನು ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತಿದ್ದೇನೆ. ಇನ್ನು ಕೊನೆಯದಾಗಿ ಪಿರಿಯಾಪಟ್ಟಣ ತಾಲ್ಲೂಕು ಬಹಳಷ್ಟು ಅಭಾವಪಿರತಕ್ಕಂತಹ ಸ್ಥಳವಾಗಿದೆ. ದೊಡ್ಡ ಹೊಸೂರು ಎಂಬ ಗ್ರಾಮದಲ್ಲಿ ಒಂದು ಸಾವಿರ ಹರಿಜನರ ಕುಟುಂಬಗಳು ಇವೆ, ಅಲ್ಲಿ ಕಳೆದ 6-7 ವರ್ಷಗಳಿಂದ ಎಆರ್‌ಡಬ್ಲ್ಯೂ, ಎನ್‌ಆರ್‌ಡಬ್ಲ್ಯೂ ಸ್ಯಾಂಕ್ಷನ್ ಆಗಿದೆ. ಇದುವರೆಗೂ ಅಲ್ಲಿ ಕಾರ್ಯಗತವಾಗಿಲ್ಲ, ಇಂತಹ ಸಮಸ್ಯೆ ಅಲ್ಲಿ ಇದೆ ಇದರ ಬಗ್ಗೆ ಸರ್ಕಾರವು ಗಮನ ಹರಿಸಬೇಕು. ದೊಡ್ಡ ಹೊಸೂರು, ದೊಡ್ಡ ಹರಿವೆ, ಬೆಟ್ಟದಪುರ, ಕಣಗಾಲು, ಕಿತ್ತೂರು, ಅಲ್ಪನಾಯಕನಹಳ್ಳಿ ಇಂತಹ ಅನೇಕ ಗ್ರಾಮಗಳಲ್ಲಿ ಇವತ್ತು ಕುಡಿಯುವ ನೀರಿನ ಸಮಸ್ಯೆಯಿದೆ. ಕೆ.ಆರ್.ನಗರ ತಾಲ್ಲೂಕಿನ ನನ್ನ ಕ್ಷೇತ್ರದಲ್ಲಿ ಬರತಕ್ಕಂತಹ ಹೊಸೂರು ಗ್ರಾಮವು ಕಾವೇರಿ ನದಿಯ ದಡದಲ್ಲಿದೆ, ಅಲ್ಲಿ ಸುಮಾರು 10 ಬೋರ್‌ವೆಲ್‌ಗಳನ್ನು ತೋಡಿದ್ದಾರೆ, ಆದರೂ ಸಹ ಬೋರ್‌ವೆಲ್‌ಗಳಲ್ಲಿ ನೀರಿಲ್ಲ. ಇದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರಾದ ಶ್ರೀ ಬಿ.ಬಿ.ಚಿಮ್ಮನಕಟ್ಟಿಯವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಹೊಸೂರು ಗ್ರಾಮಕ್ಕೆ ಅದು ಕಾವೇರಿ ನದಿಯ ದಡದಲ್ಲಿದೆ, ಅಲ್ಲಿ ಕುಡಿಯುವ ನೀರಿನ ಸಮಸ್ಯೆಯು ಜಾಸ್ತಿ ಇದೆ. ಆ ದೃಷ್ಟಿಯಿಂದ ಏನಾದರೂ ಕೂಡ ನಿಮ್ಮ ಯಾವುದಾದರೂ ಸ್ಕೀಂನಲ್ಲಿ ಅಲ್ಲಿ ಹೊಳೆಯ ನೀರನ್ನು ಕುಡಿಯುವುದಕ್ಕೆ ಅನುಕೂಲವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ದುರಸ್ತಿಯ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ದುರಸ್ತಿಯ ಬಗ್ಗೆ ಇವತ್ತು ಏನಾಗಿದೆ ಎಂದರೆ, ಪಂಚಾಯಿತಿಯವರು

ತಾಲ್ಲೂಕು ಪಂಚಾಯಿತಿಯವರ ಮೇಲೆ ಹೇಳುತ್ತಾರೆ, ತಾಲ್ಲೂಕು ಪಂಚಾಯಿತಿಯವರು ಜಿಲ್ಲಾ ಪಂಚಾಯಿತಿಯವರು ಮೇಲೆ ಹೇಳುತ್ತಾರೆ, ಸರ್ಕಾರ ಇವತ್ತು ಸರಿಯಾದಂತಹ ನಿರ್ದೇಶನವನ್ನು ಕೊಟ್ಟು ಅದಕ್ಕೆ ಎಷ್ಟೇ ಹಣವು ಖರ್ಚಾಗಲಿ ತಾಲ್ಲೂಕು ಪಂಚಾಯಿತಿಯವರಿಗೆ ಕೊಟ್ಟು ಸಂಬಂಧಪಟ್ಟಂತಹ ಬಾವಿಗಳನ್ನು ದುರಸ್ತಿ ಮಾಡಿ ಸಂಬಂಧಪಟ್ಟಂತಹ ಕಾರ್ಯದರ್ಶಿಗಳು ಮತ್ತು ಪಂಚಾಯಿತಿಯವರಿಗೆ ಕೊಟ್ಟು ಆ ಒಂದು ವ್ಯವಸ್ಥೆಯನ್ನು ಮಾಡದೆ ಇದ್ದರೆ ಈ ಸಂದರ್ಭದಲ್ಲಿ ಬಹಳ ತೊಂದರೆಯಾಗುತ್ತದೆ. ಕೇಂದ್ರಸರ್ಕಾರದ ರಾಜೀವಗಾಂಧಿ ಫೌಂಡೇಷನ್‌ನಿಂದ 10 ಪರ್ಸೆಂಟ್ ಹಣ ಪಡೆದು ಅನೇಕ ಬಾವಿಗಳನ್ನು ತೋಡುವುದಕ್ಕೆ ಅನುವು ಮಾಡಬಹುದು. ಆ ಹಣವು ಬಂದಿದೆ, ಆ ಹಣವನ್ನು ವಂತಿಗೆಯ ರೂಪದಲ್ಲಿ ಕೊಡುವುದಕ್ಕೆ, ಸುಮಾರು 25 ಗ್ರಾಮಗಳಲ್ಲಿ ಜನರು ದುಡ್ಡು ಕೊಡುವುದಕ್ಕ ಮುಂದೆ ಬಂದಿದ್ದಾರೆ. ಸರ್ಕಾರ ಮಾತ್ರ ಇನ್ನು ಮುಂದೆ ಬಂದಿಲ್ಲ, ಆದ್ದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಆಗ್ರಹ ಮಾಡುತ್ತಿದ್ದೇನೆ, ದಯವಿಟ್ಟು ಯಾವುದೇ ರೀತಿಯಲ್ಲಿಯೂ ಕೂಡ ಕುಡಿಯುವ ನೀರಿಗೆ ರಾಜಕೀಯ ಮಾಡಬೇಡಿ, ದಯಮಾಡಿ ಕುಡಿಯುವ ನೀರಿಗಾಗಿ ಹೆಚ್ಚಿನ ಹಣವನ್ನು ಒದಗಿಸಿ ಕೂಡಲೇ ಅನುಷ್ಠಾನ ಮಾಡಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀ ಎ.ರಾಮದಾಸ್(ಕೃಷ್ಣರಾಜ): ಸನ್ಮಾನ್ಯ ಚೇರ್ಮನ್‌ರವರೆ, ಈಗಾಗಲೇ ನಮ್ಮ ನಾಯಕರು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಬಗ್ಗೆ ಇರುವಂತಹ ಸಮಸ್ಯೆಗಳ ಬಗ್ಗ ಪ್ರಸ್ತಾಪ ಮಾಡಿದ್ದಾರೆ, ನಾನು ಮಾತನಾಡುವುದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಾರಂಭದಲ್ಲಿ ಹೇಳುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡುವಾಗ ಯಾವುದೇ ಸಮಸ್ಯೆಯಿಲ್ಲ, ಏತಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೀರಿ ಎಂಬ ವಿಚಾರ ಬಂತು, ನಾನು ಒಂದು ಮಾತನ್ನು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇದು ನಿಮ್ಮ ಸಮಸ್ಯೆಯಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರಾದ ಶ್ರೀ ಎ.ರಾಮದಾಸ್‌ರವರಿಗೆ ಏನಾಗಿದೆಯೋ ಗೊತ್ತಿಲ್ಲ. ನಿಲೋಗಿಯಲ್ಲಿ ಸಮಸ್ಯೆ ಇಲ್ಲವೆಂದು ನಾನು ಹೇಳಿದ್ದೇನೆ. ನಿಲೋಗಿಯಲ್ಲಿ ವಾಟರ್‌ಸಪ್ಲೈ ಸ್ಕೀಂ ಇದೆ, ಅದು ಭೀಮಾನದಿಯ ದಂಡೆಯಲ್ಲಿದೆ, ಈಗಾಗಲೇ ಅಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ಇದೆ, ಅದು ಅಂತಹ ಕಡೆ ಸಮಸ್ಯೆ ಇಲ್ಲವೆಂದು ನಾನು ಹೇಳಿದ್ದೇನೆ. ನಾನು ಇಡೀ ರಾಜ್ಯದಲ್ಲಿ ನೀರಿನ ಸಮಸ್ಯೆ ಇಲ್ಲವೆಂದು ಹೇಳಲಿಲ್ಲ, ಸಮಸ್ಯೆ ಇದೆ ಎಂದು ತಿಳಿದುಕೊಂಡೆ 400 ಕೋಟಿ ರೂಪಾಯಿಗಳು ನೆರವು ಕೋರಿ ರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ಒಂದು ಮೆಮೋರ್‍ಯಾಂಡಮ್‌ನ್ನು ಅರ್ಪಿಸಿದ್ದೇವೆ, ಮತ್ತು ನಿಮಗೂ ಸಹ ನಾವು ಕೇಳಿಕೊಳ್ಳುತ್ತಿದ್ದೇವೆ, ಇದರ ಬಗ್ಗೆ ನಿಮ್ಮ ಪ್ರಭಾವವನ್ನು ಬೀರಿ ಎಂದು

ಹೇಳುತ್ತಿದ್ದೇವೆ. ಅದನ್ನು ಬಿಟ್ಟು ನೀವು ಇಲ್ಲ ಎಂದು ನನಗೆ ಹೇಳಿದರೆ ನಾಳೆ ದಿನ ನಾನು ನನ್ನ ಕ್ಷೇತ್ರಕ್ಕೆ ಹೋದಾಗ ಅಲ್ಲಿಯ ಮತದಾರರು ನೀವು ಇಲ್ಲವೆಂದು ಹೇಳಿದ್ದೀರಿ ಎಂದು ನನ್ನನ್ನು ಅವರು ಕೇಳುತ್ತಾರೆ.

ಶ್ರೀ ಎ.ರಾಮದಾಸ್: ಆ ದೃಷ್ಟಿಯಿಂದಲೇ ನಾನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಎಲ್ಲದಕ್ಕೂ ನೀವೇ ಜವಾಬ್ದಾರರು ಎಂದು ಕೂಡ ನಾನು ಹೇಳುತ್ತಿಲ್ಲ, ಆದರೆ ನಿಜವಾಗಿರುವಂತಹ ಸಮಸ್ಯೆಗಳು ಗ್ರಾಮೀಣ ಪ್ರದೇಶದ ಬಗ್ಗೆ ಹೇಳಿದ್ದಾರೆ. ನಾನು ವಿಶೇಷವಾಗಿ 6 ನಗರಪಾಲಿಕೆಗಳಿಗೆ ಸಂಬಂಧಪಟ್ಟ ಹಾಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುತ್ತಾ ಪ್ರಮುಖವಾಗಿ ನಾವು ನಗರಪಾಲಿಕೆಗಳಲ್ಲಿ ಯಾವ ರೀತಿಯಾಗಿ ನಾವು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎನ್ನುವಂತಹದ್ದನ್ನು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತಹ ಮಾತುಗಳು ಬಹಳ ಪ್ರಮುಖವಾದಂಥದ್ದು, ಅದರಲ್ಲೂ ವಿಶೇಷವಾಗಿ 1990ನೇ ಇಸವಿಯಲ್ಲಿ ತಾವು ಪ್ರಾರಂಭ ಮಾಡಿದಂತಹ ಕುಡಿಯುವ ನೀರಿನ ಯೋಜನೆಗಳು ಇವತ್ತು ಕೂಡ ಕಾರ್ಯರೂಪಕ್ಕೆ ಬರದೆ ಇರುವುದಕ್ಕೆ ಕಾರಣವೇನು ಎಂಬುದರ ಬಗ್ಗೆ ಪ್ರಶ್ನೆಯೂ ಕೂಡ ಸರ್ಕಾರದ ಮುಂದೆ ಇದೆ. 1990ರಲ್ಲಿ ತಾವು ಪ್ರಾರಂಭ ಮಾಡಿರುವುದು ಯಾವುದೆಂದರೆ, ನಿಪ್ಪಾಣಿ, ಸಂಕೇಶ್ವರ, ಚಿಕ್ಕೋಡಿ, ಬೆಳಗಾವಿ, ಚಾಮರಾಜನಗರ, ಹೀಗೆ ಇವೆಲ್ಲವೂ ಕಾರ್ಯರೂಪಕ್ಕೆ ಬಂದು, ಅವರಿಗೆ ನೀರು ಕುಡಿಸುವಂತಹ ವ್ಯವಸ್ಥೆಯೂ ಕೂಡ ಅದು ಏಕೆ ಆಗಿಲ್ಲ ಎಂಬ ವಿಚಾರಗಳನ್ನು ಚರ್ಚೆ ಮಾಡಬೇಕಾಗಿರುವುದು ಬಹಳ ಪ್ರಮುಖವಾದಂತಹ ವಿಚಾರವಾಗಿದೆ. ಇದರಲ್ಲಿ ಪ್ರಮುಖವಾಗಿ ನನಗೆ ಶ್ರೀ ಬಚ್ಚೇಗೌಡರು ಮಂಡ್ಯ, ಹಾಗೂ ಮೈಸೂರಿನವರು ಏತಕ್ಕೆ ನೀರಿನ ಸಮಸ್ಯೆಯ ಬಗ್ಗೆ ಯೋಚನೆ ಮಾಡುತ್ತೀರೆಂದು ಕೇಳಿದರು. ತಮ್ಮ ಸರ್ಕಾರ ಇದ್ದಾಗ ಮಾರ್ಚಿಯಲ್ಲಿ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಮಂಡ್ಯ ನಗರದಲ್ಲೂ ಕೂಡ ನೀರಿನ ಅಭಾವವಿದೆ ಎಂದು ತಾವು ಉತ್ತರವನ್ನು ಕೊಟ್ಟಿದ್ದೀರಿ, ಅದರ ಜೊತೆಯಲ್ಲಿ ಮೈಸೂರು ಮಹಾನಗರದಲ್ಲಿ ಕೂಡ ಸಮಸ್ಯೆ ಇದೆ. ತಮ್ಮ ಬಜೆಟ್‌ನಲ್ಲಿ ರಾಜ್ಯಪಾಲರ ಭಾಷಣದಲ್ಲಿಯೂ ಕೂಡ ಕೊನೆಯಪಕ್ಷ 150 ಲೀಟರ್ ನೀರನ್ನು ಪ್ರತಿಯೊಬ್ಬ ವ್ಯಕ್ತಿಗೆ ಕೊಡುತ್ತೇವೆಂಬ ವಿಚಾರವನ್ನು ತಾವು ಹೇಳಿದ್ದೀರಿ. ಆದರೆ ಇವತ್ತು ಮೈಸೂರು ಮಹಾನಗರದಲ್ಲಿ ಸುಮಾರು 9 ಲಕ್ಷ ಜನ ವಾಸ ಮಾಡುವಂತಹ ಒಂದು ಪ್ರದೇಶದಲ್ಲಿ 28 ಎಂಜಿಡಿ ನೀರು ಬರುತ್ತಿದೆ. ಮೈಸೂರಿನ ಪಕ್ಕದಲ್ಲಿರುವ ಕಾವೇರಿ ನೀರು ಕೆಆರ್‌ಎಸ್‌ನಿಂದ 28 ಎಂಜಿಡಿ ನೀರು ಬರುತ್ತಿದೆ, ತಾವು 92 ಸಾವಿರ ಕನ್‌ಕ್ಷನ್‌ನ್ನು ಲೀಗಲ್ ಆಗಿ ಕೊಟ್ಟಿದ್ದೀರಿ, ಈಗಾಗಲೇ ಅವರು ಪ್ರಸ್ತಾಪ ಮಾಡುವಾಗ ಹೇಳಿದರು. ಸುಮಾರು 20 ಸಾವಿರ ಕನ್‌ಕ್ಷನ್‌ನ್ನು ಇಲ್ಲೀಗಲ್ ಆಗಿ ಕೊಟ್ಟಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು? ಸುಮಾರು 20 ಸಾವಿರ ಇಲ್ಲೀಗಲ್ ಕನ್‌ಕ್ಷನ್ ಇದೆಯೆಂದು ತಾವೇ ಉತ್ತರವನ್ನು ಕೊಟ್ಟಿದ್ದೀರಿ. ಸುಮಾರು 525 ಬೋರ್‌ವೆಲ್‌ಗಳಲ್ಲಿ

ಮೈಸೂರು ನಗರಕ್ಕೆ ತಾವೇನು ನೀರನ್ನು ಒದಗಿಸಿಕೊಡುತ್ತಿದ್ದೀರಿ ಅದು ಸಾಲದು ತಾವು ಒಂದು ಸಮಿತಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೀರಿ ಈ ಮಾತನ್ನು ನಾನು ಶ್ರೀ ಬಚ್ಚೇಗೌಡರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರವನ್ನು ನಾನು ಏತಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಸುಮಾರು 525 ಬೋರ್‌ವೆಲ್‌ಗಳಲ್ಲಿ 76 ಬೋರ್‌ವೆಲ್‌ಗಳ ನೀರು ಕುಡಿಯುವುದಕ್ಕೆ ಯೋಗ್ಯವಾಗಿಲ್ಲವೆಂದು ತಾವು ಕಳುಹಿಸಿದಂತಹ ಸಮಿತಿಯು ವರದಿಯನ್ನು ಕೊಟ್ಟಿದೆ. ತಕ್ಷಣದಲ್ಲೇ ಅಂದರೆ 4 ತಿಂಗಳ ಹಿಂದೆ ಆ ಬೋರ್‌ವೆಲ್‌ಗಳನ್ನು ಮುಚ್ಚಬೇಕೆಂದು ವರದಿಯಲ್ಲಿ ಕೊಟ್ಟಿದ್ದಾರೆ. ಬನ್ನಿಮಂಟಪದ ಏರಿಯಾದಲ್ಲಿದ್ದಂತಹ ಐದು ಬೋರ್‌ವೆಲ್‌ಗಳಲ್ಲಿ ಯಾರು ನೀರನ್ನು ಕುಡಿದರೂ ಅವರಿಗೆ ಕಣ್ಣಿನಲ್ಲಿ ಹಳದಿಯ ರೋಗ ಬಂದಿದೆ ಎಂದು ಹೇಳಿ ಈಗಾಗಲೇ ಆಸ್ಪತ್ರೆಗಳಲ್ಲಿ ದಾಖಲಾಗಿರುವಂತಹ ಪ್ರಸಂಗವು ಸಹ ತಮಗೆ ವರದಿಯಾಗಿದೆ. ಬೋರ್‌ವೆಲ್‌ಗಳನ್ನು ಮುಚ್ಚಬೇಕೆಂದು ವರದಿಯನ್ನು ಕೊಟ್ಟಿದ್ದರೂ ಕೂಡ 28 ಎಂಜಿಡಿ ನೀರು ಬರುತ್ತಿದ್ದರೂ ಕೂಡ ಏಕೆ ಆ ವ್ಯವಸ್ಥೆಗಳು ಸರಿಹೋಗಲಿಲ್ಲ. ಇದರ ಬಗ್ಗೆ ನಾನು ಕಳೆದ ಬಾರಿಯೂ ಕೂಡ ಹೇಳಿದ್ದೆ, ಇದು ಎರಡು ಇಲಾಖೆಗಳ ಮಧ್ಯೆ ನಡೆಯುತ್ತಿರುವಂತಹ ದ್ವಂದ್ವ, ಎರಡು ಇಲಾಖೆಗಳ ನಡುವೆ ನಡೆಯುತ್ತಿರುವಂತಹ ಯುದ್ಧದಿಂದ ನಗರಪಾಲಿಕೆಗಳು ಆ ತರಹ ಆಗುತ್ತಿದೆ. ಬಲ್ಕ್ ವಾಟರ್ ಸಪ್ಲೈಯನ್ನು ಬೋರ್ಡ್‌ನವರು ಮಾಡುತ್ತಾರೆ, ಇದರ ವಿತರಣೆಯನ್ನು ನಗರಪಾಲಿಕೆಯವರು ಮಾಡುತ್ತಾರೆ, ಸನ್ಮಾನ್ಯ ಛೇರ್ಮನ್‌ರವರೆ, ನಾನು ತುಂಬ ನೋವಿನಿಂದ ಒಂದು ವಿಚಾರವನ್ನು ಮಾನ್ಯ ಸಚಿವರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಮೈಸೂರು ನಗರದಲ್ಲಿ ನೀರಿಗೋಸ್ಕರವಾಗಿ 521 ಲಕ್ಷ ಕರ ವಸೂಲಿಯನ್ನು ಮಾಡಿದ್ದೀರಿ. ಆದರೆ ದೊಡ್ಡ ದೊಡ್ಡ ಬಂಗಲೆಗಳಿಗೋಸ್ಕರವಾಗಿ ತೆಗೆದುಕೊಂಡ ನೀರಿನ ಕರವಾದ ಸುಮಾರು 530.91 ಲಕ್ಷ ರೂಪಾಯಿಗಳನ್ನು ಇವತ್ತಿನವರೆಗೂ ಸಹ ವಸೂಲಿ ಮಾಡಲಿಲ್ಲ. ನೀವು ಅಧಿಕಾರಕ್ಕೆ ಬಂದ ತಕ್ಷಣ ನೀವೇ ಜವಾಬ್ದಾರಿ ಎಂದು ನಾನು ಪ್ರಸ್ತಾಪ ಮಾಡುತ್ತಿಲ್ಲ. ಹಿಂದಿನ ಸರ್ಕಾರ ಏನಿತ್ತೋ ಅವರು ಕೂಡ ಜವಾಬ್ದಾರರಾಗಿದ್ದಾರೆ, ಆದರೆ ಈ ವಸೂಲು ಮಾಡುವಂತಹ ವ್ಯವಸ್ಥೆಯನ್ನು ಏಕೆ ಮಾಡುತ್ತಿಲ್ಲ, ಯಾರೋ ಪ್ರಭಾವವಿರುವಂತಹ ವ್ಯಕ್ತಿಗಳಿಗೆ ಇವತ್ತು ತಾವು ಬಲಿಯಾಗಿರುವಂತಹ ಸಂದರ್ಭದಲ್ಲಿ ಅವರು ಕೊಡಬೇಕಾಗಿರುವಂತಹ ಹಣವನ್ನು ವಸೂಲಿ ಮಾಡುವುದಕ್ಕೆ ಆಗದೆ ಇವತ್ತು ನಾವು ಕೆಇಬಿಗೆ ಬಹಳ ನೋವಿನಿಂದ ಹೇಳಬೇಕಾಗಿದೆ. ಕೆಇಬಿಯವರು ಈಗಾಗಲೇ ಎಡಿಬಿ ಸ್ಕೀಂನಲ್ಲಿ ಹೊಸ ಲೈನನ್ನು ತಂದಿದ್ದಾರೆ. ಮೈಸೂರು ಮಹಾನಗರಪಾಲಿಕೆಯಿಂದ 53 ಕೋಟಿ ರೂಪಾಯಿಗಳು ಬಾಕಿಯಿರುವುದರಿಂದ, ಅದನ್ನು ಕೆಪಿಟಿಸಿಎಲ್‌ಗೆ ಕಟ್ಟದೆ ಇರುವುದರಿಂದ ನಿಮಗೆ ವಿದ್ಯುತ್‌ನ್ನು ಕೊಡುವುದಿಲ್ಲವೆಂದು ಕೆಇಬಿಯವರು ಪತ್ರವನ್ನು ಬರೆದಿದ್ದಾರೆ. ಎಲ್ಲಿದೆ ಆ ಹಣ? ಈಗಾಗಲೇ ನಾನು ಹೇಳಿರುವ ಹಾಗೆ 530.91 ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಬಿಟ್ಟು ಅವರಿಂದ ಹಣವನ್ನು ವಸೂಲಿ ಮಾಡಲು ಆಗದೆ, 1 ತಿಂಗಳಲ್ಲಿ ಹಣವನ್ನು ಕಟ್ಟದಿದ್ದವರಿಗೆ ಡಿಸ್‌ಕನೆಕ್ಟ್

ಮಾಡುವಂತಹ ವ್ಯವಸ್ಥೆಗಳನ್ನು ನಾವು ಇಟ್ಟುಕೊಂಡಿದ್ದೀರಿ. ಇದರ ಜೊತೆಯಲ್ಲಿ ಕೇವಲ 24 ಲಕ್ಷ ರೂಪಾಯಿಗಳು ಹಣ ಸರ್ಕಾರದಲ್ಲಿದೆ, ನಾನು ಖಂಡಿತವಾಗಿ ಒಪ್ಪಿಕೊಳ್ಳುತ್ತೇನೆ. ಹಾಗಾದರೆ ಮೈಸೂರು ಮಹಾನಗರಕ್ಕೆ ಕಳೆದ 4 ತಿಂಗಳಲ್ಲಿ ನೀರಿನ ವ್ಯತ್ಯಾಸ ಏಕೆ ಆಗುತ್ತಿದೆ ಎಂದು ನಾವು ಗಲಾಟೆಯನ್ನು ಮಾಡಿದ್ದೇವೆ. ನಾನು ಹೆಚ್ಚು ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ, ಇದರ ಬಗ್ಗೆ ನಾನು ವರದಿಯನ್ನು ಕೊಡುತ್ತೇನೆ. ಅದಕ್ಕೆ ಸರ್ಕಾರದ ಸಮಿತಿ ದಿ: 18-3-2000ದಂದು ಒಂದು ವರದಿಯನ್ನು ಕೊಟ್ಟಿದೆ.

7-00 ಪಿ.ಎಂ

ಇದರಲ್ಲಿ ನಾಲ್ಕು ತಿಂಗಳಲ್ಲಿ ಪ್ರತಿದಿವಸ ರೆಕಾರ್ಡ್ ಮಾಡಿ ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಕರೆಂಟ್ ಹೋಗುತ್ತಿದೆ ಎಂದು ನೋಡಿದರೆ ಸರಾಸರಿ ಪ್ರತಿದಿವಸ 5 ಬಾರಿ ಕರೆಂಟ್ ಹೋಗಿದೆ. ಯಾವ್ಯಾವ ವೇಳೆಯಲ್ಲಿ ಕರೆಂಟ್ ಹೋಗಿದೆ ಎನ್ನುವಂಥ ಲಾಗ್‌ಬುಕ್‌ನ್ನು ಮಂತ್ರಿಗಳಿಗೆ ಕಳಿಸಿಕೊಡಲಾಗಿದೆ. ಆದರೆ ಇವತ್ತಿನವರೆಗೂ ಕ್ರಮ ಕೈಗೊಂಡಿಲ್ಲ. ಇವತ್ತು ಎಲ್ಲೆಲ್ಲಿ ಕರೆಂಟ್ ಹೋಗುತ್ತದೆ, ಆ ಸಂದರ್ಭದಲ್ಲಿ ನೀರಿನ ವ್ಯವಸ್ಥೆ ಇಲ್ಲ. ಪರ್ಯಾಯವಾಗಿ ನಮಗೆ ವಿದ್ಯುತ್ ಇಲಾಖೆಯಿಂದ ಒಂದು ಎಕ್ಸ್‌ಪ್ರೆಸ್ ಫೀಡರ್‌ನ್ನು ಕೊಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿತ್ತು. ಇದಕ್ಕೆ ಏನು ಹೇಳಿದರು ಎಂದರೆ 24 ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ತಕ್ಷಣ ಮಾಡುವುದಕ್ಕೆ ಆಗುವುದಿಲ್ಲವೆಂದರು. ಹಾಗಾದರೆ ಈ ಹಣ ಏನಾಯಿತು? ಜನರಿಂದ ವಸೂಲಿ ಮಾಡಿದ 533 ಕೋಟಿ ರೂಪಾಯಿ ಇದೆ. ವಸೂಲಿ ಮಾಡುವಂಥ ವ್ಯವಸ್ಥೆಯನ್ನು ಏಕೆ ಮಾಡಲಿಲ್ಲ ಎಂದರೆ ಇದೇನು ಡ್ಯುಯಲ್ ಅಡ್ಮಿನಿಸ್ಟ್ರೇಷನ್ ವ್ಯವಸ್ಥೆ ಇದೆ. ಒಂದು ಕಡೆ ಬಲ್ಕ್ ವಾಟರ್ ಸಪ್ಲೈಯನ್ನು ಬೋರ್ಡ್‌ನವರು ಮಾಡಿದರೆ, ಕಾರ್ಪೊರೇಷನ್‌ನವರು ಡಿಸ್ಟ್ರಿಬ್ಯೂಶನ್ ಸಿಸ್ಟಮ್‌ನ್ನು ಇಟ್ಟುಕೊಂಡು ಎರಡೂ ಇಲಾಖೆಗಳ ಮಧ್ಯೆ ಸಾಮರಸ್ಯ ಇಲ್ಲದ ಕಾರಣ ಈ ತೊಂದರೆಯಾಗಿದೆ. ಇದರಿಂದಾಗಿ ಅಭಾವ ಪರಿಸ್ಥಿತಿ ನಿರ್ಮಾಣವಾಗಿದೆ. ಮೈಸೂರು ನಗರದಲ್ಲಿ ದಿನಬಿಟ್ಟು ದಿನ ನೀರು ಕೊಡುವ ವ್ಯವಸ್ಥೆ ಬಂದಿದೆಯೆಂದರೆ ಇದನ್ನು ಬಹಳ ನೋವಿನಿಂದ ನಾನು ಹೇಳುತ್ತಿದ್ದೇನೆ. ಹಾಗಾದರೆ ನೀರಿನ ಸಪ್ಲೈ ಇಲ್ಲವೇ ಎಂದರೆ ಖಂಡಿತ ಇದೆ. 53 ಎಂ.ಜಿ.ಡಿ. ನೀರು ತರುವಂಥ ಸಂದರ್ಭದಲ್ಲಿ ವ್ಯವಸ್ಥಿತ ರೀತಿಯಲ್ಲಿ ಡಿಸ್ಟ್ರಿಬ್ಯೂಶನ್ ಸಿಸ್ಟಮ್ ಇಲ್ಲ. ಆ ದೃಷ್ಟಿಯಿಂದ ಈ ಡ್ಯೂಯಲ್ ಅಡ್ಮಿನಿಸ್ಟ್ರೇಶನ್ ಸಿಸ್ಟಮ್‌ನ್ನು ದಯವಿಟ್ಟು ತೆಗೆಯಿರಿ. ಇದನ್ನು ನಗರಪಾಲಿಕೆಯಿಂದ ತೆಗೆದು ಬೋರ್ಡ್ ತೆಗೆದುಕೊಳ್ಳಲಿ. ಈ ವ್ಯವಸ್ಥೆಯನ್ನು ಸರಿಮಾಡುವಂಥ ಕೆಲಸವನ್ನು ತಾವು ಮಾಡಬೇಕು. ಇಲ್ಲದೇ ಹೋದರೆ ಇನ್ನು ಬೇಸಿಗೆ ದಿನಗಳು ಬರುತ್ತಿವೆ. ಆ ದಿನಗಳಲ್ಲಿ ಕಷ್ಟದ ಒಂದು ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎನ್ನುವ ವಿಚಾರವನ್ನು ಹೇಳುತ್ತ ದಯವಿಟ್ಟು ಈಗ ವಸೂಲಿ ಮಾಡಬೇಕಾಗಿರುವ ಹಣ ಏನಿದೆ ಅದನ್ನು ತ್ವರಿತವಾಗಿ ವಸೂಲಿ ಮಾಡುವ ದೃಷ್ಟಿಯಿಂದ

ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು. 20 ಸಾವಿರಕ್ಕೂ ಮಿಗಿಲಾದಂಥ ಇಲ್ಲೀಗಲ್ ಕನ್‌ಕ್ಷನ್ಸ್ ಏನಿದೆ ಅದರ ಬಗ್ಗೆ ತಾವು ತೆಗೆದುಕೊಳ್ಳುವಂಥ ಕ್ರಮ ಏನು? ಅದರ ಜೊತೆಯಲ್ಲಿ ನಾನು ಆಗಲೇ ಹೇಳಿದಹಾಗೆ ಕೆ.ಪಿ.ಟಿ.ಸಿ.ಎಲ್.ನಿಂದ ಆಗಬೇಕಾಗಿರತಕ್ಕಂಥ ಎಕ್ಸ್‌ಪ್ರೆಸ್ ಫೀಡರ್ ಏನಿದೆ ಅದನ್ನು ನಿರ್ಮಾಣ ಮಾಡಲಿಕ್ಕೋಸ್ಕರವಾಗಿ ತಾವು ಯಾವರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವಂಥ ವಿಚಾರವನ್ನು ಹೇಳಬೇಕೆಂದು ತಮ್ಮ ಮೂಲಕ ಮಂತ್ರಿಗಳನ್ನು ಕೇಳುತ್ತೇನೆ.

ಛೇರ್ಮನ್: ಚೆಲುವರಾಯಸ್ವಾಮಿ,

(ಗೊಂದಲ)

ಶ್ರೀ ಸಿ.ಭೈರೇಗೌಡ: ಗಮನ ಸೆಳೆಯುವ ಸೂಚನೆಯನ್ನು ನಾವೆಲ್ಲರೂ ರುಜುಮಾಡಿ ಕೊಟ್ಟಿದ್ದೆವು. ಆಗ ಮಾನ್ಯ ಅಧ್ಯಕ್ಷರು ಏನು ಹೇಳಿದರು ಎಂದರೆ ಇದು ವಿಸ್ತಾರವಾಗಿ ಚರ್ಚೆ ನಡೆಯುತ್ತಿದೆ. ಆ ಸಂದರ್ಭದಲ್ಲಿ ಎಲ್ಲರೂ ಮಾತನಾಡಲಿ ಎಂಬ ಮಾತನ್ನು ಮಾನ್ಯ ಅಧಕ್ಷರು ಹೇಳಿದ್ದಾರೆ.

ಛೇರ್ಮನ್: ಎಲ್ಲರಿಗೂ ಅವಕಾಶ ಕೊಡೋಣ. ಈಗ ನಾನು ಅವರನ್ನು ಕರೆದಿದ್ದೇನೆ. ನೀವು ಎಷ್ಟು ಜನ ಮಾತನಾಡುತ್ತೀರೋ ಮಾತನಾಡಿ. ಇದರ ಬಗ್ಗೆ ಜಿಜ್ಞಾಸೆ ಇಲ್ಲ. ಅವರು ಒಂದು ಚೀಟಿ ಕಳಿಸಿದರು. ಆಮೇಲೆ ನಿಮಗೆಲ್ಲ ಅವಕಾಶ ಸಿಗುತ್ತದೆ. ನಿಮ್ಮ ಮುಖಂಡರೇ ಹೇಳಿದರು ಅವರಿಗೆ ಅವಕಾಶ ಕೊಡಿ ಎಂದು.

+ ಶ್ರೀ ಎನ್.ಚೆಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಅದ್ಯಕ್ಷರೇ, ಸಾಕಷ್ಟು ಜನ ಮಾತನಾಡಿ ಸರ್ಕಾರದ ಗಮನ ಸೆಳೆದಿದ್ದಾರೆ. ಆದರೆ ಮಾನ್ಯ ಶಿವಪ್ಪನವರು ಹೇಳಿದಂಥ ಒಂದು ಅಂಶ ಏನಿದೆ ಅದಕ್ಕೆ ನಾನು ಒತ್ತು ಕೊಡುತ್ತೇನೆ. ದಯವಿಟ್ಟು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಫೋರ್ಪಡೆ ಸಾಹೇಬರು ಸ್ವಲ್ಪ ವಿಶೇಷವಾಗಿ ಗಮನಹರಿಸಬೇಕೆಂದು ಕೇಳುತ್ತಾ, ಏನು ಕೆಲವು ಸ್ಕೀಮ್‌ಗಳು ಇವೆ, ಎಂ.ಡಬ್ಲ್ಯೂ.ಎಸ್, ಮತ್ತು ಎನ್.ಆರ್.ಡಬ್ಲ್ಯೂ.ಎಸ್., ಎ.ಆರ್.ಡಬ್ಲ್ಯೂ.ಎಸ್. ಎಂದು ಹೇಳಿ ಹತ್ತಾರು ವರ್ಷಗಳಿಂದ ಈ ಸ್ಕೀಮ್‌ಗಳು ಮುಂದುವರೆದ ಕಾಮಗಾರಿಗಳಾಗಿ ಬರುತ್ತಿವೆ. ಅದು ಎಲೆಕ್ಟ್ರಿಸಿಟಿ ಮತ್ತು ಸಿವಿಲ್ ಎರಡೂ ಕಡೆಯಿಂದ ಸಮಸ್ಯೆಯಾಗಿ ಒಂದು ವರ್ಷಕ್ಕೆ ಕೊನೆಪಕ್ಷ ಮೂರು ತಿಂಗಳಿಗೆ ಒಂದು ಸ್ಕೀಮ್‌ನ್ನು ಮುಗಿಸಬೇಕೆಂದು ವ್ಯವಸ್ಥೆ ಇದೆ. ಎ.ಆರ್.ಡಬ್ಲ್ಯೂ.ಎಸ್. ಅಥವಾ ಎಂ.ಡಬ್ಲ್ಯೂ.ಎಸ್. ಅನ್ನು ಪ್ರಾರಂಭ ಮಾಡಿದರೆ ಮೂರು ತಿಂಗಳಿಗೆ ಮುಗಿಯತಕ್ಕಂಥ ಒಂದು ಕಾಲಾವಕಾಶ ಸಾಕು. ಆದರೂ ಸಹ ಒಂದು ವರ್ಷಕ್ಕೆ ಮುಗಿಯದೇ ಇರತಕ್ಕಂಥ ಎರಡನೇ ವರ್ಷಕ್ಕೆ ಮುಂದುವರೆದ ಕಾಮಗಾರಿಗಳು ಇವೆ. ಕೊನೆಪಕ್ಷ ಎರಡನೇ

ವರ್ಷಕ್ಕಾದರೂ ನೀವು ಅದನ್ನು ಮುಕ್ತಾಯಗೊಳಿಸತಕ್ಕಂಥ ವ್ಯವಸ್ಥೆಯನ್ನು ಮಾಡದಿದ್ದರೆ ಸಮಸ್ಯೆ ಬಗೆಹರಿಯುವುದಿಲ್ಲ. ಹತ್ತಾರು ವರ್ಷಗಳಾದರೂ ಸಹ ಈ ಸ್ಕೀಮ್‌ಗಳಲ್ಲಿ ಮುಂದುವರೆದ ಕಾಮಗಾರಿಗಳಾಗಿ ಬರುತ್ತಿವೆ. ದಯಮಾಡಿ ಈ ರಾಜ್ಯದಲ್ಲಿ ಆರ್.ಡಿ.ಪಿ.ಆರ್.ನಿಂದ ಇಂತಹ ಒಂದು ವರ್ಷ ಅಥವಾ ಎರಡು ವರ್ಷಕ್ಕಿಂತ ಹೆಚ್ಚಿಗೆ ಮುಗಿಯದ ಕಾಮಗಾರಿಗಳ ಪಟ್ಟಿಯನ್ನು ತರಿಸಿ ನೀವು ಏನಾದರೂ ಕಟ್ಟುನಿಟ್ಟಾಗಿ ಈ ಇಲಾಖೆಗೆ ಎರಡು ವರ್ಷಕ್ಕೆ ಮುಂದುವರೆದ ಕಾಮಗಾರಿಗಳು ಇರಬಾರದು ಎಂದು ಹೇಳಬೇಕು. ಯಾವುದೇ ಕೊರತೆ ಇದ್ದರೆ, ಹಣದ ಕೊರತೆ ಇದ್ದರೆ, ಕೆ.ಇ.ಬಿ. ಅಥವಾಬೇರೆ ಸಮಸ್ಯೆ ಇದೆಯಾ ಎಂದು ಕೇಳುವುದಕ್ಕೆ ಕಟ್ಟುನಿಟ್ಟಾದ ನಿರ್ದೇಶನವನ್ನು ನೀವು ಕೊಡದೇ ಇದ್ದರೆ ಪ್ರಯೋಜನ ಇಲ್ಲ. ಈ ಸಮಸ್ಯೆ ಹಾಗೆಯೇ ಉಳಿದಿದ್ದು ನಮ್ಮ ತಾಲ್ಲೂಕಿನಲ್ಲಿ 20 ಕಾಮಗಾರಿಗಳು ಹತ್ತು ವರ್ಷಗಳಿಂದ ಮುಂದುವರೆದ ಕಾಮಗಾರಿಗಳಾಗಿ ಬರುತ್ತಿವೆ. ದಯಮಾಡಿ ಅದನ್ನು ಮುಗಿಸಬೇಕು. ಜೊತೆಗೆ ಕಲವು ಕಡೆ ತುಂಬಾ ಸಮಸ್ಯೆ ಇರತಕ್ಕಂಥ ಗ್ರಾಮಗಳಿಗೆ ಒಂದು ಕ್ಷೇತ್ರಕ್ಕೆ 50 ಬೋರ್‌ವೆಲ್‌ಗಳನ್ನು ಶಾಸಕರ ಕೋರಿಕೆ ಮೇರೆಗೆ ಹಾಕುವುದಕ್ಕೆ ಅನುಮತಿಯನ್ನು ಕೊಟ್ಟು ಅದಕ್ಕೆ ಆದೇಶವನ್ನು ಮಾಡಬೇಕು. ಮತ್ತು ಈ ಮುಂದುವರೆದ ಕಾಮಗಾರಿಗಳನ್ನು ಬೇಗ ಮುಗಿಸಬೇಕೆಂದು ಸರ್ಕಾರದ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಹಾಂತೇಶ್ ಎಸ್.ಕೌಜಲಗಿ (ಬೈಲಹೊಂಗಲ): ಸನ್ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ಈಗಾಗಲೇ ಅನೇಕ ಸದಸ್ಯರುಗಳು ಕುಡಿಯುವ ನೀರಿನ ವಿಚಾರದಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಅನೇಕ ಪ್ರಸ್ತಾಪಗಳನ್ನು ಇಲ್ಲಿ ಹೇಳಿದ್ದಾರೆ. ಬಹುಶಃ ಈ ಸಲ ಬಂದಂಥ ಪರಿಸ್ಥಿತಿ ನಾವು ಹಿಂದೆಂದೂ ಕಂಡಿರಲಿಕ್ಕಿಲ್ಲ. ಮಾನ್ಯ ಅಧ್ಯಕ್ಷರೇ, ನಮ್ಮ ಬೈಲಹೊಂಗಲ ನಗರಕ್ಕೆ ನಾವು ಮಲಪ್ರಭಾದಿಂದ ಕುಡಿಯುವ ನೀರಿನ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಆದರೆ ಇತ್ತೀಚೆಗೆ ಆ ಮಲಪ್ರಭಾ ನದಿ ಸಂಪೂರ್ಣವಾಗಿ ಬತ್ತಿಹೋಗುತ್ತಿರುವುದರಿಂದ ಪ್ರತಿವರ್ಷ ಬೈಲಹೊಂಗಲ ನಗರಕ್ಕೆ ಕುಡಿಯುವ ನೀರಿನ ತೊಂದರೆಯುಂಟಾಗುತ್ತಿದೆ. ಬಹುಶಃ ಈ ಸಲ ನಾವು ವಾರಕ್ಕೆ ಒಂದು ಸಲ ನೀರನ್ನು ಕೊಡುವಂಥ ಪರಿಸ್ಥಿತಿ ನಮ್ಮ ಬೈಲುಹೊಂಗಲ ನಗರದಲ್ಲಿ ಬಂದಿದೆ. ಅದಕ್ಕಾಗಿ ಈಗಾಗಲೇ ನಮ್ಮ ಪುರಸಭೆಯ ಎಲ್ಲ ಸರ್ವಪಕ್ಷಗಳ ಸದಸ್ಯರು ಬಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕಂಡು ಮನವಿಯನ್ನು ಸಹಿತ ಕೊಟ್ಟು ಹೋಗಿದ್ದಾರೆ. ಆದರೆ ಇದುವರೆಗೂ ಸರ್ಕಾರ ಯಾವುದೇ ರೀತಿಯ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಅದಕ್ಕಾಗಿ ನಾನು ಸನ್ಮಾನ್ಯ ಸಚಿವರನ್ನು ಕೇಳುವುದು ಇಷ್ಟೆ. ದಯವಿಟ್ಟು ಈ ರಾಜ್ಯದಾದ್ಯಂತ ಕುಡಿಯುವ ನೀರಿನ ಸಮಸ್ಯೆಯು ತಮ್ಮ ಗಮನಕ್ಕೆ ಬಂದರೂ ಸಹಿತ ಇಲ್ಲಿಯವರೆಗೆ ಯಾವ ಪ್ರದೇಶಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ಹೇಳಬೇಕು. ಕಳೆದ ಎರಡು ತಿಂಗಳಲ್ಲಿ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳುವುದಾದರೆ ಅದಕ್ಕೆ ಸ್ಪಷ್ಟೀಕರಣವನ್ನು

ಕೊಡಬೇಕು. ಇನ್ನು ಈಗಾಗಲೇ ಕುಡಿಯುವ ನೀರಿನ ತೊಂದರೆಯಿದೆಯೆಂದು ಹೇಳಿ ತಾವು ಮನಗಂಡರೆ ತಾವು ಯಾವರೀತಿಯ ಕಾರ್ಯಕ್ರಮ ಕೈಗೊಂಡಿದ್ದೀರಿ ಎಂದು ಹೇಳಬೇಕು. ಮತ್ತೆ ಈಗಾಗಲೇ ಅನೇಕ ಸದಸ್ಯರು ಮಾತನಾಡಿದವರು ಬೋರ್‌ವೆಲ್ ರಿಪೇರಿಯಿಂದ ಆಗುತ್ತಿರುವ ತೊಂದರೆ ಬಗ್ಗೆ ಹೇಳಿದ್ದಾರೆ. ಈಗ ನಾವು ಅನೇಕ ಜಿಲ್ಲೆಗಳಲ್ಲಿ ಅನೇಕ ವಿಧವಾದಂಥ ವ್ಯತ್ಯಾಸವನ್ನು ಮನಗಂಡಿದ್ದೇವೆ. ಆದ್ದರಿಂದ ಈ ಬೋರ್‌ವೆಲ್ ರಿಪೇರಿಯನ್ನು ಜಿಲ್ಲಾಪಂಚಾಯತ್ ಮಾಡುತ್ತಾರೋ, ತಾಲ್ಲೂಕು ಪಂಚಾಯತ್‌ನವರು ಮಾಡುತ್ತಾರೋ ಅಥವಾ ಗ್ರಾಮ ಪಂಚಾಯತಿಯವರು ಮಾಡುತ್ತಾರೋ ಎಂದು ಸ್ಪಷ್ಟೀಕರಣವನ್ನು ಸರ್ಕಾರ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

+ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಮೊದಲು ಕೆರೆಕಟ್ಟೆಗಳಿಂದ ನೀರು ತಂದು ಬಳಸುತ್ತಿದ್ದರು. ಅದಾದಮೇಲೆ ತೋಡು ಬಾವಿಗಳಿಂದ ನೀರು ಬಳಸುತ್ತಿದ್ದರು. ಆದರೆ ಈಗ ಕೆರೆಕಟ್ಟೆಗಳಲ್ಲೂ ನೀರಿಲ್ಲ, ತೋಡು ಬಾವಿಗಳೂ ಬತ್ತಿಹೋಗಿವೆ. ಇನ್ನು ಉಳಿದಿರುವಂಥ ಸಣ್ಣ ನೀರಾವರಿ ಇಲಾಖೆಗೆ ಸೇರಿದಂಥ 30-35 ಕೆರೆಗಳು ಕೂಡ ಸಂಪೂರ್ಣ ಬತ್ತಿಹೋಗಿವೆ. ಈಗ ಉಳಿದಿರುವಂಥಾದ್ದು ಕೊಳವೆ ಬಾವಿಗಳ ಮುಖಾಂತರ ನೀರನ್ನು ಬಳಸತಕ್ಕಂಥ ಒಂದು ವ್ಯವಸ್ಥೆ ಬಿಟ್ಟರೆ ಕುಡಿಯುವ ನೀರಿಗೆ ನಮ್ಮ ತಾಲ್ಲೂಕು ಮತ್ತು ಚಾಮರಾಜನಗರ ಜಿಲ್ಲೆ ಬೇರೆ ಯಾವುದೇ ನದಿನೀರಿನ ಸೌಲಭ್ಯವಾಗಲೀ, ಮತ್ತೊಂದಾಗಲೀ ಇಲ್ಲದೇ ಇರುವ ಬರಡು ಪ್ರದೇಶದಲ್ಲಿ ಇದ್ದೇವೆ. ಇತ್ತೀಚೆಗೆ ಹೊಸ ಸರ್ಕಾರ ಬಂದಮೇಲೆ ಒಂದು ಸಾವಿರ ಕುಡಿಯುವ ನೀರಿನ ಟ್ಯಾಂಕ್, ಒಂದು ಸಾವಿರ ಮಿನಿ ವಾಟರ್ ಟ್ಯಾಂಕ್‌ಗಳನ್ನು ನಿರ್ಮಿಸಬೇಕೆಂದು ಒಂದು ಬೃಹತ್ ಯೋಜನೆಯನ್ನು ಕೈಗೊಂಡಿದೆಯೆಂದು ಇಲಾಖೆಯ ಮುಖಾಂತರ ತಿಳಿದುಕೊಂಡಿದ್ದೇನೆ. ಇದೇ ರೀತಿ ಎಲ್ಲ ಜಿಲ್ಲೆಗಳಿಗೂ ಕೂಡ ಅವರು ಕಾರ್ಯಕ್ರಮಗಳನ್ನು ಕೇಳಿದ್ದಾರೆ. ಎಲ್ಲೆಲ್ಲಿ ಕುಡಿಯುವ ನೀರಿನ ಟ್ಯಾಂಕ್ ಮಾಡಬೇಕು ಮತ್ತು ಮಿನಿವಾಟರ್ ಸಪ್ಲೈ ಮಾಡಬೇಕು ಎಂದು ಹೊಸ ಸ್ಕೀಮ್‌ಗಳನ್ನು ಮಾಡಬೇಕೆಂದು ಸ್ಪಷ್ಟವಾದ ನಿರ್ದೇಶನವನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಕೊಟ್ಟಿದ್ದಾರೆ. ಕುಡಿಯುವ ನೀರಿನ ಟ್ಯಾಂಕ್ ಕಟ್ಟಬಹುದು. ಆದರೆ ಅದಕ್ಕೆ ಬೇಕಾದಂಥ ವಿದ್ಯುತ್ ಸೌಕರ್ಯವನ್ನು ಕೊಡತಕ್ಕಂಥ ವ್ಯವಸ್ಥೆ ಅಷ್ಟು ಸುಲಭವಾಗಿ ಆಗುವಂಥ ಕೆಲಸ ಅಲ್ಲ. ಆದ್ದರಿಂದ ನೀವು ವಿದ್ಯುತ್ ಸಂಪರ್ಕ ಹಾಕತಕ್ಕಂಥಾದ್ದನ್ನು ಮೊದಲು ಖಾತ್ರಿ ಮಾಡಿಕೊಂಡು ಅನಂತರ ಕುಡಿಯುವ ನೀರಿನ ಯೋಜನೆಯನ್ನು ಕೈಗೆ ತೆಗೆದುಕೊಳ್ಳುವುದು ಬಹಳ ಸೂಕ್ತ. ಇಲ್ಲದೇ ಹೋದರೆ ಟ್ಯಾಂಕ್‌ಗಳಿಗೆ ಯಾರಿಗೋ ಕಾಂಟ್ರಾಕ್ಟ್ ಕೊಡುತ್ತಾರೆ. ಅವನು ಟ್ಯಾಂಕ್ ಕೆಲಸ ಮಾಡಿ ಪೈಪ್ ಹಾಕಿಬಿಡುತ್ತಾನೆ. ಆದರೆ ವಿದ್ಯುತ್ ಸಂಪರ್ಕ ಲಭ್ಯವಾಗದೇನೆ ಈ ಯೋಜನೆ ಬಳಕೆಗೆ ಬರುವುದಿಲ್ಲ. ಈ ಒಂದು ದೃಷ್ಟಿಯಿಂದ ಅದನ್ನು ಸ್ವಲ್ಪ ಸಡಿಲಗೊಳಿಸಿ. ಈಗೇನು ಚಾಮರಾಜನಗರ ಜಿಲ್ಲೆಗೆ

4 ಕೋಟಿ 30 ಲಕ್ಷ ರೂಪಾಯಿ ಯೋಜನೆ ಕೊಡಬೇಕೆಂದು ಕೇಳಿದ್ದೇವೆ. ನಮ್ಮ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೆ ಸಾಕಷ್ಟು ಹೊಸ ಯೋಜನೆಗಳನ್ನು ಮಾಡದೆ ಹಿಂದೆ ಕೆಲವು ಬೇರೆಬೇರೆ ಯೋಜನೆಗಳ ಮುಖಾಂತರ, ಲೋಕಸಭಾ ನಿಧಿಯಿಂದ ಅಥವಾ ಹಿಂದೆ ಆಗ್ಮೆಂಟೇಶನ್ ಮುಂತಾದ ಯೋಜನೆಗಳಿಂದ ಮೂರು ಲಕ್ಷ-ನಾಲ್ಕು ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಯೋಜನೆಗೆ ಮಂಜೂರು ಮಾಡಿ ಉಳಿದ ಹಣವನ್ನು ಜಿಲ್ಲಾ ಪಂಚಾಯತಿಯಿಂದ ಭರಿಸಿ ಎಂದು ಹೇಳಿ ಕಳೆದ ಎರಡು ವರ್ಷಗಳಿಂದ ಮಂಜೂರಾತಿಗಳನ್ನು ನೀಡಿದ್ದಾರೆ. ಅಂಥಾದ್ದೆಲ್ಲ ಅರ್ಧಂಬರ್ಧ ಕೆಲಸಕಾರ್ಯವಾಗಿ ಅರ್ಧಕ್ಕೇ ನಿಂತಿರುವ ಯೋಜನೆಗಳು ಬಹಳಷ್ಟು ಇವೆ. ಅವನ್ನು ಕೂಡ ಈ ಯೋಜನೆಯಲ್ಲಿ ಕಾರ್ಯಗತ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಾ, ಬರ ಪರಿಹಾರದಿಂದ ಕುಡಿಯುವ ನೀರಿಗಾಗಿ ನಮ್ಮ ಕಂದಾಯ ಸಚಿವರು 20 ಲಕ್ಷ ರೂಪಾಯಿಗಳನ್ನು ನಮ್ಮ ಜಿಲ್ಲೆಗೆ ಬಿಡುಗಡೆ ಮಾಡಿದ್ದಾರೆ. ಹೇಳಿ ಕೇಳಿ ನಮ್ಮ ನಾಲ್ಕು ತಾಲ್ಲೂಕುಗಳು ಗಡಿಪ್ರದೇಶದಲ್ಲಿರುವ ತಾಲ್ಲೂಕುಗಳು. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿ ಇದೆ. ನಾನು ಆಗಲೇ ಹೇಳಿದಹಾಗೆ ಕೊಳವೆಬಾವಿಗಳನ್ನು ಬಿಟ್ಟರೆ ಬೇರೆ ಮಾರ್ಗದಿಂದ ನೀರು ಬಳಕೆ ಮಾಡುವಂಥ ಪರಿಸ್ಥಿತಿ ಇಲ್ಲ. ಅಂತಹ ಕಡೆ ಹೆಚ್ಚಿನ ಅನುದಾನವನ್ನು ನಮ್ಮ ಕಂದಾಯ ಸಚಿವರು ಕೊಡಬೇಕು. ಕೆಲವು ಜಿಲ್ಲೆಗಳಿಗೆ ಎರಡು ಕೋಟಿ, ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಗೆ ಕೇವಲ 20 ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದಾರೆ, ಅದನ್ನು ಹೆಚ್ಚಿಸಬೇಕು. ಮತ್ತೆ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಈಗಾಗಲೇ 92ರಿಂದಲೂ ಇನ್ನೂ ಮುಕ್ತಾಯವಾಗದೇ ಇರುವ ಯೋಜನೆಗಳನ್ನು ಸುಮಾರು ಗ್ರಾಮಗಳಲ್ಲಿ ತೆಗೆದುಕೊಂಡಿದ್ದಾರೆ ಆ ಯೋಜನೆಗೆ ಒಳಪಟ್ಟಿರುವಂಥ ಗ್ರಾಮಗಳಲ್ಲಿ, ಜಿಲ್ಲಾಪರಿಷತ್ ಮುಖಾಂತರ ಕೊಳವೆ ಬಾವಿ ಹಾಕಿಸುವುದಾಗಲೀ ಅಥವಾ ಟ್ಯಾಂಕನ್ನು ದುರಸ್ತಿ ಮಾಡುವುದಾಗಲೀ ಕೈಗೊಳ್ಳುವುದಕ್ಕೆ ಅವಕಾಶ ಇಲ್ಲ. ಇದರಿಂದಾಗಿ ಆ ಯೋಜನೆಗಳು ಮುಗಿಯುವ ಹಾಗೆ ಇಲ್ಲ, ಜಿಲ್ಲಾ ಪರಿಷತ್ತಿನವರು ಮಾಡುವ ಹಾಗೆ ಇಲ್ಲ. ಅದಕ್ಕಾಗಿ ವಿಶ್ವಬ್ಯಾಂಕ್ ಯೋಜನೆಯನ್ನು ತೆಗೆದುಕೊಂಡು, ಪೂರ್ಣಗೊಳ್ಳದೇ ಇರತಕ್ಕ ಗ್ರಾಮಗಳು ಎಲ್ಲಿವೆ, ಅವುಗಳನ್ನು ಪೂರ್ಣ ಮಾಡಬೇಕು. ವಿಶೇಷವಾಗಿ ಹೆಚ್ಚು ಹೆಚ್ಚು ಕೊಳವೆ ಬಾವಿಗಳನ್ನು ತೆಗೆಸುವ ಬದಲು ಹಿಂದೆ ತೋಡಿರುವಂಥ ಕೊಳವೆಬಾವಿಗಳಲ್ಲಿ 150-200 ಅಡಿಗಳಿಗೆ ನೀರು ಸಿಗುತ್ತಾ ಇತ್ತು. ಈಗ ಅಂತರ್‌ಜಲ ಮಟ್ಟ ಕೆಳಕ್ಕೆ ಇಳಿದಿದೆ. 300-350 ಅಡಿಗಳಿಗೆ ನೀರು ಸಿಗತಕ್ಕ ಸಂದರ್ಭಗಳು ಇರುತ್ತವೆ. ಅದಕ್ಕಾಗಿ ನೀವು ರೀ ಡ್ರಿಲ್ ಮಾಡತಕ್ಕ ಯೋಜನೆಯನ್ನು ನಮ್ಮ ಗ್ರಾಮೀಣ ಇಲಾಖೆಯವರು ಹಾಕಿಕೊಳ್ಳಬೇಕು. ಇದರಿಂದ ಹೊಸದಾಗಿ ಹೆಚ್ಚು ಕೊಳವೆ ತೆಗೆಯುವ ಬದಲು ಇರುವಂಥ ಕೊಳವೆ ಬಾವಿಗಳನ್ನು ಡೀಪನಿಂಗ್ ಮಾಡುವುದಕ್ಕೆ ಒಂದು ವಿಶೇಷವಾದ ಕಾರ್ಯಕ್ರಮ ಹಾಕಿಕೊಂಡರೆ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದೆಂದು ಹೇಳುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ಈಗ ಏನು

ಕುಡಿಯುವ ನೀರಿನ ಟ್ಯಾಂಕುಗಳಿವೆ, ಅಲ್ಲಿಗೆ ವಿದ್ಯುತ್ ಸೌಕರ್ಯ ಒದಗಿಸುವುದಕ್ಕೆ ವಿಶೇಷವಾದ ಒಂದೊಂದು ಟಿ.ಸಿ. ಎಲ್ಲೆಲ್ಲಿ ವಾಟರ್ ಸಪ್ಲೈ ಸ್ಕೀಮ್ ಇದೆ, ಅಲ್ಲಿಗೆ 25 ಕೆ.ವಿ.ಯ ಟಿ.ಸಿ.ಯನ್ನು ಅಳವಡಿಸಿದರೆ ನೀರನ್ನು ಟ್ಯಾಂಕಿಗೆ ಭರ್ತಿ ಮಾಡಿ ಗ್ರಾಮಾಂತರ ಜನಗಳಿಗೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಸರ್ಕಾರದವರು ಮಾಡಬೇಕು. ಗ್ರಾಮಪಂಚಾಯ್ತಿಗಳಿಗೆ ಸಬ್ಸಿಡಿ ದರದಲ್ಲಿ ಜನರೇಟರನ್ನು ಕೊಡಿಸತಕ್ಕ ವ್ಯವಸ್ಥೆಯನ್ನು ಮಾಡಿದರೆ, ಕರಂಟ್ ಇಲ್ಲದಿರತಕ್ಕ ಸಂದರ್ಭದಲ್ಲೂ ನೀರನ್ನು ಬಳಕೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದರ ಬಗ್ಗೆಯೂ ಗ್ರಾಮೀಣಾಭಿವೃದ್ಧಿ ಸಚಿವರು ಯೋಚನೆ ಮಾಡಬೇಕು. ಕೆಟ್ಟಿರುವ ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸುವುದು ತಾಲ್ಲೂಕು ಪಂಚಾಯ್ತಿಗಳಿಗೆ ಇದೆ. ವಾಟರ್ ಟ್ಯಾಂಕ್ ಮೋಟಾರು ಕೆಟ್ಟು ಹೋದರೆ, ಅದರ ರಿಪೇರಿಯನ್ನು ಗ್ರಾಮ ಪಂಚಾಯಿತಿಯವರು ಮಾಡಬೇಕೆಂದು ಹೇಳುತ್ತಾರೆ. ಗ್ರಾಮ ಪಂಚಾಯ್ತಿಯಲ್ಲಿ ಯಾವುದೇ ಅನುದಾನ ಇಲ್ಲದಿರುವುದರಿಂದ ಯಾವ ಮೋಟಾರುಗಳೂ ರಿಪೇರಿಯಾಗುತ್ತಾ ಇಲ್ಲ. ಸ್ಪೇರ್ ಮೋಟಾರುಗಳನ್ನು ತೆಗೆದುಕೊಳ್ಳುವುದಕ್ಕೂ ಸಾಕಷ್ಟು ಹಣ ಇಲ್ಲ. ಅದರಿಂದ ತಾತ್ಕಾಲಿಕವಾಗಿ, ಜಿಲ್ಲಾ ಪಂಚಾಯ್ತಿ ವಿಭಾಗ ಏನಿದೆ ಅವರ ಮುಖಾಂತರ ಇವುಗಳನ್ನು ನಿರ್ವಹಿಸುವ ಹಾಗೆ ರಾಜ್ಯಾದ್ಯಂತ ಮಾಡಬೇಕೆಂದು ಹೇಳುತ್ತೇನೆ. ನಗರ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಸುಮಾರು ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ ನಡೆಯುತ್ತಾ ಇದೆ. ಉದಾಹರಣೆಗೆ ನಮ್ಮ ಗುಂಡ್ಲುಪೇಟೆಯಲ್ಲಿ, ರಾಜ್ಯದಲ್ಲೇ ಬೃಹತ್ತಾದಂಥ ತುಂಬಾ ಉದ್ದವಾದ 40 ಕಿಲೋಮೀಟರ್ ಪೈಪ್‌ಲೈನ್ ಇದೆ. ಈ ಯೋಜನೆ ಮಧ್ಯದಲ್ಲಿ ಸುಮಾರು 30-35 ಹಳ್ಳಿಗಳಿಗೆ ಕುಡಿಯುವ ನೀರು ವ್ಯವಸ್ಥೆಯನ್ನು ಮಾಡಬೇಕೆಂದು ಈ ಯೋಜನೆಯಲ್ಲಿದೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಪ್ರಾರಂಭವಾದ ಈ ಯೋಜನೆ ನಾವು ಕಳೆದ ಅವಧಿಯಲ್ಲಿ ಸಾಕಷ್ಟು ಪ್ರಯತ್ನ ಮಾಡಿ, ಪ್ರೋಗ್ರೆಸ್ ತಂದಿದ್ದೇವೆ. ಕಳೆದ 6 ತಿಂಗಳಿಂದ ಏಕೋ ನಾವು ವಿರೋಧ ಪಕ್ಷಕ್ಕೆ ಬಂದತಕ್ಷಣ, ಅಧಿಕಾರಿಗಳ ನಿರ್ಲಕ್ಷ್ಯ ಶುರುವಾಗಿ ಆ ಯೋಜನೆ ಪೂರ್ಣವಾಗುತ್ತಿಲ್ಲ. ನಾವು ಸಾಕಷ್ಟು ಪ್ರಗತಿ ಮಾಡಿಸಿದ್ದು, 30-35 ಕಿಲೋಮೀಟರ್ ಪೈಪ್‌ಲೈನ್ ಹಾಕಿಸಿದ್ದೇವೆ. ಆದರೆ, ಕಳೆದ 6 ತಿಂಗಳಿಂದ ಅದನ್ನು ಚಾಲೂ ಮಾಡಲಿಕ್ಕೆ ಸಾಧ್ಯವಾಗುತ್ತಾ ಇಲ್ಲ, ಕುಂಠಿತವಾಗಿದೆ. ಅದನ್ನು ಪೂರ್ಣಗೊಳಿಸಬೇಕು. ಆ ಕಾಯಿದೆಯಲ್ಲಿ ಒಂದು ಸಣ್ಣ ತಿದ್ದುಪಡಿ ಮಾಡಿದರೆ, ಒಳ್ಳೆಯದೆಂದು ನಾನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಹೇಳುತ್ತೇನೆ. ತಮಿಳುನಾಡಿನಲ್ಲಿ ವಾಟರ್ ಸಪ್ಲೈ ಬೋರ್ಡ್ ಎಂದು ಇದೆ. ನಮ್ಮಲ್ಲಿ ಅರ್ಬನ್ ವಾಟರ್ ಸಪ್ಲೈ ಎಂದು ಮಾಡಿದ್ದಾರೆ. ಇದರಿಂದ ಕೇವಲ ನಗರ ಪ್ರದೇಶಕ್ಕೆ ಮಾತ್ರ ನೀರು ಕೊಡಲು ಸಾಧ್ಯ. ಅಥವಾ ಅದರ ಹಿಂದುಗಡೆ ಸಿಗತಕ್ಕ ಗ್ರಾಮಗಳಿಗೂ ಕೊಡಬಹುದು. ಆದರೆ, ಮುಂದೆ 5 ಸಾವಿರ. 10 ಸಾವಿರ ಜನಸಂಖ್ಯೆ ಇರತಕ್ಕ ಗ್ರಾಮಗಳಿಗೆ ಈ ಯೋಜನೆಯ ಲಾಭ ಪಡೆಯಲು

ಅವಕಾಶವಾಗುವಂತೆ ಮಾರ್ಪಾಟು ಮಾಡಿದರೆ ಒಳ್ಳೆಯದಾಗುತ್ತದೆ. ನಮ್ಮಲ್ಲಿ ಅಂಗಳ ಎಂಬ ಒಂದು ಊರು ಇದೆ. ಇಲ್ಲಿಗೆ ಯಾರೂ ನಮ್ಮ ತಾಲ್ಲೂಕಿನಲ್ಲಿ ಹೆಣ್ಣು ಕೊಡುವುದಿಲ್ಲ. ಏಕೆಂದರೆ, ಅಲ್ಲಿ ನೀರಿನ ಸಮಸ್ಯೆಯಾಗಿ ನೀರಿಗಾಗಿ 3-4 ಕಿಲೋಮೀಟರ್ ದೂರ ಇರತಕ್ಕ ಬಾವಿಗೆ ಹೋಗಬೇಕಾಗಿದೆ. ತಾವೂ ಕೂಡ ದಿವಂಗತ ನಜೀರ್‌ಸಾಬ್‌ರವರ ಜೊತೆ ಅನೇಕಸಾರಿ ನಮ್ಮ ತಾಲ್ಲೂಕಿಗೆ ಬಂದು, ನಮ್ಮ ಸಮಸ್ಯೆಗಳನ್ನೆಲ್ಲಾ ನೋಡಿದ್ದೀರಿ. ಆದ್ದರಿಂದ, ನಾನು ಹೇಳಿರತಕ್ಕ ವಿಚಾರಗಳಿಗೆ ಗ್ರಾಮೀಣಾಭಿವೃದ್ಧಿ ಸಚಿವರು ಗಮನಹರಿಸುತ್ತಾರೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಲ್.ಬಿ.ಅಮರೇಗೌಡ(ಲಿಂಗಸುಗೂರು): ಈಗಾಗಲೇ ಅನೇಕ ಸದಸ್ಯರು ಈ ಕುಡಿಯುವ ನೀರಿನ ಬಗ್ಗೆ, ರಾಜ್ಯದಾದ್ಯಂತ ಇರತಕ್ಕ ತೊಂದರೆಯನ್ನು ಹೇಳಿದ್ದಾರೆ ಮತ್ತು ಈ ವಿಷಯವಾಗಿ ವಿರೋಧ ಪಕ್ಷದವರು ಮಾತ್ರ ಮಾತನಾಡುತ್ತಿದ್ದಾರೆ. ಆಡಳಿತ ಪಕ್ಷದವರಿಗೆ ಬಹುಶಃ ಈ ಕುಡಿಯುವ ನೀರಿನ ತೊಂದರೆ ಇರಲಿಕ್ಕಿಲ್ಲವೆಂದು ನನಗನಿಸುತ್ತಾ ಇದೆ. ಏಕೆಂದರೆ, ನಾವೇ ಇದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನಾಡತಕ್ಕ ಸಂದರ್ಭದಲ್ಲಿ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಒಂದು ಸಾವಿರ ಗ್ರಾಮಗಳು ಇವೆ. ನಮ್ಮ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು 696 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆಯೆಂಬ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದು ಈ ಸದನಕ್ಕೂ ಬಂದಿದೆ. ಈಗಾಗಲೇ ಅದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಬರತಕ್ಕ ದೊಡ್ಡ ದೊಡ್ಡ ಗ್ರಾಮಗಳಾದ ಮಸ್ಕಿ, ಹುನಕುಂಟೆ ಮುಂತಾದ 10-15 ಸಾವಿರ ಜನಸಂಖ್ಯೆಯುಳ್ಳಂಥ ಗ್ರಾಮಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆದರೂ ಕೂಡ ನೀರು ಬರದೇ ಬಹಳಷ್ಟು ತೊಂದರೆಯಾಗಿದೆ. ಈ ಕುಡಿಯುವ ನೀರನ್ನು ಸಾಗಾಣಿಕೆ ಮಾಡುವ ಮೂಲಕ ಪೂರೈಸತಕ್ಕ ವ್ಯವಸ್ಥೆ ಮಾಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಈ ಬೋರ್‌ವೆಲ್ ರಿಪೇರಿ ಮಾಡತಕ್ಕ ಸಂದರ್ಭ ಏನಿದೆ, ಇದರ ಬಗ್ಗೆ ಸಮಗ್ರವಾದ ಏಕರೂಪವಾದ ಕಾನೂನು ನಮ್ಮ ರಾಜ್ಯದಲ್ಲಿ ಇಲ್ಲ. ಯಾರು ಮಾಡುತ್ತಾರೆಂಬುದೇ ಸಮಸ್ಯೆಯಾಗಿದೆ. ಕೆಲವು ಕಡೆ ಗ್ರಾಮಪಂಚಾಯ್ತಿಯವರು ಮಾಡುತ್ತಾರೆ, ಕೆಲವು ಕಡೆ ಜಿಲ್ಲಾ ಪಂಚಾಯ್ತಿಯವರು ಮಾಡುತ್ತಾರೆ. ಕೆಲವು ಕಡೆ ತಾಲ್ಲೂಕು ಪಂಚಾಯ್ತಿಯವರು ಮಾಡುತ್ತಾರೆ ಈ ರಿಪೇರಿ ಕೆಲಸ ಜಿಲ್ಲಾಪಂಚಾಯ್ತಿಯಿಂದಲೇ ಆಗಬೇಕೆಂದು ನಾವು ಹಿಂದೆಯೂ ಹೇಳಿದ್ದೇವೆ. ಈಗಲೂ ಅದನ್ನು ಪುನರುಚ್ಚಾರ ಮಾಡುತ್ತಿದ್ದೇವೆ. ದಯವಿಟ್ಟು ಸಚಿವರು ಇದರ ಬಗ್ಗೆ ನಿಖರವಾಗಿ ಹೇಳಬೇಕು ಏಕೆಂದರೆ, ಹೊಸ ಯೋಜನೆಗಳನ್ನು ಮಾಡತಕ್ಕಂಥವರು ಜಿಲ್ಲಾ ಪಂಚಾಯ್ತಿಯವರು. ರಿಪೇರಿ ಮಾಡಲು ವರ್ಷಕ್ಕೆ 2 ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ಅದು ಕುಡಿಯುವ ನೀರಿನ ಸರಬರಾಜು ಯೋಜನೆ ಇರಬಹುದು ಅಥವಾ ಎನ್.ಆರ್.ಡಬ್ಲ್ಯು.ಎಸ್.ಇರಬಹುದು. ಈ ಎರಡು ಸಾವಿರ

ರೂಪಾಯಿಗಳಲ್ಲಿ ಒಂದು ವರ್ಷದವರೆಗೆ ನಿರ್ವಹಣೆ ಮಾಡಲು ಆಗುವುದಿಲ್ಲ. ಆದಕಾರಣ ಜಿಲ್ಲಾ ಪಂಚಾಯ್ತಿಗೇ ಈ ಯೋಜನೆಯನ್ನು ವಹಿಸಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ವಿಶ್ವಬ್ಯಾಂಕ್ ಯೋಜನೆಯಲ್ಲಿ ಮೊದಲನೇ ಹಂತದ ಯೋಜನೆ ಏನಿದೆ, ಈಗಾಗಲೇ ಅರಗ ಜ್ಞಾನೇಂದ್ರರವರು ಹೇಳಿದಹಾಗೆ, ಆ ಯೋಜನೆಯನ್ನು ಆಂಧ್ರ ಕಾಂಟ್ರಾಕ್ಟರಿಗೆ ಕೊಟ್ಟಿದ್ದರಿಂದ ಇದುವರೆಗೆ ನಮ್ಮ ತಾಲ್ಲೂಕಿನಲ್ಲಿ ಮಾತ್ರ ಇಂಪ್ಲಿಮೆಂಟ್ ಆಗಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಯಲ್ಲಿ ಈಗಾಗಲೇ ಎರಡನೇ ಹಂತದ ಯೋಜನೆಯ ಕಾರ್ಯವನ್ನು ಪ್ರಾರಂಭ ಮಾಡಲಾಗಿದೆ. ಅದೇ ರೀತಿಯಲ್ಲಿ ಆದಷ್ಟು ತೀವ್ರ ಕ್ರಮ ಕೈಗೊಂಡು ಆ ವಿಶ್ವಬ್ಯಾಂಕ್ ಯೋಜನೆಯನ್ನು ಪೂರೈಸತಕ್ಕ ಕೆಲಸವನ್ನು ಮಾಡಬೇಕೆಂದು ಹೇಳಿ ಮಾನ್ಯ ಸಚಿವರಲ್ಲಿ ತಿಳಿಸುತ್ತೇನೆ. ಕುಡಿಯುವ ನೀರಿನ ಬಗ್ಗೆ ಈಗಾಗಲೇ ಅವರು ಹೇಳಿದರು, ವರ್ಷಕ್ಕೆ ಇಷ್ಟು ಕೋಟಿ ಕೊಡುತ್ತೇವೆ, ಅದರಲ್ಲಿ ಸೆಂಟ್ರಲ್ ಸರ್ಕಾರ್ ಮತ್ತು ಸ್ಟೇಟ್ ಸರ್ಕಾರ್ ಇಷ್ಟು ಎಂದು ಹೇಳಿದ್ದಾರೆ. ಆದರೆ, ವಿಶೇಷವಾಗಿ ಬೇಸಿಗೆ ಕಾಲಕ್ಕೆ ಏನು ಯೋಜನೆಯನ್ನು ಹಾಕಿಕೊಂಡಿದ್ದಾರೆ, ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂಬುದನ್ನು ಜಿಲ್ಲಾವಾರು ಸ್ಪಷ್ಟವಾಗಿ ತಿಳಿಸಬೇಕು. ಅದರಲ್ಲೂ ಉತ್ತರ ಕರ್ನಾಟಕ ಭಾಗದ ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇರುವುದರಿಂದ ಹೆಚ್ಚು ಅನುಕೂಲವನ್ನು ಮಾಡಬೇಕೆಂದು ಸಚಿವರಲ್ಲಿ ಕೇಳಿಕೊಂಡು, ಅವಕಾಶವನ್ನು ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಕರಡಿ ಸಂಗಣ್ಣ(ಕೊಪ್ಪಳ): ಸನ್ಮಾನ್ಯ ಅಧ್ಯಕ್ಷರೇ, ಈ ಕೊಪ್ಪಳ ಜಿಲ್ಲೆಯಲ್ಲಿ ಕೂಡ ಕುಡಿಯುವ ನೀರಿನ ಅಭಾವ ತಲೆದೋರಿದೆ. ನಮ್ಮ ಜಿಲ್ಲೆಯಲ್ಲಿ ಒಂದು ಕೋಟಿ ರೂಪಾಯಿ ಹಣವನ್ನು ಜಿಲ್ಲಾಧಿಕಾರಿಗಳಿಂದ ಬಿಡುಗಡೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಐದು ಕ್ಷೇತ್ರಗಳು ಬರುತ್ತವೆ. ನಾವು ಒಂದೊಂದು ಕ್ಷೇತ್ರಕ್ಕೆ 20 ಬೋರ್‌ವೆಲ್‌ಗಳನ್ನು ಪ್ರಪೋಸ್ ಮಾಡಿದ್ದೇವೆ. ಆದರೆ, ಬೋರ್‌ವೆಲ್ ಮುಖಾಂತರವೇ ನಾವು ನೀರನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗಾಗಿ ಎಂ.ಡಬ್ಲ್ಯು.ಎಸ್. ಮತ್ತು ಎನ್.ಆರ್.ಡಬ್ಲ್ಯು.ಎಸ್.ನಲ್ಲಿರತಕ್ಕ ಯೋಜನೆಗಳು, ಇವತ್ತು ಬೋರ್‌ವೆಲ್ ಡ್ರೈ ಆಗಿರುವುದರಿಂದ ಮತ್ತೊಂದು ಸೋರ್ಸ್ ಹುಡುಕಿ ಮಾಡುವುದಾದರೆ, ಅವರು ನೀರು ಕೊಡಲಿಕ್ಕೇ ಆಗುವುದಿಲ್ಲ. ಅದಕ್ಕೋಸ್ಕರ ಮಾನ್ಯಮಂತ್ರಿಗಳು ಇದಕ್ಕಾಗಿ ಒಂದು ವಿಶೇಷ ಯೋಜನೆಯನ್ನು ರೂಪಿಸುತ್ತಾರೆಯೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಕೆಲವು ಗ್ರಾಮಗಳಲ್ಲಿ, ಸುಮಾರು 6-7 ವರ್ಷಗಳಿಂದ ರಾಜೀವ್‌ಗಾಂಧಿ ಟೆಕ್ನಾಲಜಿ ಯೋಜನೆ ಕೆಳಗಡೆ ಯಲಬುರ್ಗಾ ಮತ್ತು ಕೊಪ್ಪಳದಲ್ಲಿ 34 ಸಮಸ್ಯಾತ್ಮಕ ಹಳ್ಳಿಗಳನ್ನು ಗುರುತಿಸಿ, ಆ ಯೋಜನೆ ಮಂಜೂರಾಗಿದ್ದರೂ ಕೂಡ, ಕಾರ್ಯಾರಂಭಗೊಂಡಿಲ್ಲ. ಅಲ್ಲಿ ಸಿಹಿ ನೀರು ಕೂಡ ಸಿಕ್ಕುತ್ತಾ ಇಲ್ಲ. ಇವತ್ತು ಬರೀ ಸಾಗಾಣಿಕೆ ಮೂಲಕ ನೀರು ಕೊಡುವುದಾದರೆ ಮುಂಡರಗಿಯಿಂದ ಗುಡಿಗೇರ,

ಬುಳ್ಳಾಪುರ ಮತ್ತು ನವಿಲೂರು ಸುಮಾರು 10- 10 ಸಾವಿರ ಜನಸಂಖ್ಯೆ ಇರತಕ್ಕ ಗ್ರಾಮಗಳಲ್ಲಿ ಬಸ್ಸಿನಲ್ಲಿ ಕೊಡ ಇಟ್ಟುಕೊಂಡು ನೀರು ತರತಕ್ಕ ವ್ಯವಸ್ಥೆ ಇದೆ. ಅದಕ್ಕೋಸ್ಕರ, ಈಗೇನು ಸ್ಕೀಮ್ ಮಂಜೂರಾಗಿವೆ, ಅದನ್ನು ಖಾಯಂ ಆಗಿ ಮಾಡಬೇಕು. ಇವತ್ತು ಕೇಂದ್ರ ಸರ್ಕಾರದಿಂದ ಹಣ ಕೂಡ ಬಿಡುಗಡೆಯಾಗಿದೆ. ಅದನ್ನು ಕೈಗೆತ್ತಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಕೊಪ್ಪಳ ನಗರದ ಪರಿಸ್ಥಿತಿ ಏನಾಗಿದೆ ಎಂದರೆ, ಕಳೆದ ಸಾಲಿನಲ್ಲಿ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಬಚ್ಚೇಗೌಡರನ್ನು ಈ ಸಂದರ್ಭದಲ್ಲಿ ನಾವು ನೆನೆಸಬೇಕಾಗುತ್ತದೆ. ನಾವು ಕೊಪ್ಪಳಕ್ಕೆ ನೀರನ್ನು ತಂದೆವು. ಆದರೆ, ಡಿಸ್ಟ್ರಿಬ್ಯೂಷನ್ ಲೈನ್, ಹಿಂದೆ ಆ ಎಸ್ಟಿಮೇಟ್‌ನಲ್ಲಿ ಇನ್‌ಕ್ಲೂಡ್ ಆಗಿಲ್ಲ. ನಾನು ನಗರಾಭಿವೃದ್ಧಿ ಮಂತ್ರಿಗಳಾದ ಚಿಮ್ಮನಕಟ್ಟಿಯವರನ್ನು ಭೇಟಿಯಾಗಿದ್ದೇನೆ. ಅವರು ಒರಿಜಿನಲ್ ಎಸ್ಟಿಮೇಟಿನಲ್ಲಿ ಇಲ್ಲ, ಅದಕ್ಕೇ ನಾವೇನೂ ಮಾಡುವುದಕ್ಕಾಗುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಈಗ 4 ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ತಯಾರು ಮಾಡಿ, ಬೋರ್ಡಿನಿಂದ ಅಪ್ರೂವಲ್ ಆಗಿ ತಮ್ಮ ಮುಂದೆ ಬಂದಿದೆ. ಸಚಿವ ಸಂಪುಟದ ಒಪ್ಪಿಗೆಯನ್ನು ಕೊಡಿಸುತ್ತೇವೆಂದು ಹೇಳಿದರು, ಇದುವರೆಗೆ ನಿರ್ಣಯ ಆಗಿಲ್ಲ. ಅದರ ಬಗ್ಗೆಯೂ ಸಂಬಂಧಪಟ್ಟ ಮಂತ್ರಿಗಳು ಏನು ಉತ್ತರ ಹೇಳುತ್ತಾರೆಂದು ನಾನು ನಿರೀಕ್ಷಣೆ ಮಾಡುತ್ತೇನೆ. ಸ್ಕೇರ್‌ಸಿಟಿ ಹಣವನ್ನು ನಮ್ಮ ಜಿಲ್ಲೆಗೆ ಇನ್ನೂ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದರೆ, ತ್ವರಿತಗತಿಯಲ್ಲಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ, ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಅಧ್ಯಕ್ಷರೇ, ಈಗಾಗಲೇ ಕುಡಿಯುವ ನೀರಿನ ಬಗ್ಗೆ ಬಹಳ ಮಂದಿ ಮಾತನಾಡಿದ್ದಾರೆ. ಆದರ ಕೊಳವೆ ಬಾವಿಗಳಿಂದ ನೀರಿನ ಅಂತರ್ಜಲದ ಮಟ್ಟ ದಿನೇ ದಿನೇ ಕೆಳಕ್ಕೆ ಹೋಗುತ್ತಿದೆ. ಇದನ್ನು ತಾವೆಲ್ಲರೂ ಗಮನಿಸಿರಬಹುದು. ಆದ್ದರಿಂದ ಅಂತರ್ಜಲದ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಯೋಜನೆಗಳನ್ನು ಮಾಡಬೇಕಾಗುತ್ತದೆ. ಆ ಬಗ್ಗೆ ಚಿಂತನೆ ಮಾಡದಿದ್ದಾಗ ನೀರಿನ ಸಮಸ್ಯೆ ಪ್ರತಿ ವರ್ಷ ಹೆಚ್ಚು ಆಗುವುದನ್ನು ನಾವುಗಳು ಗಮನಿಸುತ್ತಿದ್ದೇವೆ. ಅದಕ್ಕೆ ರಿಪೇರಿ ಮಾಡಿಸುವ, ತಾತ್ಕಾಲಿಕ ಪರಿಹಾರವನ್ನು ಮಾಡಿದರೆ ಸಾಧ್ಯವಾಗುವುದಿಲ್ಲ. ಶಾಶ್ವತವಾದ ಪರಿಹಾರ ಆಗಬೇಕಾಗಿದೆ. ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಉಳಿದ ಕಡೆಗಳಿಗಿಂತ ಕಡಿಮೆ ಇದ್ದರೂ ಸಹ ಕೆಲವು ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅರಣ್ಯ ಪ್ರದೇಶಗಳ ಕಡೆ ವರ್ಷದ ಎಲ್ಲಾ ದಿನಗಳು ಕುಡಿಯುವ ನೀರು ಇದೆ. ಅಲ್ಲಿಂದ ಪೈಪ್‌ನ ಮೂಲಕ ನೀರು ಇಲ್ಲದ ಕೆಲವು ಪ್ರದೇಶಗಳಿಗೆ ಒದಗಿಸಲು ಆಗುತ್ತದೆ. ಅರಣ್ಯ ಇಲಾಖೆಯವರು ಸಹ ಇದರ ಬಗ್ಗೆ ಮನಸ್ಸು ಮಾಡಿದರೆ ಎಲ್ಲಿ ನೀರು ಇಲ್ಲ ಅಲ್ಲಿಗೆ ನೀರನ್ನು ಒದಗಿಸಲು ಸಾಧ್ಯವಾಗುತ್ತದೆ.

ಇದಕ್ಕೆ ಅರಣ್ಯ ಇಲಾಖೆಯ ಸಚಿವರು ಸಹ ಸಹಕಾರವನ್ನು ಕೊಡಬೇಕಾಗುತ್ತದೆ. ಅಂತರ್ಜಲದ ಮಟ್ಟವನ್ನು ಏರಿಸುವ ಬಗ್ಗೆ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ,ಮಳೆ ನೀರನ್ನು ಗುಡ್ಡಗಾಡು ಪ್ರದೇಶದಲ್ಲಿ ಟ್ಯಾರಿಸಿಂಗ್ ಮಾಡಿ ಆ ಮೂಲಕ ಅಲ್ಲಲ್ಲಿ ನೀರನ್ನು ಬತ್ತಿಸುವುದರಿಂದ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಇದಲ್ಲದೆ ಅಲ್ಲಲ್ಲಿ ಕೊಳವೆಗಳನ್ನು ತೋಡಿ ಎಲ್ಲಿ ನೀರು ಜಾಸ್ತಿ ಇರುತ್ತದೆ ಅಲ್ಲಿ ಇನ್ನೂರರಿಂದ ಮುನ್ನೂರು ಅಡಿ ಆಳ ಮಾಡಿ ನೀರನ್ನು ಇಂಗಿಸಿದರೆ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಮತ್ತು ಅಲ್ಲಿರುವ ಕೆರೆಗಳ ಹೂಳನ್ನು ಎತ್ತುವುದರಿಂದ ಸಹ ನೀರಿನ ಸಮಸ್ಯೆ ಕಡಿಮೆಯಾಗಿ ಅಂತರ್ಜಲದ ಮಟ್ಟ ಜಾಸ್ತಿಯಾಗುತ್ತದೆ. ದಕ್ಷಿಣ ಕನ್ನಡ ಪ್ರದೇಶದಲ್ಲಿ ಹೆಚ್ಚಾಗಿ ನದಿಗಳು ಇರುವುದರಿಂದ ಅಲ್ಲಲ್ಲಿ ಚೆಕ್‌ಡ್ಯಾಂ, ವೆಂಟೆಡ್ ಡ್ಯಾಂಗಳನ್ನು ಮಾಡಿ ನೀರನ್ನು ಶೇಖರಿಸಿ ಆ ಮೂಲಕ ಅಂತರ್ಜಲದ ಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಈ ರೀತಿ ಸರ್ಕಾರ ಶಾಶ್ವತವಾದಕಾರ್ಯಕ್ರಮವನ್ನು ಮಾಡಿಕೊಂಡು ಆ ಮೂಲಕ ಅಂತರ್ಜಲದ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಎಲ್ಲಾ ಕೆಲಸಗಳು ಆಗಿದೆ. ಆದರೆ ವಿದ್ಯುತ್‌ನ ಜೋಡಣೆಯ ಕೆಲಸ ಮಾತ್ರ ಆಗದೆ ತುಂಬ ಕೆಲಸಕಾರ್ಯಗಳು ನಿಂತುಹೋಗಿದೆ. ಆದ್ದರಿಂದ ಸರ್ಕಾರ ಶೀಘ್ರವಾಗಿ ಅದಕ್ಕೆ ಬೇಕಾಗಿರುವ ವಿದ್ಯುತ್ ಸಲಕರಣೆಗಳನ್ನು ಒದಗಿಸಬೇಕು. ಆ ಮೂಲಕ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್.ಶಿವಾನಂದಪಾಟೀಲ್ (ತಿಕೋಟ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಬಿಜಾಪುರ ಜಿಲ್ಲೆಯಲ್ಲಿ ನೀರಿನ ಅಭಾವದ ಜೊತೆಗೆ ಮಂತ್ರಿಗಳ ಅಭಾವವಿದೆ ಎಂಬುದನ್ನು ಮಾನ್ಯ ಖರ್ಗೆಯವರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಮಂತ್ರಿಗಳ ಅಭಾವ ಬಹಳ ಇದೆ. ನಿಮ್ಮ ಜಿಲ್ಲೆಯಲ್ಲಿ ಮಂತ್ರಿಗಳ ಅತಿವೃಷ್ಟಿಯಾಗಿದೆ. ಆದ್ದರಿಂದ ದಯಮಾಡಿ ನಮ್ಮ ಜಿಲ್ಲೆಗೆ ಯಾರಾದರೂ ಮಂತ್ರಿಗಳನ್ನು ಹಾಕಿದರೆ ನೀರಿನ ಸಮಸ್ಯೆ ಬಗೆಹರಿಯಬಹುದೆಂದು ಅನ್ನಿಸುತ್ತದೆ. ಗುಲ್ಬರ್ಗಾದಲ್ಲಿ ಆರು ಜನ ಸಚಿವರು ಇರುವುದರಿಂದ ನೀರಿನ ಸಮಸ್ಯೆ ಹೋಗಿಬಿಟ್ಟಿದೆಯೆಂದು ನನಗೆ ಅನ್ನಿಸುತ್ತದೆ. ಎಲ್ಲಾ ಜಿಲ್ಲೆಯಲ್ಲಿ ಒಂದೊಂದು ರೀತಿ ಸಮಸ್ಯೆ ಇದ್ದರೂ ಸಹ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ವಿಚಿತ್ರವಾದ ಸಮಸ್ಯೆ ಇದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸ್ವಲ್ಪ ಗಮನಹರಿಬೇಕು. ಏಕೆಂದರೆ ಎ.ಆರ್.ಡಬ್ಲ್ಯೂ.ಎಸ್.ನಲ್ಲಿ ಕಳೆದ ಜನವರಿಯಲ್ಲಿ 60 ಲಕ್ಷ ಹಣ ಬಿಡುಗಡೆಯಾಯಿತು. ಆದರೆ ಅಲ್ಲಿರುವ ಕಾರ್ಯಪಾಲಕ ಅಭಿಯಂತರು ಆ 60 ಲಕ್ಷ ರೂಪಾಯಿಗಳನ್ನು ಸಂಪೂರ್ಣವಾಗಿ ಪರ್ಚೇಸಿಂಗ್ ಸಲುವಾಗಿ ಖರ್ಚು ಮಾಡಿದರು. ನಮಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇಲ್ಲ. ಬೇರೆ ಜಿಲ್ಲೆಯಿಂದ ನಮ್ಮ ಜಿಲ್ಲೆಗೆ ಬರುತ್ತಾರೆ. ಅವರ ಅನುಕೂಲಕ್ಕಾಗಿ ಅವರು ಯಾವಾಗ ಬರುತ್ತಾರೋ

ಆಗ ಸಭೆ ಇರುತ್ತದೆ. ಬಿಜಾಪುರ ಜಿಲ್ಲೆಯ ಶಾಸಕರು ಅವರ ಮುಂದೆ ಸಹ ಈ ಸಮಸ್ಯೆಯನ್ನು ಎತ್ತಿದ್ದೆವು. ಅದರ ಬಗ್ಗೆ ಪರಿಶೀಲನೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದರು. ಆದರೆ ರಾತ್ರಿ ಏನಾಯಿತೋ ಗೊತ್ತಿಲ್ಲ ಮಾರನೆ ದಿವಸ ಅದನ್ನು ಕೈಬಿಟ್ಟರು. ಆದ್ದರಿಂದ ತಾವಾದರೂ ಸಹ ಅದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡಬೇಕು. ಎ.ಆರ್.ಡಬ್ಲ್ಯೂ.ಎಸ್.ನಲ್ಲಿನ 60 ಲಕ್ಷ ರೂಪಾಯಿಗಳಲ್ಲಿ ಅನಗತ್ಯ ಸಾಮಗ್ರಿಗಳನ್ನು ಕೊಂಡುಕೊಂಡಿದ್ದಾರೆ. 120 ಬೋರ್‌ವೆಲ್‌ಗಳನ್ನು ಜಿಲ್ಲಾಧಿಕಾರಿಗಳು ಕೊರಿಸಿದರು, ಆ 60 ಲಕ್ಷ ರೂಪಾಯಿಗಳಲ್ಲಿ ತೆಗೆದುಕೊಂಡಿರುವ ಪಂಪುಸೆಟ್ಟುಗಳಲ್ಲಿ ಒಂದೂ ಸಹ ಕೊರೆಸಿರುವ ಬೋರ್‌ವೆಲ್‌ಗೆ ಸೆಟ್ ಆಗುತ್ತಿಲ್ಲ. ದಯಮಾಡಿ ಇದರ ಬಗ್ಗೆ ಪರಿಶೀಲನೆ ಮಾಡಿ ಜೊತೆಗೆ ನೆದರ್‌ಲ್ಯಾಂಡ್ ಯೋಜನೆಯ ಅಡಿಯಲ್ಲಿ, ಹಿಂದೆ ನಮ್ಮ ಸರ್ಕಾರ ಇದ್ದಾಗ ಕಾರ್ಯ ಪ್ರಾರಂಭ ಮಾಡಿ ಅದು ಈಗ ಒಂದು ಹಂತಕ್ಕೆ ಬಂದಿರುವುದು ತಮಗೆ ಗೊತ್ತಿದೆ. ಆದರೂ ಧಾರವಾಡ, ಬಿಜಾಪುರ ಜಿಲ್ಲೆಗೆ ನೆದರ್‌ಲ್ಯಾಂಡ್ ಯೋಜನೆ ಅನ್ವಯವಾಗುತ್ತದೆ. ಅಧ್ಯಕ್ಷರ ಪೀಠವನ್ನು ಅಲಂಕರಿಸಿರುವ ಮಾನ್ಯ ಯಾವಗಲ್‌ರವರ ಜಿಲ್ಲೆಯಲ್ಲಿ ಸಹ ಈ ಸಮಸ್ಯೆ ಇರಬಹುದು. ಇವತ್ತು 70 ಕೋಟಿ ರೂಪಾಯಿ ಹಣ ನೆದರ್‌ಲ್ಯಾಂಡ್ ಯೋಜನೆಯ ಅಡಿಯಲ್ಲಿ ರಾಜ್ಯಕ್ಕೆ ಸಿಗುತ್ತಿದೆ. ಆದರೆ ಅದರ ಮೇಲ್ವಿಚಾರಣೆ ಮಾಡಲು ಕೇವಲ ಒಬ್ಬರೇ ಒಬ್ಬರು ಕಾರ್ಯಪಾಲಕ ಅಭಿಯಂತರು ಇದ್ದಾರೆ. ಇಡೀ ಬಿಜಾಪುರ ಜಿಲ್ಲೆಗೆ 30 ಕೋಟಿ ರೂಪಾಯಿಗಳ ಅನುದಾನ ಬರುತ್ತದೆ, ಅದನ್ನು ಒಬ್ಬನೇ ಒಬ್ಬ ಅಧಿಕಾರಿ ಮೈನ್‌ಟೈನ್ ಮಾಡುತ್ತಾನೆ. ಅಲ್ಲಿ ಟೆಂಡರ್ ಪದ್ಧತಿಯಾಗಿಲ್ಲ, ಯಾವ ಸಾಮಗ್ರಿ ಬೇಕು, ಯಾರಿಂದ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆಯೂ ಟೆಂಡರ್ ಆಗಿಲ್ಲ. ಯದ್ವಾತದ್ವಾ ಕೊಂಡುಕೊಂಡಿದ್ದಾರೆ. ಗಟ್ಟರ್ಸ್‌ನಲ್ಲಿ ಸಹ ಬಹಳ ಅಂಡರ್ ಡೀಲಿಂಗ್ ಆಗಿದೆ. ಅದರಲ್ಲಿ ಸಹ ಸಿಕ್ಕಾಪಟ್ಟೆ ಅನುಪಯುಕ್ತ ಸಾಮಗ್ರಿಗಳ ಪರ್ಚೇಸ್ ಆಗಿದೆ. ಪ್ರಮುಖವಾದ ಮತ್ತೊಂದು ವಿಚಾರವೇನೆಂದರೆ ಬೊಬ್ಲೇಶ್ವರ ಎಂಬ ಗ್ರಾಮ ಇದೆ. ಆ ಗ್ರಾಮಕ್ಕೆ ಕನಿಷ್ಟ ಒಂದು ಕೋಟಿ 20 ಲಕ್ಷ ರೂಪಾಯಿಗಳ ಟೆಂಡರ್ ಆಗಿ ಆ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡರು. ಇವತ್ತು ಆ ಗ್ರಾಮಕ್ಕೆ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು ಸಹ ಆ ಯೋಜನೆ ಸಂಪೂರ್ಣವಾಗಿ ಕಾರ್ಯಗತ ಮಾಡಿಲ್ಲ. ಇದರ ಬಗ್ಗೆ ಬಹಳ ಸಲ ತಮ್ಮ ಕಾರ್ಯದರ್ಶಿಯವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಇದರ ಬಗ್ಗೆ ಸ್ವಲ್ಪ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ತಾವು ಉತ್ತರವನ್ನು ಕೊಡುವಾಗ ಇದರ ಬಗ್ಗೆ ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಚಿಮ್ಮನಕಟ್ಟಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಿಜಾಪುರ ನಗರಕ್ಕೆ ಕುಡಿಯಲು ನೀರು ಇರಲಿಲ್ಲ. ತಮಗೆ ಗೊತ್ತಿರಬಹುದು ಹಿಂದಿನ ಸರ್ಕಾರ 37 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿ ನೀರನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿ

ರೀಮಾಡೆಲಿಂಗ್ ಡಿಸ್ಟ್ರಿಬ್ಯೂಷನ್ ಸಿಸ್ಟ್‌ಮ್ ಆಗಬೇಕೆಂದು 18 ಕೋಟಿ ರೂಪಾಯಿಗಳ ಪ್ರಪೋಸಲ್ ಇದೆ. ದಯಮಾಡಿ ಅದನ್ನು ಕಾರ್ಯಗತ ಮಾಡುತ್ತೇವೆಂದು ವಾಗ್ದಾನ ಮಾಡಿದ್ದೀರಿ. ಈ ವರ್ಷದಲ್ಲಿ ಅದನ್ನು ತೆಗೆದುಕೊಳ್ಳುತ್ತೀರೋ ಅಥವ ಇಲ್ಲವೋ ಎಂಬ ಬಗ್ಗೆ ತಿಳಿಸಬೇಕು. ಇಷ್ಟು ಮಾತನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಬಿ.ಮಲ್ಲಿಕಾರ್ಜುನ್(ಬೀರೂರು): ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಎರಡು ಭಾಗವಾಗಿ ಮಾಡಬೇಕಾಗುತ್ತದೆ. ಒಂದು ಲಾಂಗ್ ರೇಂಜ್‌ನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕದ್ದು, ಮತ್ತೊಂದು ತಕ್ಷಣ ಕುಡಿಯುವ ನೀರನ್ನು ಒದಗಿಸುವಂಥದ್ದು. ತಕ್ಷಣ ನೀರನ್ನು ಒದಗಿಸುವ ಬಗ್ಗೆ ಈಗ ಮಾತನಾಡಿ, ದೀರ್ಘ ಕಾಲದಲ್ಲಿ ಒದಗಿಸುವ ಬಗ್ಗೆ ಬಜೆಟ್‌ಭಾಷಣದ ಮೇಲೆ ಮಾತನಾಡುವಾಗ ಹೇಳುತ್ತೇನೆ. ತಕ್ಷಣ ನೀರನ್ನು ಒದಗಿಸುವ ವಿಚಾರದ ಬಗ್ಗೆ ಹೇಳುವುದಾದರೆ, ಎರಡು ವಿಚಾರಗಳು ಬರುತ್ತವೆ. ಒಂದು ವಿದ್ಯುತ್ ಎನ್.ಆರ್.ಡಬ್ಲ್ಯೂ.ಎಸ್. ಮತ್ತು ಎಂ.ಡಬ್ಲ್ಯೂ.ಎಸ್. ಇವತ್ತು ಯಾವುದೇ ಭಾಗದಲ್ಲಿ ನಡೆಯುತ್ತಿಲ್ಲ. 60-65 ಅಥವಾ 100-120 ಓಲ್ಟೇಜ್ ಇರುವ ಪರಿಸ್ಥಿತಿ ಇದೆ. ಆದ್ದರಿಂದ ಎನ್.ಆರ್.ಡಬ್ಲ್ಯೂ.ಎಸ್. ಇವತ್ತು ನಡೆಯುತ್ತಿಲ್ಲ. ಹ್ಯಾಂಡ್ ಪಂಪುಗಳನ್ನು ರಿಪೇರಿ ಮಾಡುವುದನ್ನು ತಾಲ್ಲೂಕು ಪಂಚಾಯಿತಿಯವರು ಮಾಡಬೇಕೋ, ಜಿಲ್ಲಾಪಂಚಾಯಿತಿಯವರು ಮಾಡಬೇಕೋ ಎಂಬ ದ್ವಂದ್ವತೆ ಇರುವುದರಿಂದ ಆ ಕೆಲಸ ಆಗುತ್ತಿಲ್ಲ. ಆದ್ದರಿಂದ ಎನ್.ಆರ್.ಡಬ್ಲ್ಯೂ.ಎಸ್. ಮತ್ತು ಎಂ.ಡಬ್ಲ್ಯೂ.ಎಸ್‌ಗಳು ನಡೆಯುತ್ತಿಲ್ಲ, ಜೊತೆಗೆ ಹ್ಯಾಂಡ್‌ಪಂಪುಗಳ ರಿಪೇರಿ ಕೆಲಸಗಳು ಸಹ ಆಗುತ್ತಿಲ್ಲ. ಆದ್ದರಿಂದ ಈ ಹ್ಯಾಂಡ್‌ಪಂಪುಗಳನ್ನು ಯಾರು ರಿಪೇರಿ ಮಾಡಬೇಕು ಎಂದು ಸ್ಪಷ್ಟವಾದ ಆದೇಶವನ್ನು ಕೊಡಬೇಕು. ಎಲ್ಲಾ ಕಡೆ ನೀರಿನ ಸಮಸ್ಯೆಗಳು ಇಲ್ಲ, ಓವರ್‌ಹೆಡ್ ಟ್ಯಾಂಕ್ ಇದೆ, ಎಂ.ಡಬ್ಲ್ಯೂ.ಎಸ್. ಟ್ಯಾಂಕ್ ಇದೆ ಆದರೆ ನೀರನ್ನು ತುಂಬಲು ವಿದ್ಯುತ್ ಇಲ್ಲ. ಆದ್ದರಿಂದ ಜನರೇಟರ್‌ನ್ನು ಕೊಡಿ ಎಂದು ಜಿಲ್ಲಾಪರಿಷತ್ತಿಗೆ ಕಳಿಸಿ ಎರಡು ತಿಂಗಳುಗಳಾಯಿತು, ಅದರ ಬಗ್ಗೆ ಮಾಹಿತಿ ಇಲ್ಲ. ಉದಾಹರಣೆಗೆ ಹುಲಿಕೆರೆ ಎಂಬ ಗ್ರಾಮ ಇದೆ, ಈ ವಾರದಲ್ಲೆಲ್ಲ ಅಲ್ಲಿ ಜಾತ್ರೆ ನಡೆಯುತ್ತಿದೆ. ಜನರೇಟರ್‌ನ್ನು ಕೊಂಡುಕೊಳ್ಳಲು ಅನುಮತಿ ಕೊಡಿ ಎಂದು ಜಿಲ್ಲಾಪರಿಷತ್‌ಗೆ ಮನವಿ ಕಳಿಸಿದರೆ ಇದುವರೆಗೆ ಮಂಜೂರಾತಿ ಬಂದಿಲ್ಲ. ಹಣ ಬೇಡ, ಗ್ರಾಮ ಪಂಚಾಯಿತಿಯಿಂದ ಕೊಂಡುಕೊಳ್ಳುತ್ತೇವೆ, ಕೇವಲ ಮಂಜೂರಾತಿಯನ್ನು ಸಹ ಕೊಟ್ಟಿಲ್ಲ. ಜನರೇಟರ್‌ನ್ನು ಕೊಂಡುಕೊಂಡು ನಡೆಸುತ್ತೇವೆ ಎಂದು ಹೇಳುವುದಕ್ಕೆ ಅನುದಾನ ಮತ್ತು ಸಬ್ಸಿಡಿಯನ್ನು ಕೊಡತಕ್ಕದ್ದು ಅಥವಾ ಜಿಲ್ಲಾಪರಿಷತ್ತಿನಿಂದ ಅನುಮೋದನೆಯನ್ನು ಕೊಡತಕ್ಕ ಕೆಲಸವಾದರೆ ಕೆಲವೊಂದು ಗ್ರಾಮ ಪಂಚಾಯಿತಿಯ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು. ಕೆಲವೊಂದು ಹೊಸ ಬೋರ್‌ವೆಲ್‌ಗಳನ್ನು ನಾವು ಕೇಳಿದ್ದೇವೆ. ಚಿಕ್ಕಮಗಳೂರು ಜಿಲ್ಲಾ ಸಚಿವರಾದ ಮಾನ್ಯ ಸಗೀರ್‌ಅಹಮದ್‌ರವರ ನೇತೃತ್ವದಲ್ಲಿ

ನಾವು ಹೋಗಿ ಹೊಸ ಬೋರ್‌ವೆಲ್‌ಗಳಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿದೆವು. ಸುಮಾರು ಮೂರು ಕೋಟಿ ರೂಪಾಯಿಯ ಅಂದಾಜು ಪಟ್ಟಿಯನ್ನು ಮಾಡಿ ಕಳಿಸಬೇಕೆಂದು ಆದೇಶ ಕೊಟ್ಟೆವು. ಅದರ ಜೊತೆಗೆ ಸರ್ಕಾರದ ಆದೇಶವನ್ನು ಸಹ ಕಳಿಸಿದ್ದೆವು.

ಹತ್ತು ವರ್ಷಗಳಾಗಿರತಕ್ಕಂಥ ಎನ್‌ಆರ್‌ಡಬ್ಲ್ಯೂಎಸ್‌ಗಳನ್ನು ಮಾತ್ರ ರಿವ್ಯೂ ಮಾಡಬೇಕು, ಎಂಡಬ್ಲ್ಯೂಎಸ್‌ಗಳನ್ನು ಹಳೆಯವಾಗಿರತಕ್ಕಂಥವುಗಳನ್ನು ಮಾತ್ರ ಮಾಡಬೇಕು. ಹೊಸ ಬೋರ್‌ವೆಲ್‌ಗಳನ್ನು ಕೊರೆಯಬಾರದು. ಇಂಥ ಒಂದು ಆದೇಶವನ್ನು ಅದರ ಜೊತೆಯಲ್ಲಿ ಟ್ಯಾಗ್‌ಆನ್ ಮಾಡಿ ಕಳುಹಿಸಿದ್ದೀರಿ. ಇವೊತ್ತು ನನ್ನ ಕ್ಷೇತ್ರದಲ್ಲಿ ಇದರಿಂದ ಉಂಟಾದ ಪರಿಣಾಮವನ್ನು ಹೇಳಬಯಸುತ್ತೇನೆ. ಸರಕಾರವು ಒಂದು ಆದೇಶವನ್ನು ಮಾಡಿತು. ಅದು ಏನೆಂದರೆ ಕೊಳವೆ ಬಾವಿಗಳಲ್ಲಿರತಕ್ಕಂಥ ನೀರನ್ನು ನೀವು ಚೆಕ್ ಮಾಡಿ ಅಲ್ಲಿ ಒಂದು ಬೋರ್ಡ್‌ನ್ನು ಹಾಕಬೇಕೆಂದು ಮಾಡಿದ್ದೀರಿ. ಅಲ್ಲಿನ ಒಂದು ಊರಿನಲ್ಲಿನ 45 ಮನೆಗಳಿಗೆ 150 ಜನಸಂಖ್ಯೆ ಇರುವ ಕಡೆಗೆ ಇರತಕ್ಕಂಥಾದ್ದು ಒಂದೇ ಒಂದು ಕೊಳವೆಬಾವಿ. ಆ ಬಾವಿಗೆ ನಿಮ್ಮ ಇಲಾಖೆಯವರು ಒಂದು ಬೋರ್ಡ್‌ನ್ನು ತಗುಲಿಸಿದ್ದಾರೆ. ಇದು ಕುಡಿಯಲು ಯೋಗ್ಯವಾದ ನೀರಲ್ಲ ಎಂದು ಅದರಲ್ಲಿ ಹೇಳಿದ್ದಾರೆ. ಹೀಗೆ ಅಲ್ಲಿ ಅಧಿಕಾರಿಗಳು ಬೋರ್ಡ್‌ನ್ನು ಹಾಕತಕ್ಕಂಥ ಸಂದರ್ಭದಲ್ಲಿ ಅಲ್ಲಿ ಇದಲ್ಲದೇ ಬೇರೆ ನೀರಿನ ವ್ಯವಸ್ಥೆ ಇದೆಯೋ ಇಲ್ಲವೋ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ನಾನು ಶಾಸಕನಾಗಿ ಅಲ್ಲಿಗೆ ಹೋಗಿದ್ದಾಗ ಜನರು ನೋಡಿ ನಮ್ಮ ಬಾವಿಗೆ ಹೀಗೆ ಬೋರ್ಡ್ ಹಾಕಿದ್ದಾರೆ. ನಮಗೆ ಬೇರೆ ನೀರಿಲ್ಲ, ನಾವು ಇದೇ ನೀರನ್ನು ಕುಡಿಯುತ್ತಿದ್ದೇವೆ ಎಂದು ಹೇಳಿ ನೀರನ್ನು ಒಯ್ಯುತ್ತಿದ್ದರು. ಇಂಥ ವಿಪರ್ಯಾಸಗಳು ನಮ್ಮಲ್ಲಿ ಆಗುತ್ತಿದೆ. ಹಾಗೆ ಬೋರ್ಡ್‌ನ್ನು ಹಾಕುವಾಗ ಪಕ್ಕದಲ್ಲಿ ಯೋಗ್ಯವಾದ ಒಂದು ಕಡೆ ಕೊಳವೆಬಾವಿ ತೆರೆದು ಇಲ್ಲಿನ ನೀರನ್ನು ಕುಡಿಯಬಹುದು ಎಂದು ಒಂದು ವ್ಯವಸ್ಥೆ ಮಾಡಬೇಕು. ಅಂತೆಯೇ ತಿಪ್ಪಗೊಂಡಹಳ್ಳಿ ಎಂಬಲ್ಲಿನ ಎರಡು ಬೋರ್‌ವೆಲ್‌ಗಳಿಗೂ ಈ ನೀರು ಕುಡಿಯಲು ಯೋಗ್ಯವಲ್ಲ ಎಂದು ಬೋರ್ಡ್‌ನ್ನು ಹಾಕಿದ್ದಾರೆ. ಈ ಬಗ್ಗೆ ಸರಕಾರದವರು ಸ್ಪಷ್ಟವಾದ ಆದೇಶವನ್ನು ಕೊಡಬೇಕಾಗುತ್ತದೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಗ್ರಾಮಕ್ಕೆ ಬೇರೆ ಬೇರೆ ಸಮಸ್ಯೆಗಳು ಇದೆ. ಕೊಳವೆ ಬಾವಿ ಕೊರೆದರೆ ಒಂದು ಕಡೆ ಸಮಸ್ಯೆ ಬಗೆಹರಿಯುತ್ತದೆ, ಒಂದು ಕಡೆ ಹ್ಯಾಂಡ್‌ಪಂಪ್‌ನ್ನು ರಿಪೇರಿ ಮಾಡಿದರೆ ಸಮಸ್ಯೆ ಬಗೆ ಹರಿಯುತ್ತದೆ. ಒಂದು ಕಡೆ ಜನರೇಟರ್ ಕೊಟ್ಟರೆ ಸಮಸ್ಯೆ ಬಗೆಹರಿಯುತ್ತದೆ. ಹಣವನ್ನು ಬಿಡುಗಡೆ ಮಾಡಿ ಇದೇ ರೀತಿ ಕಾರ್ಯಕ್ರಮ ಮಾಡಿ ಎಂದರೆ ತಕ್ಷಣಕ್ಕೆ ನೀರನ್ನು ಕೊಡಲು ಆಗುವುದಿಲ್ಲ. ಮೇ, ಜೂನ್‌ನಲ್ಲಿ ನೀರನ್ನು ಕೊಡಲು ಆಗುವುದಿಲ್ಲ. ಆದ್ದರಿಂದ ಜಿಲ್ಲಾ ಸಚಿವರು, ವಿದ್ಯುತ್ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರುಗಳು ಸೇರಿ ಜಿಲ್ಲೆಯ ಶಾಸಕರನ್ನು ಒಳಗೊಂಡಂತೆ ಸಭೆಯನ್ನು ಮಾಡಿ ಚರ್ಚೆ ಮಾಡಬೇಕು.

ಹಣವನ್ನು ಬಿಡುಗಡೆ ಮಾಡಿದರೆ ಸಮಸ್ಯೆ ಪರಿಹಾರವಾಗಿಬಿಡುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಆದ್ದರಿಂದ ನಿರ್ದಿಷ್ಟವಾಗಿ ಇಂಥ ಕಾರ್ಯಕ್ರಮಗಳನ್ನು ಹಾಕಿ ಎಂಬುದು ಶಾಸಕರಾದ ನಮಗೆ ಗೊತ್ತಿರುತ್ತದೆ. ಆ ದೃಷ್ಟಿಯಿಂದ ಶಾಸಕರ ಸಭೆಯನ್ನು ಕರೆದು ಅಲ್ಪ ಹಣದಲ್ಲಿ ಪೂರ್ಣವಾದ ಕುಡಿಯುವ ನೀರನ್ನು ಜನರಿಗೆ ಕೊಡಬೇಕಾಗಿದೆ. ಆದ್ದರಿಂದ ಆ ರೀತಿ ಸಭೆಯನ್ನು ಕರೆಯಬೇಕೆಂದು ಹೇಳಿ, ದೀರ್ಘಾವಧಿಯ ಕಾರ್ಯಕ್ರಮದ ಬಗ್ಗೆ ಬಜೆಟ್‌ಮೇಲೆ ಮಾತನಾಡುವಾಗ ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಬೋರ್‌ವೆಲ್ ಹಾಕಿದರೆ ಉಪಯೋಗವಾಗುವುದಿಲ್ಲ. ನಮಗೆ ಓಪನ್ ವೆಲ್ ಬೇಕಾಗುತ್ತದೆ. ಆದ್ದರಿಂದ ನಮ್ಮ ಕಡೆ ತೆರೆದ ಬಾವಿಗಳಿಗೆ ವಿಶೇಷವಾದ ಆದ್ಯತೆಯನ್ನು ಕೊಡಬೇಕು. ಬೋರ್‌ವೆಲ್‌ನ್ನೇ ಮಾಡುತ್ತೇವೆ ತೆರೆದ ಬಾವಿ ಮಾಡಲು ಅವಕಾಶವಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಆ ಕೆಲಸ ಆಗಬಾರದು. ಏಕೆಂದರೆ ಮಲೆನಾಡಿನ ನಮ್ಮಲ್ಲಿ ಮಳೆಗಾಲದಲ್ಲಿ ಆರು ತಿಂಗಳು ನೀರು ಇರುತ್ತದೆ. ಉಳಿದ ಸಮಯದಲ್ಲಿ ಬೋರ್‌ವೆಲ್ ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ತೆರೆದ ಬಾವಿಗಳಿಗೆ ಅವಕಾಶ ಕೊಡಬೇಕು. ನೀರಿನ ಸೋರ್ಸನ್ನು ನೋಡಿಕೊಳ್ಳದೆ ಟ್ಯಾಂಕ್ ಇತರೆ ಕೆಲಸಗಳನ್ನು ಮಾಡಿಬಿಡುತ್ತಾರೆ. ಹೀಗೆಲ್ಲ ಆಗುತ್ತದೆ. ಆದ್ದರಿಂದ ನೀರಿನ ಸೋರ್ಸ್ ಯಾವುದು ಎಂಬುದನ್ನು ಮೊದಲು ಗೊತ್ತು ಮಾಡಿಕೊಳ್ಳಿ. ನನ್ನ ಕ್ಷೇತ್ರದಲ್ಲಿ ಟ್ಯಾಂಕ್ ಕಟ್ಟಿ ಮೂರು ವರ್ಷಗಳಾಗಿದೆ, ಆದರೆ ಇನ್ನು ನೀರಿನ ಸೋರ್ಸ್ ಇಲ್ಲ. ನೀರಿನ ಸೋರ್ಸ್‌ಗಾಗಿ ಹುಡುಕುತ್ತಿದ್ದಾರೆ. ನೀರಿನ ಸೋರ್ಸ್ ಇಲ್ಲದೆ ಟ್ಯಾಂಕ್‌ಗಳನ್ನು ಕಟ್ಟುವ ಹಾಸ್ಯಾಸ್ಪದವಾದ ರೀತಿಯಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಗಂಭೀರವಾದ ಕ್ರಮ ತೆಗೆದುಕೊಳ್ಳಬೇಕು. ಬೋರ್‌ವೆಲ್ ಹಾಕಿರುತ್ತಾರೆ, ಆದರೆ ಹ್ಯಾಂಡ್ ಪಂಪ್‌ನ್ನು ಹಾಕಿರುವುದಿಲ್ಲ. ಕಟ್ಟೆ ಕಟ್ಟಿರುವುದಿಲ್ಲ. ಇದರಿಂದ ದಾವಣಗೆರೆಯಲ್ಲಿ ಮಗು ಬಿದ್ದು ಮೃತಪಟ್ಟಂತೆ ಆಗಲು ಸಾಧ್ಯತೆ ಇದೆ. ಅದಕ್ಕೆ ಅವಕಾಶ ಕೊಡಬೇಡಿ. ಬೋರ್‌ವೆಲ್‌ನ ಮೇಲೆ ಕಲ್ಲನ್ನು ಇಟ್ಟಿರುತ್ತಾರೆ, ಯಾರಾದರೂ ಹುಡುಗರು ಅದನ್ನು ಒಳಕ್ಕೆ ಹಾಕಿಬಿಟ್ಟರೆ ಮತ್ತೆ ಪಂಪನ್ನು ಹಾಕಲು ಬರುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಆದ್ದರಿಂದ ಬೋರ್‌ವೆಲ್ ಹಾಕಿದ ಒಂದು ದಿನದಲ್ಲಿ ಹ್ಯಾಂಡ್‌ಪಂಪ್‌ನ್ನು ಹಾಕುವ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಹ್ಯಾಂಡ್ ಕ್ಯಾಪನ್ನು ಹಾಕುವ ವ್ಯವಸ್ಥೆಯಾಗಬೇಕು.

7-30 ಪಿ.ಎಂ

ಇನ್ನೊಂದು ಪ್ರಮುಖವಾದ ವಿಚಾರ ಏನೆಂದರೆ ಕುಡಿಯುವ ನೀರಿನ ವ್ಯವಸ್ಥೆಯ ವಿಚಾರದಲ್ಲಿ ಜಿಯಾಲಜಿಸ್ಟ್ ಮಾಡುವಷ್ಟು ತಪ್ಪುಗಳನ್ನು ಅಡೆತಡೆಗಳನ್ನು ಬೇರೆ

ಯಾರೂ ಮಾಡುವುದಿಲ್ಲ ಎಂಬ ನಾನು ತಿಂದುಕೊಂಡಿದ್ದೇನೆ. ಅವರು ವಾಟರ್ ಪಾಯಿಂಟ್ಸ್‌ನ್ನು ತೋರಿಸಿ ಹೋಗಬೇಕಾಗುತ್ತದೆ. ಅವರ ವಾಹನ ಎಲ್ಲಿ ಹೋಗುತ್ತದೆ ಅಲ್ಲಿ ತೋರಿಸಿ ಹೋಗುತ್ತಾರೆ. ಇಂಟೀರಿಯರ್ ಪ್ಲೇಸ್‌ಗಳಿಗೆ ಇವರ ಗಾಡಿ ಹೋಗುವುದಿಲ್ಲ ಅಂದರೆ ಅಂಥ ಜಾಗಗಳಲ್ಲಿ ನೀರು ಬರುವುದಿಲ್ಲ ಎಂದು ಹೇಳಿಬಿಡುತ್ತಾರೆ. ಜಿಯಾಲಜಿಸ್ಟ್ ಮತ್ತು ಬೋರ್‌ವೆಲ್ ಹೊಡೆಯುವವರದ್ದು ಅಡ್‌ಜಸ್ಟ್‌ಮೆಂಟ್ ಇರುತ್ತದೆ. ಜಿಯಾಲಜಿಸ್ಟ್ ಬಂದು ರಸ್ತೆ ಪಕ್ಕದಲ್ಲಿರುವ ಜಾಗಗಳನ್ನು ಮಾತ್ರ ತೋರಿಸಿ ಹೋಗುತ್ತಾರೆ. ಹೀಗೆ ಅವರು ಸೂಕ್ತವಲ್ಲದ ರೀತಿಯಲ್ಲಿ ತೋರಿಸಿದ ಜಾಗಗಳಲ್ಲಿ ಎಷ್ಟು ಫೇಲ್ಯೂರ್ ಆಗಿದೆ ಎಂಬ ಬಗ್ಗೆ ತಾವುಗಳು ಅಂಕಿಸಂಖ್ಯೆಗಳನ್ನು ತರಿಸಿಕೊಳ್ಳಿ. ಜಿಯಾಲಜಿಸ್ಟ್ ತೋರಿಸಿರುವ ಪಾಯಿಂಟ್‌ಗಳಲ್ಲಿ ಎಷ್ಟು ಫೇಲ್ಯೂರ್ ಆಗಿದೆ ಎಂಬ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆಯವರು ವಿವರಗಳನ್ನು ತರಿಸಿಕೊಳ್ಳಬೇಕು. ಫೇಲ್ಯೂರ್ ಆಗಿದ್ದರೆ ಏತಕ್ಕಾಗಿ ಆಯಿತು? ಅದಕ್ಕೆ ಕಾರಣಗಳೇನು? ಅಂಥವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ವಿವರಗಳು ತರಿಸಿಕೊಳ್ಳಬೇಕು. ಈ ಬಗ್ಗೆ ಮಾನ್ಯ ಸಚಿವರು ವಿಶೇಷ ಗಮನವನ್ನು ಕೊಡಬೇಕೆಂದು ಕೋರುತ್ತೇನೆ. ಕೊನೆಯದಾಗಿ ನಮ್ಮ ಕ್ಷೇತ್ರಗಳಲ್ಲಿ, ಜಿಲ್ಲೆಗಳಲ್ಲಿ ಹಾಗೂ ರಾಜ್ಯದ ಯಾವ ಯಾವ ಕಡೆಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಏನು ಇದ್ದಿದೆ, ಅದನ್ನು ಪರಿಹರಿಸುವುದಕ್ಕೆ ಕೇವಲ ಬೋರ್‌ವೆಲ್ ತೆಗೆಯುವುದು ಮಿನಿವಾಟರ್ ಸಪ್ಲೈ ಸ್ಕೀಮ್‌ನ್ನು ಕಂಪ್ಲೀಟ್ ಮಾಡುವುದು ಅಷ್ಟೇ ಅಲ್ಲ, ಈ ಟ್ಯಾಂಕರ್ ವ್ಯವಸ್ಥೆಯನ್ನು ಸರ್ಕಾರದವರು ಗಂಭೀರವಾಗಿ ಯೋಚಿಸಿ ಮಾಡಬೇಕು. ಎಲ್ಲೆಲ್ಲಿ ಟ್ಯಾಂಕರ್ ಮೂಲಕ ನೀರನ್ನು ಕೊಡಬಹುದಾದ ಪರಿಸ್ಥಿತಿ ಇದೆಯೋ ಅಲ್ಲಿಗೆಲ್ಲಾ ಟ್ಯಾಂಕರ್‌ಗಳ ಮೂಲಕ ನೀರನ್ನು ಒದಗಿಸಿಕೊಡುವ ಮಾನವೀಯತೆಯನ್ನು ಸರಕಾರದವರು ತೋರಿಸಬೇಕು. ಇದಿಲ್ಲ ಎಂದರೆ ಸರಕಾರದ ಅತ್ಯಂತ ಬೇಜವಾಬ್ದಾರಿಯ ಪರಮಾವಧಿಯಾಗುತ್ತದೆ. ಕುಡಿಯುವ ನೀರನ್ನು ಒದಗಿಸುವ ಜವಾಬ್ದಾರಿಯನ್ನು ಕೂಡ ಸರಕಾರ ನಿರ್ವಹಿಸುತ್ತಿಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ನೀರಿನ ಹಾಹಾಕಾರ ಇರುವಲ್ಲಿ ಕೂಡಲೇ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜನ್ನು ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿಯು ಇದೆ. ನಮ್ಮ ಕ್ಷೇತ್ರದ ಒಂದು ಬದಿಯಲ್ಲಿ ಸಮುದ್ರ, ಇನ್ನೊಂದು ಬದಿಯಲ್ಲಿ ನದಿ ಹರಿಯುತ್ತಿದೆ. ನಮ್ಮಲ್ಲಿ ಧಾರಾಕಾರವಾದ ಮಳೆ ಕೂಡ ಆಗುತ್ತದೆ. ಇಷ್ಟೆಲ್ಲ ಇದ್ದರೂ ಕೂಡ ಕುಡಿಯುವ ನೀರಿನ ಟ್ಯಾಪ್‌ನಲ್ಲಿ ಮಾತ್ರ ನೀರು ಬರುತ್ತಾ ಇಲ್ಲ. ಇಂಥ ಪರಿಸ್ಥಿತಿಯು ನಮ್ಮ ಕ್ಷೇತ್ರದಲ್ಲಿದೆ. ನಮ್ಮ ನಗರ ಪ್ರದೇಶದಲ್ಲಿರುವ 50 ಪರ್ಸೆಂಟ್‌ನಷ್ಟು ಬಾವಿಗಳು ಒಳಚರಂಡಿಯ ಅವ್ಯವಸ್ಥೆಯಿಂದ ಸೀಪೇಜ್ ಆಗಿ ಎಲ್ಲಾ ಬಾವಿಗಳೂ ಹಾಳಾಗಿ

ಹೋಗಿವೆ. ಅಪಾರ್ಟ್‌ಮೆಂಟ್‌ಗಳು ಕಟ್ಟಡಗಳು ಇರುವಂತಾದ್ದರಲ್ಲಿ ಕೇವಲ ಮಹಾನಗರ ಪಾಲಿಕೆಯವರು ನೀರು ಸರಬರಾಜು ವಿತರಣೆಯ ಮೇಲೆ ಮತ್ತು ಅವಲಂಬಿತರಾಗಿರುವ ಪರಿಸ್ಥಿತಿಯು ಇದೆ. ನೇರವಾಗಿ ಇರುವ ಸೋರ್ಸ್‌ನಿಂದ ಒಂದು ಮನೆಗೆ ನೀರು ಬರಬೇಕಾದರೆ 4-5 ಪಾಯಿಂಟ್‌ಗಳಲ್ಲಿ ಲಿಫ್ಟ್ ಆಗಿ ಬರಬೇಕಾಗುತ್ತದೆ. ಲೋಲಿಫ್ಟ್ ನಿಂದ ಹೈಲಿಫ್ಟ್, ಹೈಲಿಫ್ಟ್‌ನಿಂದ ಟ್ಯಾಂಕ್‌ಗಳಿಗೆ ಬಂದು ಅಲ್ಲಿಂದ ಮತ್ತೆ ಬೇರೆ ಬೇರೆ ಪ್ರದೇಶಗಳಲ್ಲಿರುವ ಟ್ಯಾಂಕ್‌ಗಳಿಗೆ ಪಂಪ್ ಆಗಿ ಹೋಗಬೇಕಾಗುತ್ತದೆ. ಈ ವ್ಯವಸ್ಥೆಗೆ ವಿದ್ಯುತ್ ವೈಫಲ್ಯ ಉಂಟಾದರೆ ನಮಗೆ ಹಲವು ದಿನಗಳವರಗೆ ನೀರು ಇರುವುದಿಲ್ಲ. ಲಾಕ್ ಆಗಿದೆ ಎಂಬ ಒಂದು ವಿಶೇಷವಾದ ಕಂಪ್ಲೈಂಟ್ ಬರುತ್ತದೆ. ಅದರ ರಿಪೇರಿಗೆ ಎರಡು ದಿನಗಳು ಬೇಕಾಗುತ್ತದೆ. ಇಂಥ ದುಸ್ಥಿತಿಯನ್ನು ತಪ್ಪಿಸಲು ನಮಗೆ ಡೀಸಲ್ ಜನರೇಟರ್‌ನ್ನು ಸ್ಟೋರ್ಸ್‌ನಲ್ಲಿಯೇ ಕೊಡುವಂಥ ವ್ಯವಸ್ಥೆಯನ್ನು ತಾವುಗಳು ಮಾಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಮಾಡುತ್ತೇನೆ. ಹಾಗೆಯೇ ನಮ್ಮಲ್ಲಿ ನೀರು ಸರಬರಾಜಿನ ತೊಂದರೆಯಲ್ಲಿಯೂ ಕೂಡ ಶ್ರೀಮಂತರ ಬಡಾವಣೆ ಇರುವಲ್ಲಿ, ಹೋಟೆಲ್‌ಗಳು ಇರುವಲ್ಲಿ ನೀರು ಬರುತ್ತಿರುತ್ತದೆ. ಉದಾಹರಣೆಗೆ ಅಶೋಕನಗರದ ಮಾರಿಗುಡಿ ಕ್ಷೇತ್ರದಲ್ಲಿ ಬಡವರು ಹೆಚ್ಚಿಗೆ ಇದ್ದಾರೆ. ಅಲ್ಲಿಗೆ ಸರಿಯಾಗಿ ನೀರು ಸರಬರಾಜಿಲ್ಲ. ಹೀಗೆ ವಿತರಣೆ ವ್ಯವಸ್ಥೆಯಲ್ಲಿರುವ ದೋಷವನ್ನು ಸರಿಪಡಿಸಬೇಕು. ಈ ಬಗ್ಗೆ ಸೂಕ್ತ ನಿರ್ದೇಶನವನ್ನು ಕೊಡಬೇಕು. ನಮ್ಮಲ್ಲಿ ತೃತೀಯ ಹಂತದ ಕುಡಿಯುವ ನೀರಿನ ಯೋಜನೆ ಏನಿದೆ, ಅದರ ಬಗ್ಗೆ ನಾವು ಎಲ್ಲವೂ ಏಡಿಬಿ ಮೇಲೆ ಡಿಫೆಂಡ್ ಆಗಿದ್ದೇವೆ. ಇದನ್ನು ತತ್‌ಕ್ಷಣ ಗ್ರ್ಯಾಂಟ್ ಆಗುವ ರೀತಿಯಲ್ಲಿ ಸ್ಯಾಂಕ್ಷನ್ ಆಗುವ ರೀತಿಯಲ್ಲಿ ತಾವುಗಳು ಮಂಜೂರಾತಿಯನ್ನು ಕೊಡಬೇಕೆಂದು ಒತ್ತಾಯ ಮಾಡಿ, ಈ ಮೂರು ವಿಷಯಗಳ ಬಗ್ಗೆ ತಾವುಗಳು ವಿಶೇಷ ಮುತುವರ್ಜಿಯನ್ನು ವಹಿಸಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

+ಶ್ರೀ ಸಿ. ಭೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತು ಅನೇಕ ಜನ ಮಾನ್ಯ ಸದಸ್ಯರುಗಳು ತಮ್ಮ ಸಲಹೆಗಳನ್ನು ನೀಡಿದ್ದಾರೆ. ನಾನು ಈಗ ರಾಜ್ಯದ ವಿಚಾರದಲ್ಲಿ ಹೆಚ್ಚಿಗೆ ಮಾತನಾಡದೆ ಜಿಲ್ಲೆಯ ವಿಚಾರವನ್ನು ಸ್ವಲ್ಪ ಹೆಚ್ಚು ಪ್ರಸ್ತಾಪಿಸಲಿಚ್ಛಿಸುತ್ತೇನೆ. ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಸಮಸ್ಯೆಗಳಿವೆ. ನಮ್ಮ ಜಿಲ್ಲೆಯಲ್ಲಿ ಸೆಂಟ್ರಲ್ ಗ್ರೌಂಡ್ ವಾಟರ್ ಬೋರ್ಡ್ ಎನ್ನುವ ಸಂಸ್ಥೆಯಿದೆ. ಅವರು ಸುಮಾರು ಐದಾರು ವರ್ಷಗಳ ಹಿಂದೆ ಒಂದಡಿ ವ್ಯಾಸ ಇರತಕ್ಕಂಥ ಬೋರ್‌ವೆಲ್‌ನ್ನು 800 ಅಡಿಗಳಷ್ಟು ಕೊರೆದಿದ್ದಾರೆ. ಅಂತರ್ಜಲದ ಮಟ್ಟ ಯಾವರೀತಿಯಲ್ಲಿ ಇದೆ ಎಂಬುದನ್ನು ಪರೀಕ್ಷೆ ಮಾಡಲು ಪರೀಕ್ಷಾರ್ಥವಾಗಿ ಕೊಳವೆಬಾವಿಗಳನ್ನು ಹಾಕಿದ್ದಾರೆ. ಹೀಗೆ ಮೂರು-ನಾಲ್ಕು ಕಡೆಗಳಲ್ಲಿ ಕೊರೆದಿದ್ದಾರೆ. ಅಂಥಾದ್ದರಲ್ಲಿ ಒಂದು ಕಡೆ ಪಕ್ಕದಲ್ಲಿರತಕ್ಕಂಥ ಹಳ್ಳಿಗೆ ಆ ಕೊಳವೆ ಬಾವಿಯಿಂದ ನೀರನ್ನು ಕೊಡಿಸಿದ್ದೆ. ಇವೊತ್ತು ಅಂಥ ಕೊಳವೆ ಬಾವಿಯಲ್ಲಿಯೂ ನೀರಿಲ್ಲ. ಅದು

ಸಂಪೂರ್ಣವಾಗಿ ಬತ್ತಿ ಹೋಗಿದೆ. ಆ ಊರಿನವರು ನಮ್ಮಲ್ಲಿ ಬಂದು ನಮಗೆ ಬೇರೆ ಕಡೆಯಿಂದ ನೀರನ್ನು ಕೊಡಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ ಅಂದರೆ ಇವೊತ್ತು ಭೂಮಿಯಲ್ಲಿ ನೀರಿಲ್ಲ ಎಂಬ ವಿಚಾರವು ವ್ಯಕ್ತವಾಗುತ್ತದೆ. ಇದಕ್ಕೆ ಪರಿಹಾರ ಏನು? ನಾನು ಈ ಕುರಿತು ಎಲ್ಲಾ ಕಡೆಗಳ ಬಗ್ಗೆ ಹೇಳುತ್ತಿಲ್ಲ ನಮ್ಮ ಸರಕಾರದ ಅವಧಿಯಲ್ಲಿ ಇದನ್ನು ಗಮನಿಸಿ, ಬೆಂಗಳೂರು ಜಿಲ್ಲೆಯ ಕೆಲವು ಭಾಗ, ಆನೇಕಲ್ಲು, ಹೋಸಕೋಟೆ, ಮಾಲೂರು ಮುಂತಾಗಿ ಈ ಪಟ್ಟಣಗಳಿಗೆ ಸಂಬಂಧಪಟ್ಟ ಹಾಗೆ ಮತ್ತು 130 ಹಳ್ಳಿಗಳಿಗೆ ಸಂಬಂಧಪಟ್ಟ ಹಾಗೆ ಕಾವೇರಿ ನದಿಯಿಂದ ನೀರನ್ನು ತರತಕ್ಕ ಒಂದು ಯೋಜನೆಯನ್ನು ತಯಾರು ಮಾಡಿ ಸುಮಾರು ಆರು ನೂರು ಕೋಟಿ ರೂಪಾಯಿಗಳಿಗೆ ತಯಾರು ಮಾಡಿ ಇಟ್ಟಿದ್ದೇವೆ. ಅದನ್ನು ತಾವು ದಯವಿಟ್ಟು ಹುಡ್ಕೋಗೆ ಕಳಿಸಬೇಕಾಗಿರತಕ್ಕದ್ದು ನಿಮ್ಮ ಕೆಲಸ. ಅವರು ಹಣ ಕೊಡತಕ್ಕದ್ದಕ್ಕೆ ನಮ್ಮ ಪ್ರಭಾವವನ್ನು ಹುಡ್ಕೋ ಮೇಲೆ ಬೀರಿ, ಕೇಂದ್ರ ಸರ್ಕಾರದ ಮೇಲೆ ಕೂಡ ಪ್ರಭಾವವನ್ನು ಬೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ತಾವು ಹೇಳಿದಿರಿ. ಆನೇಕಲ್‌ನಿಂದ ಮಾಲೂರು. ಮಾಲೂರ್‌ನಿಂದ ಹೊಸಕೋಟೆ,....

ಶ್ರೀ ಸಿ.ಭೈರೇಗೌಡ: ಕೋಲಾರ, ಬಂಗಾರಪೇಟೆ, ಕೆಜಿಎಫ್, ಮುಳುಬಾಗಿಲು ಈ ಭಾಗ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುನಿಯಪ್ಪನವರ ಭಾಗ.

ಶ್ರೀ ಸಿ.ಭೈರೇಗೌಡ: ಅದರ ಬಗ್ಗೆಯೂ ಹೇಳುತ್ತೇನೆ. ಇದನ್ನು ದಯವಿಟ್ಟು ಈ ಯೋಜನೆಯನ್ನು ಹುಡ್ಕೋಗೆ ಕಳುಹಿಸಿ ಅದಕ್ಕೆ ಮಂಜೂರಾತಿ ಮಾಡಿಸಿಕೊಂಡು ಅವರಿಂದ ಹಣ ಪಡೆದು ಈ ಯೋಜನೆಯನ್ನು ಕೈಗೆತ್ತಿಕೊಳ್ಳಿ. ಇಲ್ಲದಿದ್ದರೆ ಈ ನಮ್ಮ ಭಾಗದಲ್ಲಿ ಇವತ್ತೇನು ಗುಜರಾತ್ ಅಥವಾ ರಾಜಸ್ಥಾನದಲ್ಲಿ ಭೀಕರವಾದಂತಹ ಪರಿಸ್ಥಿತಿ ಉಂಟಾಗಿದೆ. ಅದಕ್ಕಿಂತ ಭೀಕರವಾದಂತಹ ಪರಿಸ್ಥಿತಿ ನಮ್ಮಲ್ಲಿ ಅಂತೂ ಕೂಡ ಖಂಡಿತವಾಗಿ ಆಗುತ್ತದೆ. ಈಗಾಗಲೇ ನಾನು ಉದಾಹರಣೆ ಹೇಳಿದ್ದೇನೆ. ನೀವು ಅದನ್ನು ಟೆಸ್ಟ್ ಮಾಡಿಸಿ. ಈಗಲೂ ಕೂಡ ಮುರ್ನಾಲ್ಕು ಕಡೆ ಕೊಳವೆ ಬಾವಿಗಳನ್ನು ಮಾಡಿದ್ದಾರೆ. ನಮ್ಮಲ್ಲಿ 800 ಅಡಿಆಳ ಹೋಗಿರತಕ್ಕಂಥ ಕೊಳವೆ ಬಾವಿಗಳು ಈಗಲೂ ಕೂಡ ಇದ್ದಾವೆ. ಅದನ್ನು ಟೆಸ್ಟ್ ಮಾಡಿಸಿ, ದಯವಿಟ್ಟು ಕ್ರಮ ತೆಗೆದುಕೊಳ್ಳಿ. ಮಾನ್ಯ ನಗರಾಭಿವೃದ್ಧಿ ಸಚಿವರು ಈಗ ತಯಾರಾಗಿರತಕ್ಕಂಥ ಸುಮಾರು 600 ಕೋಟಿ ರೂಪಾಯಿಗಳ ಯೋಜನೆಯನ್ನು ಹುಡ್ಕೋ ಮೂಲಕ ಇದನ್ನು ಕಾರ್ಯಗತ ಮಾಡಲೇಬೇಕು. ಇಲ್ಲದೇ ಇದ್ದರೆ ಇದು ಬಹಳ ಭೀಕರವಾದಂತಹ ಪರಿಣಾಮ ಈ ಭಾಗದಲ್ಲಿ ಆಗುತ್ತದೆ ಎನ್ನತಕ್ಕದ್ದನ್ನು ನಾನು ಇವತ್ತೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಿಂದ ನಾನು ಇವತ್ತು ಮಾತನಾಡಬೇಕು. ಈ ವಿಚಾರದಲ್ಲಿ ಎಂದು ಎದ್ದು ನಿಂತಿದ್ದೇನೆ. ಇದನ್ನು ದಯಪಿಟ್ಟು ಗಮನಿಸಬೇಕು ಎಂಬ ಮಾತನ್ನು ಹೇಳುತ್ತೇನೆ.

ನಮ್ಮ ಸರ್ಕಾರ ಇದ್ದಾಗ ಒಂದು ಆಜ್ಞೆಯನ್ನು ಮಾಡಿಸಿದೆವು. ಅದೇನೆಂದರೆ ಕುಡಿಯುವ ನೀರಿನ ಕೊಳವೆ ಬಾವಿಗಳು ಗ್ರಾಮೀಣ ಪ್ರದೇಶದಲ್ಲಿ ಎಲ್ಲೆಲ್ಲಿ ಇರುತ್ತವೋ ಅಲ್ಲಿ 820 ಅಡಿ ವ್ಯಾಸದಲ್ಲಿ ಬೇರೆ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡಕೂಡದು ಎನ್ನತಕ್ಕಂಥ ಆಜ್ಞೆಯನ್ನು ಮಾಡಿಸಿ ಇಟ್ಟಿದ್ದೆವು. ಆ ಆಜ್ಞೆ ಮಾಡಬೇಕಾಗಿದ್ದರೆ ನಾನೇ ಕಾರಣ. ಆವತ್ತು ನಾನು ಕೆಇಬಿಯವರಿಗೆ ಹೇಳಿ ಮತ್ತು ಸರ್ಕಾರದಲ್ಲೂ ಕೂಡ ಆ ರೀತಿಯಾದಂತಹ ತೀರ್ಮಾನವನ್ನು ಮಾಡಿಸಿ 820 ಅಡಿ ವ್ಯಾಸದಲ್ಲಿ ಯಾವ ಕೊಳವೆ ಬಾವಿಗೂ ಅಂದರೆ ವ್ಯವಸಾಯದ ಉದ್ದೇಶಕ್ಕೋಸ್ಕರ ಅದಕ್ಕೆ ವಿದ್ಯುತ್ ಸಂಪರ್ಕವನ್ನು ಕೊಡಬಾರದು ಎನ್ನತಕ್ಕ ಆಜ್ಞೆ ಇತ್ತು. ಇವತ್ತು ಆ ಆಜ್ಞೆಗೆ ಮಾಡಿಫಿಕೇಶನ್ ಆಗಿದೆ. ಅವರು ಒಪ್ಪಿದರೆ ಅಲ್ಲಿರತಕ್ಕಂಥಹ ಅಧಿಕಾರಿಗಳು ಸ್ಥಳದಲ್ಲಿರತಕ್ಕಂಥ ಅಧಿಕಾರಿಗಳು ನೀರು ಇದೆ ಎಂದು ಹೇಳಿ ಅದಕ್ಕೆ ಒಂದು ಸರ್ಟಿಫಿಕೇಟ್ ಕೊಟ್ಟರೆ, ಮತ್ತು ನೀರು ಮುಗಿದಂತಹ ಕಾಲದಲ್ಲಿ ಆ ಕೊಳವೆ ಬಾವಿಯಿಂದ ನೀರನ್ನು ಆ ಗ್ರಾಮಕ್ಕೆ ಕೊಡುತ್ತೇನೆ ಎನ್ನತಕ್ಕ ಮುಚ್ಚಳಿಕೆ ಬರೆದುಕೊಡಬೇಕು. ಬರೆದುಕೊಟ್ಟರೆ ಅವರಿಗೆ ರೈತರು ಹಾಕಿರತಕ್ಕ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕೊಡಬಹುದು ಎಂದು ಇವತ್ತಿನ ದಿವಸ ಆಗಿದೆ. ಅದನ್ನು ಗಮನಿಸಿ, ನಾನು ಮಾನ್ಯ ಮುಖ್ಯಮಂತ್ರಿಗಳವರಿಗೆ ಪತ್ರವನ್ನು ಬರೆದಿದ್ದೇನೆ. ತಮಗೆ ಬರೆದಿರತಕ್ಕದ್ದು ಜ್ಞಾಪಕ ಇಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಗದವನ್ನು ಬರೆದಿದ್ದೇನೆ. ಅವರಿಂದ ನನಗೆ ಉತ್ತರ ಕೂಡ ಬಂದಿದೆ. ಇದನ್ನು ಗಮನಿಸಲಾಗುತ್ತಿದೆ ಎನ್ನತಕ್ಕ ಉತ್ತರ ಬಂದಿದೆ. ಇವತ್ತಿನ ದಿವಸ ಇಂಥಹ ಭೀಕರವಾದಂತಹ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣ ಏನು ಅಂದರೆ ಬೆಳಗ್ಗೆ 8ರಿಂದ ಸಾಮಾನ್ಯವಾಗಿ ಸರ್ಕಾರದ ರಿಗ್‌ಗಳು ಕೆಲಸ ಮಾಡತಕ್ಕದ್ದು ಸಾಯಂಕಾಲ ಆರು ಗಂಟೆಯವರೆಗೆ. ಆವತ್ತೇನಾದರೂ ನೀರು ಅಲ್ಲಿ ಬಂತು ಎಂದರೆ ಆರು ಗಂಟೆಗೆ ಕೆಲಸ ನಿಲ್ಲಿಸುತ್ತಾರೆ. ರಾತ್ರೋರಾತ್ರಿ ಇನ್ನೊಬ್ಬ ಪಕ್ಕದ ಜಮೀನಿನಲ್ಲಿರತಕ್ಕ ರೈತ ಹೋಗುತ್ತಾನೆ, ಹೈ ಸ್ಪೀಡ್ ರಿಗ್ ತರುತ್ತಾನೆ. ರಾತ್ರೋರಾತ್ರಿ ಇನ್ನೊಂದು ಪಕ್ಕದಲ್ಲಿ ಕೊಳವೆ ಬಾವಿ ಹಾಕುತ್ತಾನೆ. ಮಾರನೆಯ ದಿವಸ ಅದಕ್ಕೆ ಸರ್ವೀಸ್ ಆಗುತ್ತದೆ. ಈ ಕೊಳವೆ ನಾವು ಸರ್ಕಾರದಲ್ಲಿ ಹಾಕಿರತಕ್ಕಂಥ ಕೊಳವೆ ಬಾವಿ ಶಾಶ್ವತವಾಗಿ ಬತ್ತಿ ಹೋಗುತ್ತವೆ. ಈ ಪರಿಸ್ಥಿತಿ ಇವತ್ತು ಅನೇಕ ಕಡೆ ಉಂಟಾಗಿದೆ. ಆದ್ದರಿಂದ ನಾನು ಹೇಳಿರತಕ್ಕಂಥ ಮೊದಲು ಏನು ತೀರ್ಮಾನ ಮಾಡಿರತಕ್ಕದ್ದನ್ನು ಪುನಃ ಜಾರಿಗೆ ಕೊಡಬೇಕು. ಇಲ್ಲದೇ ಇದ್ದರೆ ನೀರಿಗೆ ಬಹಳ ಭೀಕರವಾದಂತಹ ಪರಿಸ್ಥಿತಿ ತತ್‌ಕ್ಷಣದಲ್ಲಿಯೇ ಉಂಟಾಗುತ್ತದೆ. ಇದನ್ನು ಪುನಃ ಕೂಡ ಜಾರಿಗೆ ಕೊಡಬೇಕು ಎನ್ನತಕ್ಕ ಮನವಿಯನ್ನು ಸಹ ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈಗ ಕೆಲವು ಯೋಜನೆಗಳು ಇವೆ. ಅದು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ, ರಾಜ್ಯ ಸರ್ಕಾರದ ಪುರಸ್ಕೃತ ಯೋಜನೆ ಈ ರೀತಿ ಅನೇಕ ಯೋಜನೆ ಇದೆ. ಇದರಲ್ಲಿ ಕಿರು ನೀರು ಸರಬರಾಜು ಯೋಜನೆ ಕೂಡ ಉಂಟು. ಮತ್ತೆ ನಾವು ಪೈಪ್ಡ್ ವಾಟರ್ ಸಪ್ಲೈ, ಆಕ್ಸಿಲರೇಟೆಡ್ ಎಂದು ಏನೇನೋ ಅನೇಕ

ಹೆಸರುಗಳನ್ನು ಹೇಳುತ್ತಾರೆ. ನಾನು ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏನಾಗುತ್ತಿದೆ ಅಂದರೆ ಸುಮಾರು ಹತ್ತು ಹನ್ನೆರಡು ವರ್ಷಗಳಾಗಿವೆ ಕೆಲವು ಯೋಜನೆಗಳು ಪ್ರಾರಂಭ ಆಗಿ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿರತಕ್ಕ ಇಡೀ ಯೋಜನೆಗಳ ಚರಿತ್ರೆಯನ್ನು, ಜಾತಕವನ್ನು ಇಲ್ಲಿ ಇಟ್ಟಿದ್ದೇನೆ. ಬಂಗಾರಪೇಟೆ ತಾಲ್ಲೂಕಿನ ಐತಂದಳ್ಳಿ ಮತ್ತು ಸೊಣ್ಣೂರು ಎನ್ನತಕ್ಕಂಥ ಹಳ್ಳಿಗೆ 1992-93ನೇ ಸಾಲಿನಲ್ಲಿ ಒಂದು ಯೋಜನೆ ಪ್ರಾರಂಭ ಆಯಿತು. ಇಲ್ಲಿಯವರೆಗೂ ಕೂಡ ಅದು ಮುಕ್ತಾಯವಾಗಿಲ್ಲ. ಕಾರಣ ಏನು ಅಂದರೆ ಈ ಯೋಜನೆಗಳಿಗೆ ಬಜೆಟ್‌ನಲ್ಲಿ ಹಣ ಇಡುವುದಕ್ಕೆ ಮೊದಲು ಒಂದು ಪದ್ಧತಿಯನ್ನು ಮಾಡಿದ್ದರು. ಐದು ವರ್ಷಕ್ಕೆ ಹಣ ಇಡುತ್ತಾರೆ. ಮೊದಲನೇ ವರ್ಷ ಪಾಯಿಂಟ್‌ಗೆ ಮಾಡತಕ್ಕದ್ದು, ಎರಡನೆಯ ವರ್ಷ ಕೊಳವೆ ಬಾವಿ ಹಾಕತಕ್ಕದ್ದು, ಮೂರನೆಯ ವರ್ಷ ಪೈಪ್‌ಲೈನ್ ಹಾಕತಕ್ಕದ್ದು. ನಾಲ್ಕನೆಯ ವರ್ಷ ಈ ಓವರ್‌ಹೆಡ್ ಟ್ಯಾಂಕಿಗೆ ಪಾಯ ಹಾಕತಕ್ಕದ್ದು. ಐದನೆಯ ವರ್ಷ ಓವರ್ ಹೆಡ್ ಟ್ಯಾಂಕ್ ಕಟ್ಟತಕ್ಕದ್ದು. ಅಷ್ಟರೊಳಗಾಗಿ ಮೊದಲನೇ ವರ್ಷ ಹಾಕಿರತಕ್ಕ ಕೊಳವೆ ಬಾವಿ ಬತ್ತಿ ಹೋಗುತ್ತದೆ. ನೀರು ಇಲ್ಲ. ಆಮೇಲೆ ಸುತ್ತಲೂ ಕೂಡ ಪಾಯಿಂಟ್‌ಗಳನ್ನು ಹುಡುಕತಕ್ಕ ಕೆಲಸ ಇದಾಗುತ್ತಿದೆ. ಅದರಿಂದ ತಾವು ಇದನ್ನು ದಯವಿಟ್ಟು ತೆಗೆದು, ಒಂದು ಕಾಲಾವಧಿ ನಿಗದಿ ಮಾಡಿ. ಈ ವರ್ಷದಲ್ಲಿ ನಿಮ್ಮ ಅಪೆಂಡಿಕ್ಸ್ ಅಲ್ಲಿಗೆ ಬಂದ ತಕ್ಷಣವೇ ನೀವು ಒಂದೇ ವರ್ಷದಲ್ಲಿ ಈ ಯೋಜನೆಗಾಗಿ ಪೂರ್ತಿ ಹಣ ಕೊಟ್ಟು, ಅದನ್ನು ಒಂದೇ ವರ್ಷದಲ್ಲಿ ಆ ಯೋಜನೆಗಳನ್ನು ಕಾರ್ಯಗತ ಮಾಡತಕ್ಕದ್ದಕ್ಕೆ ದಯವಿಟ್ಟು ಕ್ರಮ ತೆಗೆದುಕೊಳ್ಳಿ. ಇಲ್ಲದಿದ್ದರೆ ಐದು ವರ್ಷದಲ್ಲಿ ಯೋಜನೆಯನ್ನು ನೀವು ಒಂದು ಯೋಜನೆಯನ್ನು ಪೂರ್ತಿ ಮಾಡುವುದಕ್ಕೆ ಹೋದರೆ ನೀರೇ ಇಲ್ಲದೇ ಇರತಕ್ಕ ಪರಿಸ್ಥಿತಿ ಆಗುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ತಾವು ಮಾಡಬೇಕು ಎನ್ನುವಂತಹ ಮನವಿಯನ್ನು ಸಹ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಈ ಯೋಜನೆಗಳು ಕೂಡ ಈಗಾಗಲೇ ನನ್ನ ಹತ್ತಿರ ಇದ್ದಾವೆ. ಈ ರೀತಿಯಾಗಿ ಪೂರ್ತಿ ಆಗದೇ ಇರತಕ್ಕ ಯೋಜನೆಗಳಿಗೆ ಇವತ್ತು ಎಷ್ಟು ಹಣ ಬೇಕಾಗುತ್ತದೆ? ಇದನ್ನು ಪೂರ್ತಿಗೊಳಿಸಬೇಕಾಗಿರುವುದಕ್ಕೆ ಅಂದರೆ 9.29 ಕೋಟಿ ರೂಪಾಯಿಗಳಷ್ಟು ಹಣಬೇಕು. 9.29 ಕೋಟಿ ರೂಪಾಯಿಗಳು ಆನ್ ಗೋಯಿಂಗ್ ಸ್ಕೀಮನ್ನು ಕಂಪ್ಲೀಟ್ ಮಾಡುವುದಕ್ಕೆ ಬೇಕು. ಹಣ ಪೂರ್ತಿಯಾಗಿ ಬಿಡುಗಡೆ ಮಾಡಬೇಕು ಎಂದು ಹೇಳುವುದು ಒಂದಲ್ಲದೇ ಸುಮಾರು 1.3 ಕೋಟಿ ರೂಪಾಯಿಯಷ್ಟು ಬಿಲ್‌ಗಳು ನಮ್ಮಲ್ಲಿ ಇವತ್ತು ಬಾಕಿ ಇರತಕ್ಕದ್ದು ಇದ್ದಾವೆ. ನಾನಾ ಯೋಜನೆಗಳಲ್ಲಿ ಇವು ಬಾಕಿ ಇವೆ. ಇವು ಏಕೆ ಆಗುತ್ತಿಲ್ಲ ಅಂದರೆ ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆ ಆಗದೇ ಇರುವುದರಿಂದ, ಅವರು ಯಾರಿಗೆ ಕಂಟ್ರಾಕ್ಟರ್ ಕೊಟ್ಟಿರುತ್ತಾರೋ ಅಥವಾ ಸಪ್ಲೈ ಮಾಡಿರುತ್ತಾರೋ ಅವರಿಗೆ ಬಿಲ್ ಸಮಯಕ್ಕೆ ಸರಿಯಾಗಿ ಪಾವತಿ ಆಗದೇ ಇರುವ ಕಾರಣದಿಂದ ಅವರು ಯಾರೂ ಕೂಡ ಕೆಲಸ ಮಾಡುವುದಿಲ್ಲ. ಈ ಹಣವನ್ನು ದಯವಿಟ್ಟು ಬಿಡುಗಡೆ ಮಾಡಬೇಕು ಎನ್ನತಕ್ಕ ಮನವಿಯನ್ನು ಮಾನ್ಯ

ಗ್ರಾಮೀಣಾಭಿವೃದ್ಧಿ ಮಂತ್ರಿಗಳಲ್ಲಿ ವಿನಂತಿಸುತ್ತೇನೆ. ಅದನ್ನು ತಾವು ಮಾನ್ಯ ಕಂದಾಯ ಮಂತ್ರಿಗಳಿಂದ ಕೊಡಿಸುತ್ತೀರೋ, ತಾವು ಕೊಡಿಸುತ್ತೀರೋ ಗೊತ್ತಿಲ್ಲ. ಅಥವಾ ತಮ್ಮ ಹಿಂದೆ ಕುಳಿತಿರತಕ್ಕಂಥ ನಗರಾಭಿವೃದ್ಧಿ ಮಂತ್ರಿಗಳು ಕೊಡುತ್ತಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಇವತ್ತಿನ ದಿವಸ ಸುಮಾರು 10 ಕೋಟಿ ರೂಪಾಯಿ ಚಿಲ್ಲರೆ ಅಂದರೆ ಸುಮಾರು 11 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಸ್ವಲ್ಪ ಕೆಲಸ ಕೂಡ ಆಗುತ್ತದೆ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಪುನಃ ಕೂಡ ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡತಕ್ಕದ್ದು ಏನು ಅಂದರೆ ನಮ್ಮ ಜಿಲ್ಲೆಯಲ್ಲಿ ಮೂರು ಪಟ್ಟಣಗಳಿಗೆ ಕೆರೆಗಳ ಮೂಲಕ ನೀರು ಸರಬರಾಜು ಆಗುತ್ತಿದೆ. ಒಂದು ಚಿಂತಾಮಣಿ, ಇನ್ನೊಂದು ಕೋಲಾರ, ಮತ್ತೊಂದು ಕೆಜಿಎಫ್. ನೀರು ಸರಬರಾಜು ಮಾಡುತ್ತಿರತಕ್ಕಂಥ ಆ ಕೆರೆಗಳಲ್ಲಿ ಇವತ್ತು ನೀರು ಇಲ್ಲ. ಗುಬ್ಬಚ್ಚಿ ಕುಡಿಯುವುದಕ್ಕೂ ನೀರು ಇಲ್ಲ. ಅದರಿಂದ ಇವತ್ತು ಹೂಳು ಎತ್ತುವುದಕ್ಕೆ ನಿಮಗೆ ಹಣ ಕೊಡಿ ಎಂದು ಹೇಳಿ ನಿಮ್ಮನ್ನು ಯಾವ ವಿಧದಲ್ಲಿ ಕೇಳಿದರೂ ಕೂಡ, ನೀವು ಅದಕ್ಕೆ ಇವತ್ತಿನವರೆಗೆ ಅದಕ್ಕ ಅಸ್ತು ಎನ್ನತಕ್ಕದ್ದು ನಿಮ್ಮ ಬಾಯಿಂದ ಬಂದಿಲ್ಲ. ಹಣ ಕೂಡ ಬಿಡುಗಡೆ ಆಗಿಲ್ಲ. ಕೊಡುತ್ತೇವೆಂದು ಹೇಳಿ, ಇಲ್ಲವಾದರೆ ಕೊಡುವುದಿಲ್ಲವೆಂದಾದರೂ ಹೇಳಿ. ಈ ಮಾತನ್ನು ನಾವು ಜನತೆಗೆ ಹೇಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಯಾವ ಜನರ ಹತ್ತಿರ ಹೇಳುತ್ತೀರಿ? ಈಗ ನೀವು ಕೈ ಎತ್ತಿ ಹೇಳುತ್ತಿದ್ದೀರಲ್ಲ. ಆ ಐದು ವರ್ಷ ಕೈ ಹೀಗೆಯೇ ಇದ್ದವಾ?

ಶ್ರೀ ವಿ.ಮುನಿಯಪ್ಪ: ಸಮಸ್ಯೆ ಐದು ವರ್ಷಗಳಿಂದಲೂ ಇದೆ. ಇದು ಗಂಭೀರವಾದಂತಹ ವಿಚಾರ. ಅದರ ಬಗ್ಗೆ ಹೇಳಬೇಕು.

(ಗೊಂದಲ)

ಶ್ರೀ ಸಿ.ಭೈರೇಗೌಡ: ತಯಾರಿದ್ದರೆ ಬನ್ನಿ.

ಶ್ರೀ ಎಚ್.ಸಿ.ಬಸವರಾಜ್: ಇದು ಗಂಡ ಹೆಂಡತಿ ಜಗಳ ಇದ್ದ ಹಾಗೆ. ಐದು ವರ್ಷಗಳಿಂದ ಇತ್ತೋ ಐವತ್ತು ವರ್ಷಗಳಿಂದ ಇತ್ತೋ...

(ಗೊಂದಲ)

ಶ್ರೀ ಸಿ.ಭೈರೇಗೌಡ: ಐದು ವರ್ಷಗಳಿಂದ ಏನು ಮಾಡಿದ್ದೇವೆ ಎನ್ನುವುದನ್ನು ತೋರಿಸಿಕೊಡುತ್ತೇವೆ. ಕಳೆದ ಬಜೆಟ್‌ನಲ್ಲಿ ಐದು ನೂರು ಕೋಟಿ ರೂಪಾಯಿ ಹಣ ಇಟ್ಟಿದ್ದೆವು. ಪಾಪ ಬಜೆಟ್ ಪುಸ್ತಕ ತೆಗೆಯುವುದಕ್ಕೆ ನಿಮಗೆ ಬಿಡುವು ಇನ್ನೂ ಆಗಿಲ್ಲ. ಪುಸ್ತಕ ತೆಗೆದು ನೋಡಿ. ಮಾನ್ಯ ತಿಮ್ಮಪ್ಪನವರೇ ಬಜೆಟ್ ಪುಸ್ತಕ ಓದಿ ನೋಡಿ. ತೆಗೆದು ನೋಡಿ ಆಮೇಲೆ ಮಾತನಾಡಿದರೆ ನೀವು ಮಾತನಾಡತಕ್ಕದ್ದಕ್ಕೆ ಅರ್ಥ ಬರುತ್ತದೆ

ಎಂದು ಹೇಳುತ್ತೇನೆ. ಇವತ್ತಿನ ದಿವಸ ಇಷ್ಟು ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಇದನ್ನು ತುರ್ತಾಗಿ ಆಗಬೇಕಾದ್ದು ಮಾತ್ರ ನಾನು ಹೇಳಿದ್ದೇನೆ. ಮುಂದೆ ಬರತಕ್ಕಂಥ ಭೀಕರವಾದಂತಹ ಪರಿಸ್ಥಿತಿ ನಿರ್ಮಾಣ ಆಗಬಾರದು ಎಂದು ನಾನು ಸೂಕ್ಷ್ಮವಾಗಿ ಸಮಸ್ಯೆಯನ್ನು ತಮ್ಮ ಮೂಲಕ ಸರ್ಕಾರದ ಮುಂದೆ ಇಟ್ಟಿದ್ದೇನೆ, ತಾವು ವೇಳೆಯನ್ನು ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಗಳು.

ಛೇರ್ಮನ್: ಕೊನೆಯದಾಗಿ ಇಲ್ಲಿ ಈ ಕಡೆ ಯಾರೂ ಮಾತನಾಡದೇ ಇದ್ದುದರಿಂದ ನಾನು ಇಲ್ಲಿ ಕುಳಿತು ಕ್ಷೇತ್ರದ ಬಗ್ಗೆ ಏನೂ ಹೇಳಿಲ್ಲ ಎನ್ನುವ ದೃಷ್ಟಿಯಿಂದ, ಈ ಕಡೆಯವರು ಹೇಳಲಿ.

+ಶ್ರೀ ಕೆ.ಬಿ.ಕೋಳಿವಾಡ್(ರಾಣಿಬೆನ್ನೂರು): ಮಾನ್ಯ ಅಧ್ಯಕ್ಷರೆ, ಉಳಿದ ವಿಷಯಗಳ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಸದನದ ಗಮನವನ್ನು ಸೆಳೆದಿದ್ದಾರೆ. ಮಂತ್ರಿಗಳ ಗಮನವನ್ನೂ ಸೆಳೆದಿದ್ದಾರೆ. ರಾಣಿಬೆನ್ನೂರು ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಮುದಯನೂರು ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನು ತಂದು ನೀರನ್ನು ಒದಗಿಸತಕ್ಕಂಥ ಒಂದು ಯೋಜನೆ 1991-92ರಲ್ಲಿ ಮಂಜೂರಾಯಿತು. ಹಾಗೆ ಮಂಜೂರಾದಾಗ ಅದರ ಎಸ್ಟಿಮೇಟೆಡ್ ಕಾಸ್ಟ್ 4 ಕೋಟಿ 80 ಲಕ್ಷ ರೂಪಾಯಿಗಳು ಇತ್ತು. ಆದರೆ ಒಬ್ಬ ಕಂಟ್ರಾಕ್ಟರ್‌ನ ತಪ್ಪಿನಿಂದ, ಒಬ್ಬ ಕಂಟ್ರಾಕ್ಟರ್ ಅನ್ನು ರಕ್ಷಣೆ ಮಾಡುವುದಕ್ಕೋಸ್ಕರ ಸುಮಾರು ಆರು ವರ್ಷಗಳ ಕಾಲ ಆ ಸ್ಕೀಮ್ ಹಾಗೆಯೇ ತಳ್ಳಿಕೊಳ್ಳುತ್ತಾ ಬಂದು ಇವತ್ತು ಅದರ ಎಸ್ಟಿಮೇಟೆಡ್ ಕಾಸ್ಟ್ 20 ಕೋಟಿ ರೂಪಾಯಿಗಳು ಆಗಿದೆ. ಇವತ್ತಿಗಾದರೂ ಸಹ ಆ ಕಂಟ್ರಾಕ್ಟರ್ ಅನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿದ್ದೇವೆ. ಹೊಸ ಟೆಂಡರ್ ಕರೆದು ಹೊಸ ಕಂಟ್ರಾಕ್ಟರ್‌ಗೆ ಕೊಡುತ್ತೇವೆ ಎಂದು ಮಾನ್ಯ ಮುಖ್ಯ ಮುಖ್ಯಮಂತ್ರಿಗಳು ಹಾವೇರಿಗೆ ಬಂದು ರಿವ್ಯೂ ಮಾಡುವ ಹೊತ್ತಿನಲ್ಲಿ, ಈ ಅಧಿಕಾರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಇವತ್ತಿಗೂ ಸಹಿತ ಆ ಕಂಟ್ರಾಕ್ಟರ್ ಅನ್ನು ಬಿಟ್ಟು ಬೇರೆ ಕಂಟ್ರಾಕ್ಟರ್‌ಗೆ ಕೊಡತಕ್ಕಂಥ ವ್ಯವಸ್ಥೆ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮ ಅಕ್ಟೋಬರ್ ತಿಂಗಳೊಳಗಾಗಿ ರಾಣಿಬೆನ್ನೂರು ನಗರಕ್ಕೆ ನೀರನ್ನು ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರೂ ಇವತ್ತು ಆ ಕೆಲಸ ಪ್ರಾರಂಭ ಆಗಿಲ್ಲ. ಈ ರೀತಿ ಯೋಜನೆಗಳು ಮುಂದುವರಿಯುತ್ತಾ ಹೋದರೆ 4 ಕೋಟಿ 80 ಲಕ್ಷ ರೂಪಾಯಿ ಇದ್ದಂತಹ ಒಂದು ಯೋಜನೆ ಇವತ್ತು 20 ಕೋಟಿ ರೂಪಾಯಿ ಆಗಿದೆ. ಸುಮಾರು 14-15 ಕೋಟಿ ರೂಪಾಯಿ ಒಬ್ಬ ಕಂಟ್ರಾಕ್ಟರ್‌ನ ರಕ್ಷಣೆಗೋಸ್ಕರ ಸರ್ಕಾರದ ಬೊಕ್ಕಸ ಹಾಳಾಯಿತಲ್ಲ, ಇದಕ್ಕೆ ಯಾರು ಜವಾಬ್ದಾರರು? ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಮತ್ತು ಈ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸುವ ಸಲುವಾಗಿ ಅಕ್ಟೋಬರ್ ತಿಂಗಳೊಳಗಾಗಿ ಈ ಯೋಜನೆ ಪೂರ್ಣವಾಗುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕೆಂದು ಈ ಮೂಲಕ ನಾನು ವಿನಂತಿಸುತ್ತೇನೆ.

+ಶ್ರೀ ಕರಿಯಣ್ಣ(ಹೊಳೆಹೊನ್ನೂರು): ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಹೊಳೆಹೊನ್ನೂರು ಕೇಂದ್ರವಾದ ಸ್ಥಾನ. ನಮ್ಮಲ್ಲಿ 21 ಗ್ರಾಮ ಪಂಚಾಯತಿಯ ಸದಸ್ಯರು ಇದ್ದಾರೆ. ಅಲ್ಲಿ ಎಂಟು ದಿವಸಕ್ಕೆ ಒಂದು ಸಾರಿ ನೀರು ಕುಡಿಯತಕ್ಕಂಥ ಪರಿಸ್ಥಿತಿ ಸೃಷ್ಟಿ ಆಗಿದೆ. ಅದಕ್ಕೆ ವಿಶೇಷವಾಗಿ ಒಂದು ಯೋಜನೆ ಮಾಡಿ ತಾವು ನೀರು ತರಬೇಕು. ನಮ್ಮಲ್ಲಿ ಎರಡು ನದಿ ಹೋಗುತ್ತದೆ. ತುಂಗಾ ನದಿ, ಭದ್ರಾ ನದಿ ಎರಡೂ ಸೇರಿ. ತುಂಗಾ ನದಿಯಿಂದ ನೀರು ತಂದಿರುವುದು. ಆದರೆ ಇವತ್ತಿನವರೆಗೂ ಎಂಟು ದಿವಸಕ್ಕೊಮ್ಮೆ ನೀರು ಕುಡಿಯತಕ್ಕಂಥ ಪರಿಸ್ಥಿತಿ ಆಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಹರಿಸಬೇಕು. ನಾನು ಸಹಿತ ಐದಾರು ಸಾರಿ ಅವರ ಗಮನಕ್ಕೆ ತಂದಿದ್ದೇನೆ ಮತ್ತು ಬರೆಸಿದ್ದೇನೆ. ಇದುವರೆಗೆ ಸಹಿತ ತುಂಬಾ ಕಷ್ಟ ಆಗಿದೆ.

ಶ್ರೀ ಎಸ್.ಸುರೇಶ್ ಕುಮಾರ್: ಅವರು ಎರಡು ನದಿಗಳು ಹರಿಯುತ್ತದೆ ಎಂದು ಹೇಳಿದರು. ತುಂಗಾ ಮತ್ತು ಭದ್ರಾ ನದಿ ಹರಿಯುತ್ತದೆ ಎಂದು ಹೇಳಿದರು. ಎಂಟು ದಿವಸಕ್ಕೆ ಒಂದು ಸಾರಿ ಕುಡಿಯುವ ನೀರು ಸಿಗುತ್ತದೆ ಎಂದು ಹೇಳಿದ್ದಾರೆ. ಕಾರಣ ಏನು?

ಶ್ರೀ ಕರಿಯಣ್ಣ: ಅಲ್ಲಿಂದ ನೀರು ತರುವುದಕ್ಕೆ ಯಾವ ಸರ್ಕಾರವೂ ಗಮನವನ್ನೇ ಹರಿಸಿಲ್ಲ. ಹಿಂದಿನ ಸರ್ಕಾರನೂ ಗಮನ ಹರಿಸಿಲ್ಲ. ಈ ಸರ್ಕಾರಕ್ಕೂ ನಾವು ಮನವಿ ಮಾಡಿದ್ದೇವೆ. ಈಗ ಅದನ್ನು ಮಾಡಿಕೊಡಬೇಕು ಎಂದು ಕೇಳುತ್ತಿದ್ದೇವೆ. ದೊಡ್ಡ ಗ್ರಾಮ ಪಂಚಾಯತಿ ಅದು. ಟೌನ್ ಪಂಚಾಯತಿ ಆಗತಕ್ಕದ್ದು ಇದೆ. 25 ಸಾವಿರ ಪಾಪ್ಯುಲೇಷನ್ಸ್ ಇದೆ. ಹೊಳೆಯೂ ಇದೆ. ನೀರು ತರಬೇಕು. ಮೂರು ಇಂಚು ಪೈಪ್ ಹಾಕಿ ತಂದಿದ್ದಾರೆ. ನೀರು ಹೊಡೆಯುವುದಕ್ಕೆ ಆಗುವುದಿಲ್ಲ. ಪರಿಸ್ಥಿತಿ ಕೆಟ್ಟು ಹೋಗಿದೆ. ಅದಕ್ಕಾಗಿ ನಾನು ವಿಶೇಷವಾಗಿ ಎಸ್ಟಿಮೇಟನ್ನು ತಯಾರು ಮಾಡಿಸಿ, ಇಂಜಿನಿಯರ್‌ನಿಂದ ರೆಕ್ಮಂಡ್ ಮಾಡಿಸಿ, 65 ಲಕ್ಷ ರೂಪಾಯಿ ತಾತ್ಕಾಲಿಕವಾಗಿ ಮಾಡುವುದಕ್ಕಾಗಿ ಬೇಕಾಗುತ್ತದೆ. ಎಂದು ಹೇಳಿ ನಾವು ಕಳುಹಿಸಿಕೊಟ್ಟಿದ್ದೇವೆ. ಆದರೆ ಅಷ್ಟೊಂದು ಹಣ ಜಿಲ್ಲಾ ಪಂಚಾಯತ್‌ನಲ್ಲಿಲ್ಲ. ಜಿಲ್ಲಾ ಪಂಚಾಯತ್‌ನಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ವಿಶೇಷವಾದಂತಹ ಹಣದಿಂದಲೇ ಕೊಡಬೇಕಾಗುತ್ತದೆ. ಇದು ನನ್ನ ಮನವಿ ಅವರಲ್ಲಿ. ಮತ್ತೊಂದು ವಿಚಾರ ಎಂದರೆ ಏನು ಪ್ರಪಂಚ ಬ್ಯಾಂಕ್ ಸ್ಕೀಮ್ ಕೊಟ್ಟಿದ್ದರೋ ಎಲ್ಲಾ ವರ್ಲ್ಡ್ ಬ್ಯಾಂಕ್ ಯೋಜನೆಯಲ್ಲಿ ಕಳಪೆ ಕೆಲಸ ಮಾಡಿದ್ದಾರೆ. ಪೈಪ್ ಅನ್ನು ಕ್ವಾಲಿಟಿ ಪೈಪ್ ಎಂದು ತಂದು ಹಾಕಿ ದಪ್ಪ ಗೇಜನ್ನು ತಂದು ಹಾಕಿದ್ದಾರೆ. ಆದರೆ ನೀರು ಅಲ್ಲಿ ಬಿಟ್ಟ ತಕ್ಷಣವೇ ಅದು ಒಡೆದು ಸಿಡಿದು ಹೋಗಿ ಅಲ್ಲಲ್ಲೇ ಹರಿದು, ಯಾವ ಟ್ಯಾಂಕಿಗೂ ನೀರು ಏರುತ್ತಾ ಇಲ್ಲ. ನನ್ನ ಕ್ಷೇತ್ರದ ಏಳು ಗ್ರಾಮ ಪಂಚಾಯತಿಯ, ಏಳು ವಿಲೇಜ್‌ನಲ್ಲಿ ಇವತ್ತು ಕುಡಿಯುವ ನೀರಿನ ಯೋಜನೆಗಳನ್ನು ವರ್ಲ್ಡ್ ಬ್ಯಾಂಕ್ ಯೋಜನೆಯಲ್ಲಿ ಮಾಡಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಜಿಲ್ಲಾ ಮಂತ್ರಿಗಳು ಅದನ್ನು ರಿವ್ಯೂ

ಮಾಡಿದಾಗ ಎಕ್ಸಿಕ್ಯುಟೀವ್ ಇಂಜಿನಿಯರ್, ವರ್ಲ್ಡ್ ಬ್ಯಾಂಕ್‌ನವರನ್ನೂ ಕರೆಸಿದ್ದರು. ಮತ್ತು ಹಾಕಿದಂತಹ ಪೈಪನ್ನೂ ತರಿಸಿದ್ದರು. ಜಿಲ್ಲಾ ಪರಿಷತ್ ಅಧ್ಯಕ್ಷರೂ ಪೈಪ್ ತಂದಿದ್ದರು. ಎಲ್ಲಾ ಲೋ ಕ್ವಾಲಿಟಿ ಪೈಪ್‌ಹಾಕಿ ಇವತ್ತು ಆ ಯೋಜನೆಗೆ ಯಾವುದೇ ಒಂದು ಅರ್ಥ ಇಲ್ಲದೇ ಇರುವ ರೀತಿಯಲ್ಲಿ ಆಗಿದೆ. ಅದರ ಬಗ್ಗೆ ವಿಶೇಷವಾದಂತಹ ಗಮನವನ್ನು ಮಾನ್ಯ ಮಂತ್ರಿಗಳು ಕೊಡಬೇಕು ಮತ್ತು ಅದನ್ನು ತನಿಖೆ ಮಾಡಿ ಆದಷ್ಟು ಜಾಗ್ರತೆ ಕಟ್ಟಿರತಕ್ಕಂಥ ಟ್ಯಾಂಕ್‌ಗಳಿಗೆ ನೀರು ಹೋಗುವಂತಹ ರೀತಿಯಲ್ಲಿ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಛೇರ್ಮನ್: ಕೊನೆಯದಾಗಿ ನಾನೊಂದು ಮಾತು ಹೇಳುತ್ತೇನೆ. ನನಗೆ ಸಂಬಂಧಪಟ್ಟಂತೆ ಮಾತುಗಳನ್ನು ನಾನು ಹೇಳಬಯಸುತ್ತೇನೆ. ನೆದರ್‌ಲ್ಯಾಂಡ್ಸ್ ಯೋಜನೆ ನಮ್ಮಲ್ಲಿ ಬಂದಿದೆ. ಸುಮಾರು 27 ಹಳ್ಳಿಗಳಿಗೆ ನೀರನ್ನು ಒದಗಿಸಿಕೊಡಲು ಇವತ್ತು ಕಾರ್ಯ ನಡೆಯುತ್ತಿದೆ. ಅದು ಒಂದು ಸಂದರ್ಭದಲ್ಲಿ ಹೋಗಿತ್ತು. ಅದು ಕ್ಯಾನ್ಸಲ್ ಆಗಿ ಅಧ್ಯಕ್ಷರು ವಾಪಸ್ ಹೋಗುವಂತಹ ಪರಿಸ್ಥಿತಿ ಇತ್ತು. ಆದರೆ ನಾವು ಹಿಂದಿನ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕು. ಅದು ಮಾಡಿತ್ತು ಆದರೆ ಕಾಲಮಿತಿಯಲ್ಲಿ ಏನು ಕಾರ್ಯ ಮುಗಿಸಬೇಕಿತ್ತು ಆ ಕಾಲ ಮಿತಿಯಲ್ಲಿ ಸ್ವಲ್ಪ ವಿಳಂಬ ಆಗಿದೆ. ಅಲ್ಲಿ ಬ್ಲಾಕಿಷ್ ಸ್ಟೋನ್ ಇರುವುದರಿಂದ, ಕುಡಿಯಲು ಜನಗಳಿಗೂ ನೀರಿಲ್ಲ, ದನಗಳಿಗೂ ಇಲ್ಲ. ಅಂತಹ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಆದಷ್ಟು ಬೇಗ ಇದನ್ನು ಕಾರ್ಯಗತ ಮಾಡಬೇಕು. ಕ್ವಾಲಿಟಿ ವರ್ಕನ್ನು ಮಾಡಬೇಕು. ಮತ್ತು ವಿಶೇಷವಾಗಿ ಕೆರೆಗಳು ಇದ್ದಂತಹ ಪ್ರದೇಶದಲ್ಲಿ ಇರುವಂತಹ ನೀರು ಬಹಳ ಹಾಳಾಗಿ ಕೆಟ್ಟು ಹೋಗಿ, ಒಂದು ತರಹ ಕುಡಿಯಲಿಕ್ಕೂ ಅಯೋಗ್ಯ ಆಗುವಂತಹ ಪರಿಸ್ಥಿತಿ ಇದೆ. ಅಂಥ ಕಡೆಗಳಲ್ಲಿಯೂ ಸಹಿತ ಟ್ಯಾಂಕಿನ ಮೂಲಕ ನೀರನ್ನು ಕೊಡಬೇಕೆಂದು ಹೇಳಿ ಬಹುತೇಕ ಎಲ್ಲರೂ ತಮ್ಮ ತಮ್ಮ ಕ್ಷೇತ್ರದ ವಿಚಾರ ಬಗ್ಗೆ ಹೇಳಿದ್ದಾರೆ. ಈಗ ಒಂದು ಪ್ರಕಟಣೆ ಇದೆ.